ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

Blog: janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 16

ಏಪ್ರಿಲ್ 15, 2012


ಪುಟ 16 ರೂ. 5/-





'ಬಲಿಷ್ಟ ಅಖಿಲ ಭಾರತ ಪಕ್ಷ ಕಟ್ಟೋಣ ಎಡ ಐಕ್ಯತೆ ಬೆಸೆಯೋಣ....'

ಸಿಪಿಐ(ಎಂ) 20ನೇ ಮಹಾಧಿವೇಶನದಲ್ಲಿ ಮೊಳಗಿದ ಘೋಷವಾಕ್ಯ



ಹಣಕಾಸು ಬಂಡವಾಳಿಗರ ಬೆನ್ನು ತಿಕ್ಕುವ ಬಿಜೆಪಿ ಬಜೆಟ್

ಬಗರ್‌ಹುಕುಂ, ಅರಣ್ಯಭೂಮಿ ಸಾಗುವಳಿ ಸಕ್ರಮ...

ಮನೆ-ನಿವೇಶನ, ಭೂಮಿ ಹಕ್ಕಿಗಾಗಿ ಅನಿರ್ದಿಷ್ಟಾವಧಿ ಮಹಾಧರಣ...



ಭೂಸುಧಾರಣೆಯ ಮೂಲ ಆಶಯ ಮಣ್ಣುಪಾಲು ಮಾಡುವ ತಿದ್ದುಪಡಿ ಯತ್ನ

20ನೇ ಮಹಾಧಿವೇಶನಕ್ಕೆ ಮುನ್ನಡೆಯಿರಿ

ಪ್ರಕಾಶ್ ಕಾರಟ್

ಸಿಪಿಐ(ಎಂ)ನ 20ನೇ ಮಹಾಧಿವೇಶನದ ಹಿನ್ನೆಲೆಯಲ್ಲಿ ನಮ್ಮ ಮುಂದಿರುವ ಪ್ರಮುಖ, ರಾಜಕೀಯ, ಸಂಘಟನಾತ್ಮಕ ಸವಾಲುಗಳೇನು ಎಂದು ವಿವರಿಸುವ ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿಯವರ ಲೇಖನ ನಿಮಗಾಗಿ. (ಮಾರ್ಚ್ 28ರಂದು ಸಿದ್ಧಗೊಂಡ ಲೇಖನ)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ 20ನೇ ಮಹಾಧಿವೇಶನವು 2012ರ ಏಪ್ರಿಲ್ 4 ರಿಂದ 9 ರವರೆಗೆ ಕೇರಳದ ಕೋಜೀಕೋಡ್‌ನಲ್ಲಿ ನಡೆಯಲಿದೆ. ಮಹಾಧಿವೇಶನವು ಮುಂದಿನ ರಾಜಕೀಯ ಕಾರ್ಯತಂತ್ರವನ್ನು ನಿರ್ಧರಿಸುವ ಪಕ್ಷದ ಉನ್ನತ ಸಮಿತಿಯಾಗಿದೆ. ಅದಲ್ಲದೆ, ಅದು ಹಿಂದಿನ ಮಹಾಧಿವೇಶನದ ನಂತರದ ಕೆಲಸ ಕಾರ್ಯಗಳನ್ನು ವಿಮರ್ಶೆ ಮಾಡುವ ಹಾಗೂ ಪಕ್ಷದ ಸಂಘಟನಾತ್ಮಕ ಕೆಲಸಗಳ ಗೊತ್ತುಗುರಿಯನ್ನು ನಿರ್ಧರಿಸುವ ವೇದಿಕೆ ಕೂಡ ಹೌದು. ಪ್ರಮುಖ ಸೈದ್ಧಾಂತಿಕ ವಿಷಯಗಳನ್ನು ಕೂಡ ಅಲ್ಲಿ ಚರ್ಚಿಸಲಾಗುತ್ತದೆ.

19ನೇ ಮಹಾಧಿವೇಶನದ ನಂತರದ ನಾಲ್ಕು ವರ್ಷಗಳ ಅವಧಿಯು, ಮುಂದುವರಿದ ಬಂಡವಾಳಶಾಹಿ ದೇಶಗಳ ಆರ್ಥಿಕತೆಯನ್ನು ಕವಿದಿರುವ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟನ್ನು ಕಂಡಿದೆ. ಈ ದೇಶಗಳು ಅನುಸರಿಸುತ್ತಿರುವ ನವ ಉದಾರವಾದಿ ನೀತಿಗಳಿಂದಾಗಿ ಅಲ್ಲಿ ನಿರುದ್ಯೋಗ ಹೆಚ್ಚಾಗಿದೆ ಮತ್ತು ಜನಸಾಮಾನ್ಯರ ಬದುಕಿನ ಮೇಲೆ ತೀವ್ರತರದ ದಾಳಿಗಳಾಗುತ್ತಿವೆ. ಬಂಡವಾಳಶಾಹಿ ವ್ಯವಸ್ಥೆಯು ಸಮಸ್ಯೆಗಳಿಲ್ಲದ ಮತ್ತು ಶೋಷಣೆಯಿಲ್ಲದ ವ್ಯವಸ್ಥೆಯಾಗಲು ಸಾಧ್ಯವಿಲ್ಲ ಎಂಬುದನ್ನು ಈ ಬೆಳವಣಿಗೆ ಮತ್ತೊಮ್ಮೆ ಸಾಬೀತುಪಡಿಸಿದೆ. ಇತ್ತೀಚಿನ ದಿನಗಳಲ್ಲಿ ಹೆಚ್ಚೆಚ್ಚು ಜನರು ತಮ್ಮ ಹಕ್ಕುಗಳನ್ನು ಮತ್ತು ಬದುಕನ್ನು ಉಳಿಸಿಕೊಳ್ಳಲು ಹೋರಾಟದ ಹಾದಿಯನ್ನು ತುಳಿಯುತ್ತಿದ್ದಾರೆ, ಚಳುವಳಿಗಳನ್ನು ಸೇರುತ್ತಿದ್ದಾರೆ. ನವ ಉದಾರವಾದಿ ನೀತಿಗಳ ವಿರುದ್ಧ ಪ್ರತಿರೋಧ ಒಡ್ಡುವ ಮತ್ತು ಜಾಗತಿಕ ಮಟ್ಟದಲ್ಲಿ ಎಡ ಪರ್ಯಾಯವನ್ನು ಕಟ್ಟಿ ಬೆಳೆಸುವ ಸಾಧ್ಯತೆಯನ್ನು ಹೆಚ್ಚು ಮಾಡಿದೆ. ದಕ್ಷಿಣ ಅಮೆರಿಕಾದ ದೇಶಗಳಲ್ಲಿ ಎಡಶಕ್ತಿಗಳು ಮುನ್ನಡೆ ಸಾಧಿಸಿರುವುದೇ ಇದಕ್ಕೆ ಸಾಕ್ಷಿ.



ನವ ಉದಾರವಾದಿ ನೀತಿಗಳ ವಿರುದ್ಧ ಹೋರಾಟಗಳು

ರಾಷ್ಟ್ರಮಟ್ಟದಲ್ಲಿ, ಕಳೆದ ಎರಡು ದಶಕಗಳಿಂದ ಅನುಸರಿಸಿಕೊಂಡು ಬರುತ್ತಿರುವ ಮತ್ತು ಯುಪಿಎ ಸರ್ಕಾರವು ತೀವ್ರಗತಿಯಲ್ಲಿ ಜಾರಿ ಮಾಡುತ್ತಿರುವ ಉದಾರವಾದಿ ನೀತಿಗಳಿಂದಾಗಿ ಎರಡು ತೀವ್ರ ಭಿನ್ನರೀತಿಯ ಭಾರತ ಸೃಷ್ಟಿಯಾಗಿದೆ. ಮೊದಲ ಭಾರತ ಯಾವುದೆಂದರೆ ಈ ನೀತಿಗಳಿಂದ ಪ್ರಯೋಜನ ಪಡೆದಿರುವ ದೊಡ್ಡ ಬಂಡವಾಳಿಗರು-ಸ್ವದೇಶಿ ಹಾಗೂ ವಿದೇಶಿ-ಹಣಕಾಸು ಹಾಗೂ ಜಮೀನು (ಸ್ಥಿರಾಸ್ತಿ) ಸಟ್ಟಾ ವ್ಯಾಪಾರಿಗಳು ಮತ್ತು ದೇಶದ ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡಲು ಪರವಾನಗಿ ಪಡೆದಿರುವವರು. ಎರಡನೇ ಭಾರತದಲ್ಲಿ ಕೋಟಿಗಟ್ಟಲೆ ಇರುವ ಸಾಮಾನ್ಯ ಜನರು-ಕಾರ್ಮಿಕರು, ರೈತರು, ಕೃಷಿ ಕೂಲಿಗಾರರು, ಸಣ್ಣಪುಟ್ಟ ವ್ಯಾಪಾರಿಗಳು, ಕುಶಲಕರ್ಮಿಗಳು ಮತ್ತು ಅತಿ ಕಡಿಮೆ ಸಂಬಳ ಪಡೆಯುವವರು. ಅವರ ನಡುವೆ ಸಾಮಾಜಿಕ ತುಳಿತಕ್ಕೊಳಗಾಗಿರುವ ದಲಿತರು, ಆದಿವಾಸಿಗಳು, ಮಹಿಳೆಯರು ಹಾಗೂ ಅಲ್ಪಸಂಖ್ಯಾತರು ಇದ್ದಾರೆ. ಅವರೆಲ್ಲರೂ ಬೆಲೆಏರಿಕೆ, ನಿರುದ್ಯೋಗ, ಕಾರ್ಷಿಕ ಬಿಕ್ಕಟ್ಟು ಮತ್ತು ಪಾರಂಪರಿಕ ಜೀವನೋಪಾಯಗಳಿಂದ ವಂಚಿತರಾಗಿ ಬಾಧೆ ಪಡುತ್ತಿದ್ದಾರೆ. ಕೆಲಸ ಸಿಕ್ಕವರೂ ಕೂಡ ಅತಿಕಡಿಮೆ ಕೂಲಿ ಪಡೆದು ಯಾವುದೇ ಸಾಮಾಜಿಕ ಭದ್ರತೆ ಇಲ್ಲದೆ ನರಳುತ್ತಿದ್ದಾರೆ. ಈ ವಿಭಾಗದ ಜನಗಳನ್ನು ಸಂಘಟಿಸಿ ಅವರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟಗಳು ಮತ್ತು ಚಳುವಳಿಗಳನ್ನು ಕಟ್ಟುವುದು ಹೇಗೆ ಎಂಬುದನ್ನು ಪಕ್ಷದ ಮಹಾಧಿವೇಶನ ಚರ್ಚೆ ಮಾಡುತ್ತದೆ. ದುಡಿಯುವ ಜನರ ಐಕ್ಯತೆಯನ್ನು ಮತ್ತು ಅವರ ಐಕ್ಯ ಚಳುವಳಿಗಳನ್ನು ಬೆಳೆಸುವುದು ಮುಖ್ಯ ಕಾರ್ಯಸೂಚಿಯಾಗಿರುತ್ತದೆ.

ಜಾತಿ, ಲಿಂಗ ಹಾಗೂ ಕೋಮುವಾದ ಮುಂತಾದ ಸಾಮಾಜಿಕ ದಬ್ಬಾಳಿಕೆಗಳಿಗೆ ಒಳಗಾಗಿರುವವರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಡಲು ಪಕ್ಷ ಶ್ರಮಿಸುತ್ತಿದೆ. ದಬ್ಬಾಳಿಕೆಗಳ ವಿರುದ್ಧದ ಇಂತಹ ಹೋರಾಟಗಳು ವಿಸ್ತಾರಗೊಳ್ಳಬೇಕು ಹಾಗೂ ಅದು ಎಡ ಮತ್ತು ಪ್ರಜಾಸತ್ತಾತ್ಮಕ ವೇದಿಕೆಗಳ ಭಾಗವಾಗಬೇಕು. ಪಕ್ಷದ ಮಹಾಧಿವೇಶನವು ಈ ವಿಷಯವನ್ನೂ ಚರ್ಚಿಸುತ್ತದೆ.

ಸಿಪಿಐ(ಎಂ) ಸಾಮ್ರಾಜ್ಯಶಾಹಿಗಳ ವಿರುದ್ಧ ಎಡೆಬಿಡದೆ ಹೋರಾಡುವ ಶಕ್ತಿಯಾಗಿ ಹೊರಹೊಮ್ಮಿದೆ. ಇತ್ತೀಚಿನ ವರ್ಷಗಳಲ್ಲಿ, ಯುಪಿಎ ಸರ್ಕಾರವು ಹೇಗೆ ಅಮೆರಿಕಾದೊಂದಿಗೆ ದೀರ್ಘಕಾಲದ ಸೇನಾ ಕಾರ್ಯಚರಣೆ ಕೂಟವನ್ನು ರಚಿಸಿಕೊಂಡು ಸ್ವತಂತ್ರ ವಿದೇಶಾಂಗ ನೀತಿಗೆ ತಿಲಾಂಜಲಿ ಕೊಟ್ಟಿತು ಎಂಬುದನ್ನು ನಾವು ಕಂಡಿದ್ದೇವೆ. ಇದು ನಮ್ಮ ರಾಷ್ಟ್ರೀಯ ಸಾರ್ವಭೌಮತೆಗೆ ದೊಡ್ಡ ಪೆಟ್ಟು ನೀಡಿದೆ ಮತ್ತು ಭಾರತೀಯರ ಹಿತಾಸಕ್ತಿಗೆ ವಿರುದ್ಧವಾದ ಆರ್ಥಿಕ ನೀತಿಗಳನ್ನು ಹೇರಲು ಅವಕಾಶ ಕಲ್ಪಿಸಿದೆ. ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳನ್ನು ಹೇಗೆ ಬಲಗೊಳಿಸಬಹುದು ಮತ್ತು ನಮ್ಮ ರಾಷ್ಟ್ರೀಯ ಸಾರ್ವಭೌಮತೆಯನ್ನು ಹೇಗೆ ಕಾಪಾಡಬಹುದು ಎಂಬುದನ್ನು ಪಕ್ಷದ ಮಹಾಧಿವೇಶನವು ಚರ್ಚಿಸುತ್ತದೆ.

ಸ್ವತಂತ್ರ ಪಾತ್ರವನ್ನು ಗಟ್ಟಿಗೊಳಿಸಿ

ರಾಜಕೀಯ ನಿರ್ಣಯದಡಿಯಲ್ಲಿ ಚರ್ಚೆಗೆ ಕೈಗೆತ್ತಿಗೊಳ್ಳಬೇಕಾದ ಪ್ರಮುಖ ವಿಷಯವೆಂದರೆ, ಪಕ್ಷದ ಸ್ವತಂತ್ರ ಪಾತ್ರವನ್ನು ಮತ್ತು ಚಟುವಟಿಕೆಗಳನ್ನು ಹೆಚ್ಚಿಸುವುದು ಹೇಗೆ ಹಾಗೂ ಪಕ್ಷದ ನೆಲೆ ಮತ್ತು ಪ್ರಭಾವವನ್ನು ವಿಸ್ತರಿಸುವುದು ಹೇಗೆ ಎಂಬುದೇ ಆಗಿದೆ. ಇದಕ್ಕಾಗಿ, ಯುಪಿಎ ಸರ್ಕಾರದ ಜನವಿರೋಧಿ ನೀತಿಗಳ ಹೊಡೆತವನ್ನು ಸಹಿಸಿಕೊಳ್ಳುತ್ತಿರುವ ದುಡಿಯುವ ವರ್ಗ, ಬಡ ರೈತರು ಹಾಗೂ ಕೃಷಿ ಕೂಲಿಗಾರರು ಮುಂತಾದ ಮೂಲ ವರ್ಗವನ್ನು ಪಕ್ಷವು ಸಂಘಟಿಸಬೇಕು. ವಿವಿಧ ಜನವಿಭಾಗಗಳ ಮೇಲೆ ನವ ಉದಾರವಾದಿ ನೀತಿಗಳು ಯಾವ ರೀತಿಯ ಪರಿಣಾಮ ಬೀರುತ್ತಿವೆ ಎಂಬುದನ್ನು ನಿರ್ದಿಷ್ಟವಾಗಿ ಅಧ್ಯಯನ ಮಾಡಬೇಕು ಮತ್ತು ಸಮಸ್ಯೆಗಳನ್ನು ಗುರುತು ಹಚ್ಚಬೇಕು. ಅಸಂಘಟಿತ ಕಾರ್ಮಿಕರು, ಕೃಷಿ ಕೂಲಿಗಾರರು, ಬಡ ರೈತರು ಮತ್ತು ಹಳ್ಳಿಯ ಬಡವರು ಮುಂತಾದ ತೀವ್ರ ಬಾಧೆಗೊಳಗಾದವರನ್ನು ನಿರಂತರ ಹೋರಾಟಕ್ಕೆ ಇಳಿಸಬೇಕು ಮತ್ತು ಇಡೀ ಪಕ್ಷವನ್ನು ಅಂತಹ ಹೋರಾಟಕ್ಕೆ ಒಗ್ಗಿಸಬೇಕು; ಈ ಪ್ರಮುಖ ಸವಾಲನ್ನು ಪಕ್ಷದ ಮಹಾಧಿವೇಶನ ಚರ್ಚಿಸುತ್ತದೆ.

ಭಾರತದಲ್ಲಿನ ಕೋಮುವಾದವು ಆಳುವ ವರ್ಗಗಳ ವ್ಯೂಹಾತ್ಮಕ ತಂತ್ರದಲ್ಲಿ ಬೆರೆತುಕೊಂಡಿದೆ. ಕಾರ್ಮಿಕ ವರ್ಗವನ್ನು ಒಡೆಯಲು ಮತ್ತು ಬಲಪಂಥೀಯ ನವ ಉದಾರವಾದಿ ನೀತಿಗಳನ್ನು ಬೆಂಬಲಿಸಲು ಅವು ಕೋಮುವಾದವನ್ನು ಬಳಸುತ್ತವೆ. ಅದು ಬಿಜೆಪಿಯೇ ಇರಲಿ, ಶಿವಸೇನೆಯೇ ಇರಲಿ ಅಥವಾ ಇನ್ನಾವುದೇ ಕೋಮುವಾದಿ ಶಕ್ತಿಯಾಗಿರಲಿ ಅವು ನಿಸ್ಸಂಕೋಚವಾಗಿ ಯಾವುದೇ ನಾಚಿಕೆಯಿಲ್ಲದೆ ದೊಡ್ಡ ಬಂಡವಳಿಗರ ಮತ್ತು ಮುಕ್ತ ಮಾರುಕಟ್ಟೆ ನೀತಿಗಳ ಪರವಾಗಿಯೇ ನಿಂತಿವೆ. ಕೋಮುವಾದಿ ಪಕ್ಷಗಳು ನಡೆಸುವ ಸರ್ಕಾರಗಳು ಹೇಗೆ ದೊಡ್ಡ ಬಂಡವಾಳಗಾರರ ಹಾಗೂ ಭೂಮಾಲಕರ ತೊತ್ತುಗಳ ರೀತಿಯಲ್ಲಿ ಕೆಲಸ ಮಾಡುತ್ತವೆ ಎಂಬುದಕ್ಕೆ ಗುಜರಾತ್, ಮಧ್ಯಪ್ರದೇಶ ಹಾಗೂ ಕರ್ನಾಟಕದಲ್ಲಿರುವ ಬಿಜೆಪಿ ಸರ್ಕಾರಗಳ ಕಾರ್ಯವೈಖರಿಯೇ ಸಾಕ್ಷಿ. ಆದ್ದರಿಂದ ನವ ಉದಾರವಾದಿ ನೀತಿಗಳ ವಿರುದ್ಧ ಮತ್ತು ಕೋಮುವಾದದ ವಿರುದ್ಧ ಹೋರಾಟಗಳನ್ನು ಒಟ್ಟೊಟ್ಟಿಗೇ ನಡೆಸಬೇಕಾಗುತ್ತದೆ.

ರಾಜಕೀಯ ಕಾರ್ಯನೀತಿ

ರಾಜಕೀಯವಾಗಿ ಇದರ ಅರ್ಥವೇನೆಂದರೆ, ಎರಡು ದೊಡ್ಡ ಬಂಡವಾಳಶಾಹಿ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ವಿರುದ್ಧ ಹೋರಾಡುವುದೆಂದೇ ಅರ್ಥ. ಇವತ್ತಿನ ಸನ್ನಿವೇಶದಲ್ಲಿ, ನಿರ್ಣಾಯಕವಾಗಿ ತೀರ್ಮಾನವಾಗಬೇಕಾದ್ದು ಸಿಪಿಐ(ಎಂ) ಪಕ್ಷವನ್ನು ಗಟ್ಟಿಗೊಳಿಸುವುದು ಮತ್ತದರ ಸ್ವತಂತ್ರ

ಪುಟ 12ಕ್ಕೆ.......

ನಾಳಿನ ಕಾರ್ಯಕ್ರಮಗಳು

ಏಪ್ರಿಲ್ 12, 2012 – ರಾಜ್ಯ ಸರ್ಕಾರದ ಜನ ವಿರೋಧಿ ಬಜೆಟ್ ಖಂಡಿಸಿ ರಾಜ್ಯಾದ್ಯಂತ ಸಿಪಿಐ(ಎಂ) ನೇತೃತ್ವದಲ್ಲಿ ಪ್ರತಿಭಟನೆ

ಏಪ್ರಿಲ್ 14, 2012 – ಜಾತಿ ಅಸ್ಪೃಶ್ಯತೆ, ಮಡೆ ಸ್ನಾನ, ಪಂಕ್ತಿ ಬೇಧ, ಎಸ್‌ಸಿಪಿ ಯೋಜನೆಗಳ ಸಮರ್ಪಕ ಜಾರಿಗಾಗಿ ಸಿಪಿಐ(ಎಂ) ನೇತೃತ್ವದಲ್ಲಿ ರಾಜ್ಯದ್ಯಂತ ಹೋರಾಟ.

ಏಪ್ರಿಲ್ 17–18, 2012– ಸಿಐಟಿಯು ನೇತೃತ್ವದಲ್ಲಿ ಕನಿಷ್ಟ ಕೂಲಿ ಹೆಚ್ಚಳ ಸೇರಿದಂತೆ ಅಸಂಘಟಿತ ಕಾರ್ಮಿಕರ ಬೇಡಿಕೆಗಳಿಗಾಗಿ ರಾಜ್ಯವ್ಯಾಪಿ ಹೋರಾಟ... – ಏಪ್ರಿಲ್ 19 ಬೆಂಗಳೂರಿನಲ್ಲಿ ಸಾಮೂಹಿಕ ಧರಣಿ.


ಏಪ್ರಿಲ್ 22, 2012 – ನಗರ ಸಭೆ-ಪುರಸಭೆಗಳಲ್ಲಿ ಕೆಲಸ ಮಾಡುವ ಪೌರ ಕಾರ್ಮಿಕರ ರಾಜ್ಯ ಸಮಾವೇಶ, ಬೆಂಗಳೂರು.

ಮೇ 8–9, 2012 – ಬೀಡಿ ಕಾರ್ಮಿಕರ ರಾಜ್ಯ ಸಮ್ಮೇಳನ ಮಂಗಳೂರಿನಲ್ಲಿ.

ಮೇ 21, 2012 – ಭೂಮಿ, ಮನೆ-ನಿವೇಶನಕ್ಕಾಗಿ ರಾಜ್ಯ ಮಟ್ಟದ ಬೃಹತ್ ಅನಿರ್ದಿಷ್ಟಾವಧಿ "ಮಹಾಧರಣಿ" – ಬೆಂಗಳೂರು.

ಸೆಪ್ಟೆಂಬರ್ 9 ರಿಂದ 12, 2012– ಡಿವೈಎಫ್‌ಐನ 9ನೇ ಅಖಿಲ ಭಾರತ ಸಮ್ಮೇಳನ – ಬೆಂಗಳೂರು.

"ಸತ್ಯ, ವಾಸ್ತವ ಸಂಗತಿ ಹಾಗೂ ಸಂವಿಧಾನದ ಆಶಯಗಳು ಪಠ್ಯಕ್ರಮವಾಗಿ ಬರಲಿ"



"ಕೋಮುವಾದ ಮತ್ತು ಮಹಿಳೆ" ಪಠ್ಯ ವಿವಾದ ಕುರಿತ ಚರ್ಚೆ – ಬೆಂಗಳೂರಿನಲ್ಲಿ

ಸಮಾಜದಲ್ಲಿರುವ ಸಾಮಾಜಿಕ ಸಮಸ್ಯೆಗಳ ಹಾಗೂ ಇತಿಹಾಸದ ಸತ್ಯ ಹಾಗೂ ವಾಸ್ತವ ಸಂಗತಿಗಳನ್ನು ಮತ್ತು ಸಂವಿಧಾನದ ಆಶಯಗಳನ್ನೊಳಗೊಂಡ ಅಂಶಗಳು ಪಠ್ಯಕ್ರಮವಾಗಿ ಬರಬೇಕೆಂದು ಜಿ.ಎನ್.ನಾಗರಾಜ್‌ರವರು ಹೇಳಿದರು. ಅವರು ಡಾ॥ಸಬೀಹಾ ಭೂಮಿಗೌಡ ರವರ **ಕೋಮುವಾದ ಮತ್ತು ಮಹಿಳೆ** ಲೇಖನ ಹಾಗೂ ಶಶಿಕಲಾ ವೀರಯ್ಯಸ್ವಾಮಿ ರವರ **ನನ್ನವತಾರ** ಕವನ ಕುರಿತು ಪ್ರಗತಿಪರ ವಿದ್ಯಾರ್ಥಿ–ಯುವಜನ ವೇದಿಕೆಯು ಬೆಂಗಳೂರು ನಗರದ ಶಾಸಕರ ಭವನದ ಸಭಾಂಗಣದಲ್ಲಿ ಏಪ್ರಿಲ್ 4ರಂದು ಆಯೋಜಿಸಿದ್ದ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಿ ಮಾತನಾಡುತ್ತಾ ಬೆಂಗಳೂರು ವಿ.ವಿ ಯ ಬಿ.ಎ. ತೃತೀಯ ಸೆಮಿಸ್ಟರ್ ಕನ್ನಡ ವಿಷಯದಲ್ಲಿರುವ ಈ ಪಾಠ ಕೋಮುವಾದದ ಕರಾಳ ಮುಖಗಳನ್ನು ವಿವರಿಸುತ್ತಾ, ಕೋಮುಗಲಭೆಗಳಲ್ಲಿ ಮಹಿಳೆ ಹೇಗೆ ಕ್ರೂರ ಧಾಳಿಗೆ ಒಳಗಾಗುತ್ತಾಳೆ ಎನ್ನುವುದನ್ನು ವಿವರಿಸುತ್ತದೆ. ದೇಶದ ಜಾತ್ಯಾತೀತ ತತ್ವಕ್ಕೆ ಅನುಗುಣವಾಗಿ ಈ ಲೇಖನ ಬರೆಯಲಾಗಿದ್ದು, ಇದು ಪದವಿ ವಿದ್ಯಾರ್ಥಿಗಳು ಕೋಮುವಾದದ ಅಪಾಯಗಳ ಕುರಿತು ಅರ್ಥೈಸಿಕೊಳ್ಳಲು ಸಹಕಾರಿಯಾಗಿದೆ. ಇಂತಹ ಲೇಖನವನ್ನು ಎ.ಬಿ.ವಿ.ಪಿ ವಿರೋಧಿಸುವ ಮೂಲಕ ತನ್ನ ಕೋಮುವಾದಿ ಮುಖವನ್ನು ಬಯಲುಗೊಳಿಸಿಕೊಂಡಿದೆ ಎಂದು ಅವರು ಕುಟುಕಿದರು.


ಪ್ರೊ॥ ಇಂದಿರಾ ಕೃಷ್ಣಪ್ಪ ರವರು ಮಾತನಾಡಿ ಪಠ್ಯಕ್ರಮದಲ್ಲಿ ಅಳವಡಿಸಿರುವ ಲೇಖನ ಉತ್ತಮವಾಗಿದ್ದು ಇಂತಹ ಇನ್ನು ಅನೇಕ ವಿಚಾರಗಳನ್ನು ಪಠ್ಯ ಪುಸ್ತಕಗಳಲ್ಲಿ ಅಳವಡಿಸಬೇಕು. **ನನ್ನವತಾರ** ಕವನ ಸಮಾಜದ ಪ್ರಸ್ತುತ ಸಮಸ್ಯೆಗಳಾದ ಅಪೌಷ್ಠಿಕತೆ, ಬಡತನ ಕುರಿತು ಶ್ರೀಕೃಷ್ಣನನ್ನು ವಿಡಂಬನೆ ಮಾಡಿ ಬರೆಯಲಾಗಿದ್ದು, ದೇವರನ್ನು ವಿಡಂಬನೆ ಮಾಡುವ ಪರಂಪರೆ ನಮ್ಮಲ್ಲಿದೆ. ಇದನ್ನು ಅನಗತ್ಯವಾಗಿ ವಿವಾದ ಎಬ್ಬಿಸಲು ಎ.ಬಿ.ವಿ.ಪಿ ಹೊರಟಿದೆ ಎಂದರು.

ದಲಿತ ಸಂಘರ್ಷ ಸಮಿತಿ(ಅಂಬೇಡ್ಕವಾದ)ದ ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್‌ರವರು ಮಾತನಾಡಿ ಸಂಘಪರಿವಾರದ ಕೋಮುವಾದಿ ಕುತಂತ್ರಗಳನ್ನು ಸೋಲಿಸಬೇಕಿದೆ ಎಂದರು. ಅಲ್ಲದೇ ಸರ್ಕಾರಿ ಶಾಲೆಗಳು ಹಿಂಸೆಯನ್ನು ಕಲಿಸುತ್ತವೆ. ನಕ್ಸಲ್‌ವಾದಿಗಳನ್ನು ತಯಾರು ಮಾಡುತ್ತವೆ ಎಂದು ಹೇಳಿಕೆ ನೀಡಿರುವ ರವಿಶಂಕರ್ ಗುರೂಜಿ ವಿರುದ್ಧವೂ ಹೋರಾಟ ನಡೆಸಬೇಕಿದೆ ಎಂದರು.

ಡಿ.ವೈ.ಎಫ್.ಐ ರಾಜ್ಯ ಕಾರ್ಯದರ್ಶಿ ರಾಜಶೇಖರ್ ಮೂರ್ತಿ, ವಿದ್ಯಾರ್ಥಿ ಜನತಾದಳ ರಾಜ್ಯಾಧ್ಯಕ್ಷರಾದ ದಾ.ಕೃ.ದೇವರಾಜ್, ಎಸ್.ಎಸ್.ಡಿ.ಎಸ್.ಎಫ್ ರಾಜ್ಯಾಧ್ಯಕ್ಷರಾದ ಗೋವಿಂದಯ್ಯ, ಡಿ.ಎಸ್.ಎಫ್ ರಾಜ್ಯಾಧ್ಯಕ್ಷರಾದ ರಾಜಗೋಪಾಲ್, ಡಿ.ವೈ.ಎಫ್.ಐ ಜಿಲ್ಲಾ ಕಾರ್ಯದರ್ಶಿ ಲಿಂಗರಾಜು, ಪ್ರಗತಿಪರ ಚಿಂತಕರಾದ ಚೇಳೂರು ವೆಂಕಟೇಶ್, ಕರ್ನಾಟಕ ಜನಶಕ್ತಿಯ ವಾಸು.ಎಚ್.ಎಂ, ಗೌರಿ, ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಹುಳ್ಳಿ ಉಮೇಶ್, ಎನ್.ಎಸ್.ಯು.ಐ ಮುಖಂಡರಾದ ರವಿ ಕಿರಣ್ ಭಾಗವಹಿಸಿ ಮಾತನಾಡಿದರು. ಎಸ್.ಎಫ್.ಐ ಮುಖಂಡರಾದ ಮುನಿರಾಜು.ಎಂ ಸ್ವಾಗತಿಸಿದರು. ಯುವರಾಜ್.ಎಂ.ಪಿ, ವಿ.ಜೆ.ಡಿ.ಎಸ್ ನ ಮಂಜುನಾಥ್ ಸೇರಿದಂತೆ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಎಸ್.ಎಫ್.ಐ ರಾಜ್ಯಾಧ್ಯಕ್ಷರಾದ ಅನಂತನಾಯ್ಕ್ ರವರು ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕೊಡಗು


ದಲಿತರ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ ವಿರಾಜಪೇಟೆ ತಾಲೂಕು ಕಛೇರಿಯ ಮುಂಭಾಗ ಪ್ರತಿಭಟನೆ



ಪ.ಜಾತಿ ಮತ್ತು ಪ.ಪಂಗಡಗಳಿಗೆ ಸರಕಾರದ ಎಸ್.ಸಿ.ಪಿ. ಯೋಜನೆಗಳ ಸೂಕ್ತ ಅನುಷ್ಟಾನಕ್ಕಾಗಿ ರಾಜ್ಯದಲ್ಲಿ ಪ.ಜಾ. ಮತ್ತು ಪಂಗಡಗಳ ಜನಸಂಖ್ಯಾ ಪ್ರಮಾಣಾನುಸಾರವಾಗಿ ಅನುದಾನ ಕಾದಿರಿಸಬೇಕು. ಭೂರಹಿತ ದಲಿತರಿಗೆ ಭೂಮಿ ಮತ್ತು ಮನೆ ನಿವೇಶನ ನೀಡಬೇಕು, ಎಲ್ಲಾ ದಲಿತರಿಗೂ ಅಂತ್ಯೋದಯ ಕಾರ್ಡು ನೀಡಬೇಕು. ತೋಟಗಳಲ್ಲಿರುವವರನ್ನು ಒಳಗೊಂಡು ನಿವೇಶನವಿಲ್ಲದ ದಲಿತರಿಗೆ ನಿವೇಶನ ಹಂಚಬೇಕು, ನಿವೇಶನ ನೀಡಿದವರಿಗೆ ಹಕ್ಕು ಪತ್ರ ನೀಡಬೇಕು. ತೋಟದ ಲೈನ್ ಮನೆಗಳಲ್ಲಿ ವಾಸಿಸಿ ಕೆಲಸ ಮಾಡುವ ಎರವ, ಕುರುಬ, ಮತ್ತಿತರ ವಿಭಾಗದವರಿಗೆ ಗುರುತಿನ ಚೀಟಿ, ರೇಷನ್ ಕಾರ್ಡು ಇರುವುದಿಲ್ಲ. ಗುರುತಿನ ಚೀಟಿ, ರೇಷನ್ ಕಾರ್ಡು ವ್ಯವಸ್ಥೆ ಮಾಡಿಕೊಡಬೇಕು. ಬುಡಕಟ್ಟು ವಿಭಾಗದ (Tribal) ಪಟ್ಟಿಯಲ್ಲಿ ಕುಡಿಯರು ಮತ್ತು ಬೆಟ್ಟ ಕುರುಬರನ್ನು ಸೇರಿಸಬೇಕು. ಅರಣ್ಯ ಕಾಯ್ದೆ ಕಟ್ಟುನಿಟ್ಟಾಗಿ ಅನುಷ್ಟಾನಕ್ಕೆ ತರಬೇಕು. ಬ್ಯಾಕ್‌ಲಾಗ್ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು. ಸರ್ಕಾರಿ ಶಾಲಾ–ಕಾಲೇಜುಗಳನ್ನು ಹೆಚ್ಚಿಸಬೇಕು, ಬಹಳಷ್ಟು ಶಾಲಾ–ಕಾಲೇಜುಗಳಿಗೆ ಅಧ್ಯಾಪಕರು ಇಲ್ಲ. ಕೂಡಲೇ ಭರ್ತಿ ಮಾಡಬೇಕು. ಎಲ್ಲರಿಗೂ ಶಿಕ್ಷಣ ಸಿಗುವಂತಾಗಬೇಕು. ಬಹಳಷ್ಟು ತೋಟ ಕಾರ್ಮಿಕರಿಗೆ ದಿನಗೂಲಿತಯಾಗಿ 80 ರೂ. ಮಾತ್ರ ಇದ್ದು ದಿನಗೂಲಿಯನ್ನು ಹೆಚ್ಚಿಸಬೇಕು. ಆಶ್ರಮ ಶಾಲೆ, ಮೊರಾರ್ಜಿ ಶಾಲೆ, ಏಕಲವ್ಯ ಶಾಲೆಗಳಲ್ಲಿ ಶಾಶ್ವತ ಅಧ್ಯಾಪಕರುಗಳು ಇಲ್ಲ, ಕೇವಲ ತಾತ್ಕಾಲಿಕವಾಗಿ ಮಾತ್ರ ನೇಮಿಸಿದ್ದು ಅವರನ್ನು ಖಾಯಂಗೊಳಿಸಬೇಕು. ಅಧ್ಯಾಪಕರನ್ನು ಗುತ್ತಿಗೆಯಾಧಾರದಲ್ಲಿ ನೇಮಿಸಲಾಗುತ್ತಿದೆ. ಇದರಿಂದಾಗಿ ಅಧ್ಯಾಪಕರಿಗೆ ಶೋಷಣೆ ಹೆಚ್ಚಾಗುತ್ತಿದೆ. ಗಿರಿಜನ ಮತ್ತಿತರ ದಲಿತ ಮಕ್ಕಳಿಗೆ ಪ್ರತಿ ತಿಂಗಳೂ ರೂ.75/– ಸ್ಕಾಲರ್‌ಶಿಪ್ ಇದು ಸಾಲದು ಸ್ಕಾಲರ್‌ಶಿಪ್ ರೂ.250/–ಕ್ಕೆ ಹೆಚ್ಚಿಸಬೇಕು. ಬ್ಯಾಂಕ್ ಖಾತೆ ಹೊಂದಿರಬೇಕೆಂಬ ಕಡ್ಡಾಯವನ್ನು ಕೂಡಲೇ ತೆಗೆದುಹಾಕಬೇಕು. ಈ ಬಾರಿ ಶೇ.50ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸ್ಕಾಲರ್‌ಶೀಪ್ ಬಂದಿಲ್ಲ. ಕೂಡಲೇ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ವಿರಾಜಪೇಟೆ ತಾಲೂಕು ಕಛೇರಿ ಮುಂದೆ ಪ್ರತಿಭಟನೆ ಮಾಡಲಾಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಡಾ॥ದುರ್ಗಾಪ್ರಸಾದ್ ಸಂಘಟನಾ ಸಮಿತಿ ಸದಸ್ಯರಾದ ಮಹದೇವ ರಮೇಶ್‌ನವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಇಬ್ರಾಹಿಂ, ಸಾಜಿ, ಭಾರತಿ, ಶ್ರೀಧರ್, ಆನಂದ್‌ರವರು ಭಾಗವಹಿಸಿದ್ದರು. ನಂತರ ವಿರಾಜಪೇಟೆ ತಹಶೀಲ್ದಾರರಾದ ಹನುಮಂತಪ್ಪನವರಿಗೆ ಮನವಿ ಪತ್ರ ನೀಡಲಾಯಿತು.

ಕಾರ್ಟೂನ್ ಕಾರ್ನರ್



ಕೃಪೆ : ಪ್ರಜಾವಾಣಿ

ಕೃಷಿಕರ ಜಮೀನು ಕೃಷಿಕರಲ್ಲದ ಹಣವಂತರೂ, ಬಲಾಢ್ಯರ ಕೈಗೆ ಹೋಗಬಾರದು. ಭೂಹೀನ ಕೂಲಿಕಾರರು, ಬಡರೈತರಿಗೆ ಭೂಮಿ ದೊರೆಯಬೇಕು. ಭೂಮಿಯ ಕೇಂದ್ರೀಕರಣ ತಪ್ಪಿ, ನಿಜಕ್ಕೂ ಹೊಲಗದ್ದೆಗಳಲ್ಲಿ ದುಡಿವವರಿಗೆ ಭೂಮಿಯ ಮಾಲೀಕತ್ವ ದೊರೆಯಬೇಕೆಂಬುದು ಭೂ ಸುಧಾರಣೆಯ ಆಶಯ. ಆದರೆ ಬಿಜೆಪಿ ಸರ್ಕಾರ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿತರಲು ಹೊರಟು ಈ ಎಲ್ಲಾ ಆಶಯಗಳನ್ನು ಬುಡಮೇಲು ಮಾಡುವ ಸ್ವರೂಪದಲ್ಲಿದೆ.

ಭೂ ಸುಧಾರಣೆಯ ಮೂಲ ಆಶಯ ಮಣ್ಣು ಪಾಲು ಮಾಡುವ ತಿದ್ದುಪಡಿ ಯತ್ನ

ಯು.ಬಸವರಾಜು

ಕರ್ನಾಟಕ ರಾಜ್ಯ ಸರ್ಕಾರ ಕಳೆದ ಬಜೆಟ್ ಅಧಿವೇಶನದಲ್ಲಿ ಕರ್ನಾಟಕ ಭೂಸುಧಾರಣಾ ಕಾಯ್ದೆ-1961ಕ್ಕೆ ತಿದ್ದುಪಡಿ ಮಾಡಲು ಕರ್ನಾಟಕ ಭೂಸುಧಾರಣೆ ತಿದ್ದುಪಡಿ ವಿಧೇಯಕ-2012ನ್ನು ಮಂಡಿಸಿದೆ.

ಸಮಗ್ರ ಬೇಸಾಯ ವ್ಯಾಪಾರ ಅಭಿವೃದ್ಧಿ ಕಾರ್ಯ ನೀತಿ, 2011ರಲ್ಲಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಮತ್ತು 1. ಬೇಸಾಯ ಎಂಬ ಪರಿಭಾಷೆಯೊಳಗೆ, ಬೇಸಾಯ ಆಧಾರಿತ ಕೈಗಾರಿಕೆಗಳು, ಬೇಸಾಯ ಸಂಸ್ಕರಣಾ ಕೈಗಾರಿಕೆಗಳು, ಸುಗ್ಗಿಯ ನಂತರ ಕಾರ್ಯಾರಂಭ ಮತ್ತು ಬೇಸಾಯ ಮೂಲ ಸೌಕರ್ಯ ಇವುಗಳನ್ನು ಸೇರ್ಪಡೆ ಮಾಡಲು ಹಾಗೂ 2. ಕೆಲವು ಷರತ್ತುಗಳಿಗೊಳಪಟ್ಟು ಮೇಲೆ ತಿಳಿಸಲಾದವುಗಳಿಗಾಗಿ ಖಾಸಗಿ ಬೇಸಾಯ ಭೂಮಿಯನ್ನೂ ದೀರ್ಘಾವಧಿ ಗೇಣಿ ಆಧಾರದ ಮೇಲೆ ಬೇಸಾಯ ವ್ಯಾಪಾರಿ ಚಟುವಟಿಕೆಗಳಿಗಾಗಿ ನೀಡುವುದಕ್ಕೆ ಸಾಧ್ಯವಾಗುವಂತೆ ಮಾಡಲು ಉಪಬಂಧ ಕಲ್ಪಿಸುವುದು ಈ ವಿಧೇಯಕ ಎಂದಿದೆ.

ಆದ್ದರಿಂದ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ 1961ರ (1962ರ ಕರ್ನಾಟಕ ಅಧಿನಿಯಮ 10) 2ನೇ ಪ್ರಕರಣದ ಎ.ಉಪ ಪ್ರಕರಣ (12ನೇ) ಖಂಡದ ಎಫ್ ಉಪಖಂಡದ ತರುವಾಯ ಬೇಸಾಯದ ಪರಿಭಾಷೆಗೆ (ಜಿ) ಬೇಸಾಯ ಆಧಾರಿತ ಕೈಗಾರಿಕೆಗಳು (ಎಚ್) ಬೇಸಾಯ ಸಂಸ್ಕರಣಾ ಕೈಗಾರಿಕೆಗಳು (ಡಿ) ಸುಗ್ಗಿಯ ನಂತರದ ಕಾರ್ಯಾರಂಭ ಮತ್ತು ಬೇಸಾಯ ಮೂಲ ಸೌಕರ್ಯ ಎಂದು ಸೇರ್ಪಡೆ.ಮಾಡಿದೆ.

ಅದೇ ರೀತಿ, 102ನೇ ಪ್ರಕರಣಕ್ಕೆ 1ನೇ ಉಪ ಪ್ರಕರಣದಲ್ಲಿ (VIII) ನೇ ಖಂಡದ ನಂತರ (IX) ಈ ಮುಂದಿನ ಎಂದರೆ....

1.ಹೂಡಿಕೆದಾರರಿಂದ ಇತರ ಉದ್ದೇಶಗಳಿಗಾಗಿ ಭೂಮಿಯನ್ನು ಪರಿವರ್ತಿಸತಕ್ಕದ್ದಲ್ಲ.

2.ರೈತರು ಭೂಮಿಯ ಮಾಲೀಕರಾಗಿ ಮುಂದುವರೆಯತಕ್ಕದ್ದು

3.ಭೂಮಿಗೆ ಯಾವುದೇ ರೀತಿಯ ಹಾನಿಯುಂಟು ಮಾಡತಕ್ಕದ್ದಲ್ಲ.

4.ಬೇಸಾಯ, ಬೇಸಾಯಕ್ಕೆ ಸಂಬಂಧಿಸಿದ ಚಟುವಟಿಕೆಗಳು ಮತ್ತು ಬೇಸಾಯ ಉತ್ಪನ್ನ ಮಾರುಕಟ್ಟೆ/ರಫ್ತು ಹಾಗೂ ಮೌಲ್ಯವೃದ್ಧಿ ಚಟುವಟಿಕೆಗಳನ್ನು ಹೂಡಿಕೆದಾರರು ಕೈಗೊಳ್ಳತಕ್ಕದ್ದು

5.ಬೇಸಾಯ ವ್ಯಾಪಾರ ಚಟುವಟಿಕೆಗಳು ಕರ್ನಾಟಕ ಸರ್ಕಾರ ರೂಪಿಸಿದ ಸಮಗ್ರ ಬೇಸಾಯ ವ್ಯಾಪಾರ ಅಭಿವೃದ್ಧಿ ಕಾಯ್ದೆ ನೀತಿ 2011ಕ್ಕೆ ಅನುಸಾರವಾಗಿ ಇರತಕ್ಕದ್ದು.

ಎಂಬ ಷರತ್ತುಗಳಿಗೆ ಒಳಪಟ್ಟು ವ್ಯವಸ್ಥಾಪನೆಗಾಗಿ ಹೂಡಿಕೆದಾರರಿಗೆ ರೈತರು ಬಾಡಿಕೆ ನೀಡಿರುವ ಎಂದು ಸೇರಿಸಲಾಗಿದೆ.

ಮೇಲ್ನೋಟಕ್ಕೆ ಇದರಲ್ಲಿ ಅಂತಹ ತಪ್ಪೇನು ಇಲ್ಲವೆಂಬಂತೆ ಈ ವಿಧೇಯಕ ಭಾಸವಾಗುತ್ತದೆ. ಆದರೆ ವಿಧೇಯಕವು ಅಂಗೀಕಾರವಾಗಿ ಜಾರಿಗೆ ಬಂದರೇ, ಕರ್ನಾಟಕ ರಾಜ್ಯ ಸರ್ಕಾರದ ದೂರದೃಷ್ಟಿ 2020ರಂತೆ ಕೃಷಿಯಲ್ಲಿ ಉದ್ಯೋಗ ಹೊಂದಿದ ಶೇಕಡಾವಾರು ಕೆಲಸಗಾರರ ಸಂಖ್ಯೆಯನ್ನು 61% ರಿಂದ 35-40%ಗೆ ಕಡಿತಗೊಳಿಸಲಿದೆ.

ಮಾತ್ರವಲ್ಲ ಅದಕ್ಕೂ ಹೆಚ್ಚು ಜನರನ್ನೂ 05-06 ವರ್ಷಗಳಲ್ಲಿ ಭೂಮಿಯಾಚೆ, ವ್ಯವಸಾಯದಾಚೆ ತಳ್ಳಲಿದೆ. ಅಂತಹ ಗಹನವಾದ



ಪರಿಣಾಮವನ್ನೂ ಬೀರುವ ಶಕ್ತಿಯು ಇರುವುದನ್ನೂ ಸೂಕ್ಷ್ಮವಾಗಿ ಗಮನಿಸಿದಲ್ಲಿ ತಿಳಿಯುತ್ತದೆ.

ವಾಸ್ತವವಾಗಿ ಅಧಿನಿಯಮದ ಪ್ರಕರಣ 107 "ಕೆಲವು ಜಮೀನುಗಳಿಗೆ ಅಧಿನಿಯಮ ಅನ್ವಯಿಸತಕ್ಕದ್ದಲ್ಲ." ವೆಂಬುದಾಗಿದೆ. ಇದರಲ್ಲಿ ರೈತರಿಂದ ಜಮೀನನ್ನು ಬೇಸಾಯ, ವ್ಯಾಪಾರ ಚಟುವಟಿಕೆಗಳಿಗಾಗಿ ಬಾಡಿಗೆಗೆ, ಬೇಸಾಯ ವ್ಯಾಪಾರಿಗಳು ಪಡೆಯುವುದನ್ನು ಸೇರಿಸಿದೆ. ಅಂದರೇ ಒಂದು ರೀತಿಯಲ್ಲಿ ಬೇಸಾಯ ವ್ಯಾಪಾರಕ್ಕಾಗಿ ನೀಡಲಾಗುವ ಜಮೀನುಗಳ ರೈತರಿಗೆ ಅವರ ಜಮೀನು ಅವರ ಕೈಬಿಟ್ಟು ಹೋಗದೆಂಬ ಮತ್ತು ಸುರಕ್ಷಿತವಾಗಿರುತ್ತದೆಂಬ ಭರವಸೆ ನೀಡುತ್ತದೆ. ಮತ್ತು ಇದು ಅಧಿನಿಯಮಕ್ಕೆ ಸೇರುಪುದಿಲ್ಲವಾದ್ದರಿಂದ ತೊಂದರೆಯೇನಿಲ್ಲವೆಂಬ ಭಾಸವನ್ನೂ ಉಂಟುಮಾಡುತ್ತದೆ. ಮತ್ತು ಇದುವರೆಗೆ ಅಂದರೆ ಯಾರು ಕೃಷಿಕರಲ್ಲದವರು ಮತ್ತು ಕೃಷಿಕೂಲಿಕಾರರು ಕೃಷಿ ಕಸಬುದಾರರಲ್ಲದವರು ಮತ್ತು ಕೃಷಿ ಕೂಲಿಕಾರರಾಗಿದ್ದರೂ ಇತರೇ ಮೂಲಗಳಿಂದ 2 ಲಕ್ಷಕ್ಕೂ ಅಧಿಕ ಆದಾಯ ಇರುವವರು ಭೂಮಿ ಖರೀದಿಸಲಾಗದೆಂಬ ಮತ್ತು ಅಂತಹವರು ಕೃಷಿಯಲ್ಲಿ ತೊಡಗಲಾಗದೆಂಬ ಅಧಿನಿಯಮದ ಮೂಲ ಉದ್ದೇಶಕ್ಕೆ ಕೊಡಲಿ ಏಟು ನೀಡುತ್ತದೆ.

ತಿದ್ದುಪಡಿಯು ಕೇವಲ ಬೇಸಾಯ ವ್ಯಾಪಾರವನ್ನು ಮಾಡಲು ಮಾತ್ರವೇ ಕೃಷಿ ವ್ಯಾಪಾರಿಗಳಿಗೆ ಅವಕಾಶ ನೀಡುವುದಿಲ್ಲ, ಅದು ಬೇಸಾಯ ಮಾಡಲು ಅವಕಾಶ ನೀಡುತ್ತದೆ. ಗಮನಿಸಿ 107ರ ತಿದ್ದುಪಡಿಯ 09ರ 04ನೇ ಅಂಶ ಅದು ಬೇಸಾಯ, ಬೇಸಾಯಕ್ಕೆ ಸಂಬಂಧಿಸಿದ ಚಟುವಟಿಕೆ ಎನ್ನುತ್ತದೆ.ಹೀಗಾಗಿ ಈ ವಿಧೇಯಕವು ಕೃಷಿಯಲ್ಲಿ ಬಂಡವಾಳ ತೊಡಗಿಸುವವರಿಗೆ ಇಲ್ಲಿ ಹಿಂಬದಿಯಿಂದ ಪ್ರವೇಶಿಸಲು ಅವಕಾಶ ನೀಡುತ್ತದೆ. ಆದರೆ ಪ್ರಕರಣ-2ರ ತಿದ್ದುಪಡಿಯು ಅದಕ್ಕೆ ವ್ಯತಿರಿಕ್ತವಾಗಿ ನೇರವಾಗಿಯೇ ಅವಕಾಶ ನೀಡುತ್ತದೆ.

ಇದು ಬೇಸಾಯದ ಪರಿಭಾಷೆಯೆಂದು ಹಿಗ್ಗಿಸಿದೆ. ಬೇಸಾಯ ಆಧಾರಿತ ಕೈಗಾರಿಕೆಗಳನ್ನು ಸಂಸ್ಕರಣಾ ಕೈಗಾರಿಕೆಗಳನ್ನು ಸುಗ್ಗಿಯ ನಂತರದ ಕಾರ್ಯಾರಂಭ ಮತ್ತು ಬೇಸಾಯ ಮೂಲ ಸೌಕರ್ಯವನ್ನು ಸೇರ್ಪಡೆ ಮಾಡುತ್ತದೆ.

ಅಂದರೇ ಇದರ ಅರ್ಥ ಈ ಅಧಿನಿಯಮದ ಮೂಲಕ ಬೇಸಾಯದ ಹೆಸರಿನಲ್ಲಿ ಸಿಗುವ ಎಲ್ಲಾ ಫಲಗಳು ಬೇಸಾಯ ಆಧಾರಿತ ಈ ಎಲ್ಲವುಗಳಿಗೂ ಸಿಗಲಿದೇ ಎಂದಾಗುತ್ತದೆ. ಬೇಸಾಯ ಆಧಾರಿತ ಕೈಗಾರಿಕೆಗಳು ಎಂದರೇ ಎಣ್ಣೆಕಾಳು ಆಧಾರಿಸಿದ ಎಣ್ಣೆಮಿಲ್ಲುಗಳು, ಎಣ್ಣೆ ವ್ಯಾಪಾರ ಕಬ್ಬು ಆಧಾರಿತ ಸಕ್ಕರೆ ಕಾರ್ಖಾನೆ ಮತ್ತು ಮದ್ಯಸಾರ, ಹತ್ತಿ ಆಧಾರಿತ ಜವಳಿ ಉದ್ಯಮ, ರೇಷ್ಮೆ ಆಧಾರಿತ ಕೈಗಾರಿಕೆಗಳು, ಭತ್ತ ಆಧಾರಿತ ಭತ್ತದ ಮಿಲ್ಲುಗಳು (ರೈಸ್ ಮಿಲ್) ಆಹಾರ ಧಾನ್ಯ ಆಧಾರಿತ - ಆಹಾರ ಉತ್ಪನ್ನಗಳು ಮಾರುಕಟ್ಟೆ ಹೀಗೆ ಇದರ ಪಟ್ಟಿ ಬೆಳೆಯುತ್ತಾ ಹೋಗುತ್ತದೆ.

ಇದೆಲ್ಲವೂ ಬೇಸಾಯದ ಪರಿಭಾಷೆಯಲ್ಲಿ ಸೇರುವುದರಿಂದ ಬೇಸಾಯಕ್ಕಿರುವ ಏನೆಲ್ಲಾ ಸೌಲಭ್ಯಗಳು ಇವುಗಳಿಗೆ ಸಿಗಲಿದೆ ಎಂದಾಯಿತು.

ಈ ವಿಧೇಯಕ ಜಾರಿಗೆ ಬಂದಲ್ಲಿ ಇವೆಲ್ಲವೂ ಬೇಸಾಯಕ್ಕಿರುವ ಸೌಲಭ್ಯ ಹೊಂದಲು ಅವಕಾಶ ಪಡೆಯುತ್ತವೆ ಮತ್ತು ಇವುಗಳ ಮಾಲೀಕರು ಬೇಸಾಯಗಾರರೇ ಆಗುತ್ತಾರೆ. ಪರಿಣಾಮವಾಗಿ ಈ ಕೈಗಾರಿಕೆಗಳು ಮತ್ತು ಈ ವ್ಯವಹಾರಗಳಿಂದ ಬರುವ ಆದಾಯ, ಬೇಸಾಯದ ಆದಾಯ ವಾಗುತ್ತದೆ. ಮತ್ತು ಅದರಿಂದ ಅಧಿನಿಯಮದಲ್ಲಿ ಅವಕಾಶವಿರುವಂತೆ ಇವರೆಲ್ಲಾ ಕುಟುಂಬಕ್ಕೆ 20 ಯೂನಿಟ್(108 ಎಕರೆ) ಬೇಸಾಯ ಜಮೀನು ಹೊಂದಲು ಮತ್ತು ಹೂ ಬೇಸಾಯ, ಮೀನುಗಾರಿಕೆ ಮುಂತಾದ ಹೆಸರಿನಲ್ಲಿ ಇನ್ನೂ 30+30 ಯೂನಿಟ್ (324 ಎಕರೆ) ಜಮೀನು ಹೊಂದಬಹುದಾಗಿದೆ. ವಯಸ್ಕ ಮಗನಿಗೂ ಅಷ್ಟೇ ಜಮೀನು ಹೊಂದುವಂತೆ ಮಾಡಬಹುದಾಗಿದೆ ಮತ್ತು ದೀರ್ಘಾವಧಿ ಗೇಣಿದಾರರಾಗಿಯೂ ಹಲವು ಯೂನಿಟ್ ಜಮೀನು ಬಾಡಿಗೆಗೆ (ಖಾಸಗಿ ಜಮೀನು) ರೈತರಿಂದ ಪಡೆಯಬಹುದಾಗಿದೆ. ಇದಕ್ಕೆ ಮಿತಿಯನ್ನೂ ಹೇಳಿಲ್ಲ. ಹೀಗೆ ಸಾವಿರ ಎಕರೆ ಜಮೀನನ್ನೂ ಪಡೆಯಲು ಅವಕಾಶಗಳನ್ನು ತಿಳಿಯುತ್ತದೆ. ಇನ್ನೂ ಮುಂದೆ ಈ ಕೈಗಾರಿಕೆಗಳು ಪಡೆಯುವ ಬ್ಯಾಂಕ್ ಸಾಲವನ್ನೂ ಕೃಷಿ ಸಾಲವೆನ್ನಬಹುದಾಗಿದೆ. ಕೃಷಿಗಾಗಿ ಪಡೆಯುವ ಬಡ್ಡಿಯ ರಿಯಾಯಿತಿಯನ್ನೂ ಪಡೆಯುವ ಅವಕಾಶ ತೆರೆದಿವೆ. ಮಾತ್ರವಲ್ಲ ಇವೆಲ್ಲಾ ಜನರು ತಮ್ಮದು ಕೃಷಿ ಆದಾಯವೆಂದು ಆದಾಯ ತೆರಿಗೆಯಿಂದ ವಿನಾಯಿತಿ ಕೇಳಬಹುದಾಗಿದೆ.

ಈ ರೀತಿಯಲ್ಲಿ ಬೇಸಾಯದ ಹೆಸರಿನಲ್ಲಿ ಖಾಸಗಿ ಜಮೀನುಗಳನ್ನೂ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದಾಗಿದೆ.

ಅದಾಗಲೇ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳ ಜಾರಿಗಳ ಪರಿಣಾಮದಿಂದ ವ್ಯಾಪಕವಾಗಿ ಸಾಲ ಬಾಧಿತನಾದ ರೈತ ಸಾಮಾನ್ಯ ಬೆಲೆ ನೀಡಿದರೂ ಭೂಮಿಯನ್ನು ಬಿಟ್ಟು ಹೊರಟು ಹೋಗಲು ತುದಿಗಾಲ ಮೇಲೆ ನಿಂತಿರುವಾಗ ವ್ಯಾಪಕವಾದ ಭೂಮಿಯ ಕೇಂದ್ರೀಕರಣ ಮಾಡಲು ಇವರಿಗೆ ಅಂದರೆ ಕೃಷಿಯಲ್ಲಿ ಬಂಡವಾಳ ಹೂಡಿಕೆದಾರರಿಗೆ ಈ ತಿದ್ದುಪಡಿ ಬಹುದೊಡ್ಡ ಅನುಕೂಲ ಮತ್ತು ಲಾಭವನ್ನೂ ತಂದು ಕೊಡುವಂತಹದ್ದಾಗಿದೆ.

ಇದೂ ಕರ್ನಾಟಕ ರಾಜ್ಯದ ಬಿಜೆಪಿಯ ಈ ಸರ್ಕಾರ ರೈತರಿ ಹೆಸರ್ಹೇಳಿ, ಹೆಗಲ ಮೇಲೆ ಹಸಿರು ಶಾಲು ಹಾಕಿಕೊಂಡು ಅವನ ಬೆನ್ನಿಗೆ ಚೂರಿ ಹಾಕುವ ಅವರ ಧೋರಣೆಯನ್ನೂ ಬಹಿರಂಗಪಡಿಸುತ್ತದೆ.

ಈ ತಿದ್ದುಪಡಿಯು ಆಕಸ್ಮಿಕವೇನು ಅಲ್ಲ, ಇದು ಕಂಪನಿ ಕೃಷಿ, ಗುತ್ತಿಗೆ ಕೃಷಿ ಮುಂಗಡ ವ್ಯಾಪಾರ ಮತ್ತು ಚಿಲ್ಲರೆ ವ್ಯಾಪಾರದಲ್ಲಿ ಬಹುರಾಷ್ಟ್ರೀಯ ಬಂಡವಾಳಕ್ಕೆ ಅವಕಾಶ ಮತ್ತು ಮಾದರಿ ಮಾರುಕಟ್ಟೆ ಕಾಯ್ದೆ, ಇವುಗಳ ಭಾಗವಾಗಿಯೇ, ಅವುಗಳ ಜಾರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದಾಗಿಯೇ ಬರುತ್ತಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಇಲ್ಲಿ ಜನತೆಯ ಹೆಸರಿನಲ್ಲಿ ಘೋಷಣೆಗಳು ಭರ್ತಿ-ಭರ್ತಿ. ಆಶ್ವಾಸನೆ, ಭರವಸೆಗಳು ಹೊರೆ ಹೊರೆ. ಆದರೆ ಜಾರಿ ಮಾತ್ರ-ಅರೆಬರೆಯೂ ಇಲ್ಲ. ಇದು ಕಳೆದ ವರ್ಷದ ಬಜೆಟ್ ಅನ್ನು ವಿಮರ್ಶಿಸಿದಾಗ ಕಂಡು ಬರುವ ವಿಚಾರ. ಈ ವರ್ಷ ಲಕ್ಷ ಕೋಟಿ ದಾಟಿದೆ ಎನ್ನಲಾಗುತ್ತಿರುವ ಬಜೆಟ್ ಹಿಂದಿನ ಪಟ್ಟಭದ್ರ ರಾಜಕಾರಣ ಏನಿದೆ ? ಎಂದು ವಿವರಿಸಿದ್ದಾರೆ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿಗಳು.

ಬಿಜೆಪಿ ಸರ್ಕಾರದ ಬಜೆಟ್ ಹಿಂದಿನ ಜನದ್ರೋಹಿ ರಾಜಕಾರಣವೇನು ?

ಜಿ.ವಿ.ಶ್ರೀರಾಮರೆಡ್ಡಿ

ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡರು 2012-2013ರ ಆಯ ಮತ್ತು ವ್ಯಯವನ್ನು (ಬಡ್ಜೆಟ್) ವಿಧಾನ ಸಭೆಯಲ್ಲಿ ಮಂಡಿಸಿ ತನ್ನದೊಂದು ದಾಖಲೆ ಬಡ್ಜೆಟ್ ಎಂದು 1,02.742.00 ಕೋಟಿಗಳದ್ದೆಂದು-ರಾಜ್ಯದ ಇತಿಹಾಸದಲ್ಲಿ ಇದು ಅಭೂತಪೂರ್ವವೆಂದು ರಾಜ್ಯ ಜನತೆಗೆ ಗಾಜಿನ ಅರಮನೆಯನ್ನೇ ತೋರಿಸಿದ್ದಾರೆ. ಇದರ ಜೊತೆಗೆ ಕರ್ನಾಟಕ ರಾಜ್ಯ ಸರ್ಕಾರ ಎರಡನೆಯ ಸಲ ಕೃಷಿ ಬಜೆಟ್‌ನ್ನು ಮಂಡಿಸಿದೆ. ಇದರ ಗಾತ್ರ 19,660 ಕೋಟಿಗಳು, ಎರಡು ಸೇರಿ 1,02,742 ಕೋಟಿಗಳು. ಯಾವ ಘನೋದ್ದೇಶಕ್ಕಾಗಿ ಈ ಎರಡು ಆಯವ್ಯಯಗಳನ್ನು ಮಂಡಿಸಿದರೋ ಹಿಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಇಂದಿನ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಇವರಿಬ್ಬರೇ ಉತ್ತರ ಕೊಡಬೇಕು.

ಯಾರ ಹಣ, ಯಾರ ಸಂಪತ್ತು ?

1,02,742 ಸಾವಿರ ಕೋಟಿಗಳ ಬಜೆಟ್ ಸರಿ ಸುಮಾರು 50 ಇಲಾಖೆಗಳಿಗೆ. ಇಷ್ಟು ಹಣ ರಾಜ್ಯದ ಜನತೆಯ ಬೆವರಿನಿಂದ ಉತ್ಪಾದಿಸಲಾದ ಸಂಪತ್ತು. ಇದು ರಾಜ್ಯದ ಜನತೆಯ ಕಲ್ಯಾಣಕ್ಕಾಗಿ ಮತ್ತು ರಾಜ್ಯದ ಅಭಿವೃದ್ಧಿಗೆ ಅವಶ್ಯಕವಿರುವ ಸಾರ್ವಜನಿಕ ಸಂಪತ್ತು. ಇಷ್ಟು ಸಾವಿರ ಕೋಟಿಗಳು ಸಾರ್ವಜನಿಕ ಸಂಪತ್ತನ್ನು ಹೇಗೆ ರಾಜ್ಯದ ಅಭಿವೃದ್ಧಿಗೆ ಉಪಯೋಗಿಸಬೇಕು ಯಾವ ಯಾವ ಇಲಾಖೆಯ ಅವಶ್ಯಕತೆಗಳೇನು? ಯಾವ ಇಲಾಖೆಗೆ ಎಷ್ಟು ಹಣ ಹಂಚಿಕೆ ? ಹಿಂದಿನ ಬಡ್ಜೆಟ್‌ನಲ್ಲಿ ಹಂಚಿಕೆಯಾದ ಹಣ ಎಷ್ಟು ಖರ್ಚಾಗಿದೆ? ಎಷ್ಟು ಉಳಿದಿದೆ? ಅದರಿಂದ ರಾಜ್ಯದ ಒಟ್ಟಾರೆ ಅಭಿವೃದ್ಧಿ ಯಾವ ಪ್ರಮಾಣದಲ್ಲಿ ಆಗಿದೆ ಎಂಬುದು ಗಂಭೀರವಾದವಾದ ವಿಚಾರವಾಗಿದೆ.

ಆಡುವುದು ಒಂದು ಮಾಡುವುದು ಇನ್ನೊಂದು

ರಾಜ್ಯ ಸರ್ಕಾರದ ಕಳೆದ 4 ವರ್ಷಗಳ ಬಜೆಟ್‌ಗಳಲ್ಲಿ ಮಂಡನೆ ಮಾಡಿದ್ದು ಎಷ್ಟು ಕೋಟಿ? ಖರ್ಚು ಮಾಡಿರುವುದು ಎಷ್ಟು ಕೋಟಿ? ಉಳಿಕೆ ಎಷ್ಟು ಕೋಟಿ ಎಂಬ ಅಂಕಿ ಅಂಶಗಳನ್ನು ಪರಿಶೀಲಿಸಿ. (ಪುಟ 10 ರಲ್ಲಿನ ಪಟ್ಟಿ ನೋಡಿ.)

ಬಜೆಟ್ ಜೊತೆಯಲ್ಲಿ ಜೊತೆಯಲ್ಲಿ 9 ಮಸೂದೆಗಳು ಅನುಮೋದನೆಯಾಗಿವೆ. ಅದರಲ್ಲಿ ಕೆಲವು ಮಹತ್ವದ ಮಸೂದೆಗಳಿವೆ. ಅವುಗಳ ಬಗ್ಗೆ ಕೂಡ ಗಭೀರ ಚರ್ಚೆ ನಡೆಯಲಿಲ್ಲ. ಅಂದರೆ 1,02,742 ಕೋಟಿ ರೂಪಾಯಿಗಳ ಬಡ್ಜೆಟ್ ಮತ್ತು 9 ಮಸೂದೆಗಳು ಕೇವಲ ಒಂದೇ ದಿನದಲ್ಲಿ ಒಪ್ಪಿಗೆ ಆಗಿ ಹೋಯಿತು. ಅಂದರೆ ಇನ್ನು ಮೇಲೆ ಸರ್ಕಾರ ರಾಜರೋಷವಾಗಿ ಹಣವನ್ನು ತನಗಿಷ್ಟ ಬಂದ ರೀತಿಯಲ್ಲಿ ಖರ್ಚು ಮಾಡಬಹುದು.

'ಜಾತಿ' ಕಾರಣ

ಬಡ್ಜೆಟನ್ನು ಗಂಭೀರವಾಗಿ ಒಂದಾದರೂ ಪರಿಶೀಲಿಸಿದರೆ ರಾಜ್ಯಕ್ಕೆ ಇಂತಹ ದುರ್ಗತಿ ಬರಬಾರದಿತ್ತು ಎನಿಸುತ್ತದೆ. ಮುಂಗಡ ಪತ್ರದಲ್ಲಿ ಹಣವನ್ನು ವಿವಿಧ ಬಾಬ್ತುಗಳಿಗೆ ಹಂಚಿಕೆ ಮಾಡಿರುವ ವಿಧಾನ ನೋಡಿದರೆ ಇದು ಈ ರಾಜ್ಯದ ಹಣಕಾಸು ಸಚಿವರ ಮತ್ತು ಮುಖ್ಯಮಂತ್ರಿಗಳ ಖಾಸಗಿ ಆಸ್ತಿ ಅನ್ನುವ ರೀತಿಯಲ್ಲಿ ಹಣದ ಹಂಚಿಕೆ ಆಗಿದೆ. ಮುಂಗಡ ಪತ್ರದಲ್ಲಿ ಮಠ ಮಾನ್ಯಗಳಿಗೆ ಹಣದ ಹಂಚಿಕೆಯ ವಿಧಾನವನ್ನು ನೋಡಿದರೆ ಇದು ಅರ್ಥವಾಗುತ್ತದೆ. ಯಡಿಯೂರಪ್ಪನವರಿಗೆ ಸದಾನಂದ ಗೌಡರಿಗೂ ಇರುವ ವ್ಯತ್ಯಾಸವೇನೆಂದರೆ ಯಡಿಯೂರಪ್ಪ ಒಂದು ನಿರ್ದಿಷ್ಟ ಜಾತಿಯ ಮಠಗಳಿಗೆ ಹಣ ಹಂಚಿದ್ದರು. ಸದಾನಂದಗೌಡರು ಎಲ್ಲಾ ಜಾತಿಯ ಮಠಗಳಿಗೂ ಹಂಚಿದ್ದಾರೆ. ಇದು ಯಾವ ಪರಿಸ್ಥಿಯನ್ನು ಉಂಟು ಮಾಡಿದೆ ಎಂದರೆ ಯಡಿಯೂರಪ್ಪನ ಪರವಾಗಿ ಒಂದು ನಿರ್ದಿಷ್ಟ ಜಾತಿಯ ಮಠಗಳು, ನಂತರ ಹಿಂದುಳಿದ ವರ್ಗಗಳ ಮಠಗಳು ಸದಾನಂದಗೌಡರ ಪರವಾಗಿ ಹಂಚಿಹೋಗಿ ಆ ಮಠಗಳು ಕೂಡ ಜಾತಿ ರಾಜಕಾರಣ, ಪಕ್ಷ ರಾಜಕಾರಣದ ತಿಕ್ಕಾಟಗಳ ಕೇಂದ್ರಗಳಾದಂತಾಗಿವೆ. ನಡೆದಾಡುವ ದೇವರುಗಳು ಎಂದು ಕರೆಯಲ್ಪಡುವ ಸ್ವಾಮೀಜಿಗಳ ಕೀಳು ಜಾತಿ ರಾಜಕಾರಣ ವಿಷಾದನೀಯವಾಗಿದೆ.



ಬಜೆಟ್ ಎಂದರೆ

ಬಜೆಟ್ ಎಂದರೆ ಅದು ಇಡೀ ರಾಜ್ಯದ ಸಮಗ್ರ ಅಭಿವೃದ್ಧಿಗೆ ಒಂದು ಕಾರ್ಯಕ್ರಮ. ಆದರೆ ಈ ವರ್ಷದ ಆಯ ಮತ್ತು ವ್ಯಯದಲ್ಲಿ ರಾಜ್ಯದ ಅಭಿವೃದ್ಧಿಗೆ ಸಂಬಂಧಪಟ್ಟ ಒಂದು ಅಂಶವೂ ಇಲ್ಲ. ಜೊತೆಗೆ ಆಡಳಿತ ಪಕ್ಷಕ್ಕೆ ರಾಜ್ಯದ ಸಮಗ್ರ ಅಭಿವೃದ್ಧಿಯ ಬಗ್ಗೆ ಯಾವುದೇ ದೂರದೃಷ್ಟಿಯೂ ಇಲ್ಲ. ಇಷ್ಟಕ್ಕೂ 'ರಾಜ್ಯದ ಅಭಿವೃದ್ಧಿ' ಎಂಬುದರ ಅರ್ಥ ರಾಜ್ಯ ಕಂಡ ಅತ್ಯಂತ ಭ್ರಷ್ಟ ಮತ್ತು ಹೊಣೆಗೇಡಿ, ಲಜ್ಜೆಗೆಟ್ಟ ಬಿಜೆಪಿ ಸರ್ಕಾರಕ್ಕೆ ಗೊತ್ತೇ ಇಲ್ಲ. ಇವರ ದೃಷ್ಟಿಯಲ್ಲಿ ರಾಜ್ಯದ ಅಭಿವೃದ್ಧಿ ಎಂದರೆ ರಾಜ್ಯದ ಸಂಪತ್ತನ್ನು ಮಠ ಮಾನ್ಯಗಳಿಗೆ ಜಾತಿವಾರು ಹಂಚಿಕೆ ಮಾಡುವುದು ಮತ್ತು ಎಲ್ಲಾ ಇಲಾಖೆಗಳಿಗೆ- ತುಟಿಗಳಿಗೆ ತುಪ್ಪ ಹಚ್ಚುವ ರೀತಿಯಲ್ಲಿ ಹಣ ಸವರುವುದು. ರಾಜ್ಯದ ಆದಾಯವನ್ನು ಕ್ರೋಢೀಕರಿಸಬೇಕು ಮತ್ತು ಪ್ರತಿ ವರ್ಷ ರಾಜ್ಯದ ಆದಾಯವನ್ನು ಹೆಚ್ಚಿಸಲು ಯಾವ ಕಾರ್ಯಕ್ರಮಗಳನ್ನು ರೂಪಿಸಬೇಕು ಮತ್ತು ಅದನ್ನು ಹೇಗೆ ಜಾರಿ ಮಾಡಬೇಕೆಂಬುದರ ಅರಿವು ಇವರಿಗೆ ಇಲ್ಲವೇ ಇಲ್ಲ.

ಮಾನವ ಸಂಪನ್ಮೂಲದ ಅಭಿವೃದ್ಧಿ ಪ್ರಶ್ನೆ

ಇದಕ್ಕೆ ಈ ಬಡ್ಜೆಟ್‌ನಲ್ಲಿ 15,075 ಕೋಟಿಯಷ್ಟು ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳುತ್ತಿದೆ. ಇದರಲ್ಲಿ ಶೇ. 70 ಭಾಗ ಸಂಬಳ ಮತ್ತು ಭತ್ಯೆಗಳಿಗೆ ಹೋಗುತ್ತದೆ. ಇನ್ನು 30 ಭಾಗ ಮಾತ್ರ ಶಿಕ್ಷಣದ ಅಭಿವೃದ್ಧಿಗೆ. ಇದು ಈ ಸರ್ಕಾರದ ರಾಜ್ಯದ ಬೌದ್ಧಿಕ ಸಂಪತ್ತನ್ನು ಹೆಚ್ಚಿಸುವ ಮತ್ತು ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವ ವಿಧಾನ.

ಸರ್ಕಾರವೇ ಬಿಡುಗಡೆ ಮಾಡಿರುವ 2011-12ರ ರಾಜ್ಯದ ಆರ್ಥಿಕತೆ ಕುಸಿಯುತ್ತಿದೆ ಎಂದು ಒಪ್ಪಿಕೊಂಡಿದೆ. ಇದರ ಪ್ರಕಾರ ರಾಜ್ಯದ ನಿವ್ವಳ ಅಂತರಿಕ ಉತ್ಪನ್ನದ (ಜಿ.ಎಸ್.ಡಿ.ಪಿ) ಬೆಳವಣಿಗೆ 8.5 ಎಂದು ಅಂದಾಜಿಸಲಾಗಿತ್ತು. ಆದರೆ ಆಗಿರುವುದು 6.4% ಅತಿನೀರಿಕ್ಷೆಯ ಮಾಹಿತಿ ತಂತ್ರಜ್ಞಾನದ ವಲಯದಲ್ಲೂ ಬೆಳವಣಿಗೆ ಗಣನೀಯ ಮಟ್ಟದಲ್ಲಿ ಕುಸಿದಿದೆ. ಇದರ ಒಟ್ಟು ಪರಿಣಾಮ ರಾಜ್ಯದ ಜನತೆಯ ಜೀವನ ಅಭಿವೃದ್ಧಿ ಆಗಿಲ್ಲ, ಅಂದರೆ ಅವರ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗಲಿಲ್ಲ. ಬೆಲೆ ಏರಿಕೆ ಹೆಚ್ಚಾಗಿದೆ. ಕುಟುಂಬಗಳ ಆದಾಯ ಕಡಿಮೆ ಆಗಿದೆ.

ಅಭಿವೃದ್ಧಿ ಹೆಸರಿನ ವಂಚಕತನ

ಕೇವಲ ಹೈಟೆಕ್ ರಸ್ತೆಗಳ ನಿರ್ಮಾಣ, ಹೈಟೆಕ್ ಆಸ್ಪತ್ರೆಗಳ ನಿರ್ಮಾಣ ಮತ್ತು ಶಿಕ್ಷಣದ ಖಾಸಗೀಕರಣವೇ ಒಂದು ರಾಜ್ಯದ ಅಭಿವೃದ್ಧಿ ಎಂದರೆ ಅದು ಜನರನ್ನು ಮೂರ್ಖರನ್ನಾಗಿಸುವ ವಂಚಕತನದ ಪರಮಾವಧಿ ಆಗುತ್ತದೆ.

ರಾಜ್ಯದಲ್ಲಿ ಬಡ ಕುಟುಂಬಗಳ ಆದಾಯ ಕಡಿಮೆ ಆಗಿರುವುದು, ಜನರು ಜೀವನಕೋಸ್ಕರ ಹಳ್ಳಿಗಳನ್ನು ಬಿಟ್ಟು ವಲಸೆ ಹೋಗುತ್ತಿರುವುದು, ಮಕ್ಕಳಲ್ಲಿ ಪೌಷ್ಟಿಕಾಂಶ ಕಡಿಮೆ ಆಗಿ ಲಕ್ಷಾಂತರ ಮಕ್ಕಳು ರಕ್ತಹೀನತೆಯಿಂದ ನರಳುತ್ತಿರುವುದು. ಇದೇ ಕಾರಣದಿಂದ ದೊಡ್ಡ ಸಂಖ್ಯೆಯಲ್ಲಿ ಮಕ್ಕಳು ಸಾಯುತ್ತಿರುವುದು ಎದ್ದು ಕಾಣುತ್ತಿದೆ. ಇಂತಹ ಸ್ಥಿತಿಯಲ್ಲೂ ರಾಜ್ಯ ಅಭಿವೃದ್ಧಿ ಆಗಿದೆ ಎಂದರೆ ಇದಕ್ಕಿಂತ ಬೇಜವಾಬ್ದಾರಿತನ ಇನ್ನೊಂದಿಲ್ಲ. ರಾಜ್ಯದ 123 ತಾಲ್ಲೂಕುಗಳಲ್ಲಿ ತೀವ್ರ ರೀತಿಯ ಬರಗಾಲವಿದೆಯೆಂದು ರಾಜ್ಯ ಸರ್ಕಾರವೇ ಒಪ್ಪಿಕೊಂಡಿದೆ. ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿ ಆಹಾಕಾರ ಉಂಟಾಗಿದೆ. ಇದರ ಬಗ್ಗೆ ಬಡ್ಜೆಟ್‌ನಲ್ಲಿ ಯಾವ ಪರಿಹಾರ ಇಲ್ಲ. ಕುಡಿಯುವ ನೀರು ಒದಗಿಸಲು ಒಂದು ಕ್ಷೇತ್ರಕ್ಕೆ 30 ಲಕ್ಷ ಹಣ ಎಷ್ಟು ದಿವಸಕ್ಕೆ ಸಾಕಾಗುತ್ತದೆ

ಪುಟ 10ಕ್ಕೆ......

ಕೃಷಿ ಬಜೆಟ್ ಎಂಬ ಬಿಜೆಪಿ ಸರ್ಕಾರದ ರೈತ ದ್ರೋಹ

ಕಳೆದ ವರ್ಷ ಯಡಿಯೂರಪ್ಪನವರು ಬಾರಿ ಬೊಬ್ಬೆ ಹೊಡೆದು ಪ್ರತ್ಯೇಕವಾಗಿ ಮಂಡಿಸಿದ ಕೃಷಿ ಬಜೆಟ್‌ನಲ್ಲಿ ನಿಜಕ್ಕೂ ಬಳಕೆಯಾಗಿದ್ದು ಶೇ.2 ರಷ್ಟು ಮಾತ್ರ, ಅಂದರೆ ಶೇ.98 ರಷ್ಟು ವಂಚನೆ.ಈ ಬಾರಿ ರೈತ ಬಜೆಟ್ ಹೆಸರಿನಲ್ಲಿ 19,660 ಕೋಟಿರೂಗಳ ಪ್ರತ್ಯೇಕ ಬಜೆಟ್ ಮಂಡಿಸಲಾಗಿದೆ.

ಕಳೆದ ಬಜೆಟ್‌ನಲ್ಲಿ ನೀರಾವರಿ, ಕೆರೆ ರಕ್ಷಣೆ ಇತ್ಯಾದಿ ಹೆಸರಿನಲ್ಲಿ ಘೋಷಿಸಲಾದದ್ದು 17,000 ಕೋಟಿಯಾದರೆ ಮಂಜೂರಾಗಿದ್ದು ಕೇವಲ 474 ಕೋಟಿ. ಅದರಲ್ಲಿ ಬಳಕೆಯಾಗಿದ್ದು ಕೇವಲ ಕೇವಲ 328 ಕೋಟಿ. (ಫೆಬ್ರವರಿ 10,2012 ರ ಸುಮಾರಿಗೆ)ಇಂತಹ ದ್ರೋಹ, ಮೋಸದಿಂದಾಗಿಯೇ ಕಳೆದ ವರ್ಷ ರಾಜ್ಯದ ಕೃಷಿ ಉತ್ಪಾದನೆ ಗಂಭಿರವಾಗಿ ಕುಸಿತ ಕಂಡಿದೆ. ರಾಜ್ಯದ ಕೃಷಿ ಬಿಕ್ಕಟ್ಟಿಗೆ ಸಿಲುಕಿದೆ. ತಾನು ರೈತಪರ, ತಾನು ಮಾತ್ರ ರೈತಪರ ಎನ್ನುವ ಬಿಜೆಪಿಯ ಸೋಗಲಾಡಿತನವನ್ನು, ರೈತದ್ರೋಹವನ್ನು ಇನ್ನಾದರೂ ಜನತೆ ಅರಿತು ಬಿಜೆಪಿಗೆ ಸರಿಯಾದ ಪಾಠ ಕಲಿಸಬೇಕಿದೆ.

ಬೀದಿ ಬದಿ ವ್ಯಾಪಾರಿಗಳ ಪ್ರಥಮ ಸಮ್ಮೇಳನ



ಬೀದಿ ವ್ಯಾಪಾರ ನಾಗರಿಕ ಸಮಾಜದ ಅವಿಭಾಜ್ಯ ಅಂಗ. ಜಗತ್ತಿನಲ್ಲೆಡೆ ಎಲ್ಲಾ ದೇಶಗಳ ಪ್ರಮುಖ ನಗರಗಳಲ್ಲಿ ಬೀದಿ ಬದಿ ವ್ಯಾಪಾರಕ್ಕೆ ಸಾಮಾನ್ಯ ಜನತೆಗೆ ಸಹಾಯವಾಗುವ ರೀತಿಯಲ್ಲಿ ಸಮರ್ಪಕ ವ್ಯವಸ್ಥೆ ಕಲ್ಪಿಸಲಾಗಿದೆ. ಕೇಂದ್ರ ಸರಕಾರವು 2009ರಲ್ಲಿ ರಾಷ್ಟ್ರೀಯ ನೀತಿಯನ್ನು ಅಂಗೀಕರಿಸಿ ಬೀದಿ ಬದಿ ವ್ಯಾಪಾರಸ್ಥರಿಗೆ ಸಮರ್ಪಕ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಎಲ್ಲಾ ರಾಜ್ಯಗಳಿಗೆ ನಿರ್ದೇಶನ ನೀಡಿತ್ತು. ದೇಶದ ಸರ್ವೋಚ್ಚ ನ್ಯಾಯಾಲಯವು ಕೂಡಾ ಜನಸಾಮಾನ್ಯರ ಬದುಕಿಗೆ ಪೂರಕವಾದ ಬೀದಿ ಬದಿ ವ್ಯಾಪಾರವನ್ನು ರಕ್ಷಿಸುವಲ್ಲಿ ಸ್ಥಳೀಯಾಡಳಿತ ಮುತುವರ್ಜಿ ವಹಿಸಬೇಕೆಂದು ತೀರ್ಪು ನೀಡಿದೆ.

ವಾಸ್ತವತೆ ಹೀಗಿದ್ದರೂ ನಗರ ಸುಂದರೀಕರಣದ ನೆಪದಲ್ಲಿ ಬೀದಿ ಬದಿ ವ್ಯಾಪಾರಸ್ಥರ ಬದುಕಿಗೆ ಕೊಳ್ಳಿ ಇಡಲು ಮಂಗಳೂರು ಮಹಾ ನಗರ ಪಾಲಿಕೆ ಮುಂದಾದಾಗ ಅದರ ವಿರುದ್ಧ ಬೀದಿ ಬದಿ ವ್ಯಾಪಾರಸ್ಥರು ಸಿಐಟಿಯು ನೇತೃತ್ವದಲ್ಲಿ ನಡೆಸಿದ ಧೀರೋದ್ಧಾತ ಹೋರಾಟ, ಸಾರ್ವಜನಿಕರಿಂದ ದೊರೆತ ವ್ಯಾಪಕ ಬೆಂಬಲ – ಇವೆಲ್ಲದರ ಪರಿಣಾಮವಾಗಿ ಮಹಾ ನಗರ ಪಾಲಿಕೆಯು ಗುಣಾತ್ಮಕ ಮನೋಭಾವವನ್ನು ಹೊಂದುವ ಮೂಲಕ ಪರ್ಯಾಯ ವ್ಯವಸ್ಥೆಗಾಗಿ ಮುಂದಡಿ ಇಟ್ಟಿದೆ. ಮಂಗಳೂರಿನಲ್ಲಿ ನಡೆಸಿದ ಬೀದಿ ಬದಿ ವ್ಯಾಪಾರಸ್ಥರ ಸಂಘಟಿತ ಹೋರಾಟವು ದೇಶಾದ್ಯಂತ ಭಾರೀ ಪ್ರಚಾರವನ್ನು ಪಡೆಯುವ ಮೂಲಕ ಇಡೀ ದೇಶದಲ್ಲೇ ಇತರರಿಗೆ ಮಾದರಿಯೆಂಬಂತಾಗಿದೆ.

ಬೀದಿ ಬದಿ ವ್ಯಾಪಾರಸ್ಥರಿಗೆ ಕೇಂದ್ರ ಸರ್ಕಾರವು ಅಂಗೀಕರಿಸಿದ ರಾಷ್ಟ್ರೀಯ ನೀತಿಯನ್ನು ಕರ್ನಾಟಕದಲ್ಲಿ ತತ್‌ಕ್ಷಣ ಜಾರಿಗೊಳಿಸಬೇಕು, ಆ ಮೂಲಕ ಬೀದಿ ಬದಿ ವ್ಯಾಪಾರಸ್ಥರ ಹಕ್ಕುಗಳನ್ನು ರಕ್ಷಿಸಬೇಕು ಹಾಗೂ ಎಲ್ಲಾ ಬೀದಿ ಬದಿ ವ್ಯಾಪಾರಿಗಳಿಗೆ ಮನೆ ನಿವೇಶನ, ಬಿಪಿಎಲ್ ರೇಶನ್ ಕಾರ್ಡು, ನಿವೃತ್ತ ವೇತನ, ಮಕ್ಕಳಿಗೆ ವಿದ್ಯಾರ್ಥಿ ವೇತನ, ವೈದ್ಯಕೀಯ ವೆಚ್ಚ ಮುಂತಾದವುಗಳನ್ನು ನೀಡುವ ಮೂಲಕ ಸಾಮಾಜಿಕ ಭದ್ರತೆಯನ್ನು ಒದಗಿಸಬೇಕೆಂಬ ಬೇಡಿಕೆಯೊಂದಿಗೆ ಮಾರ್ಚ್ 29ರಂದು ಮಂಗಳೂರಿನ ನಾಸಿಕ್ ಭವನದಲ್ಲಿ ಏರ್ಪಡಿಸಲಾದ ಬೀದಿ ಬದಿ ವ್ಯಾಪಾರಸ್ಥರ ಪ್ರಥಮ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಕಡಲತಡಿ

ವರದಿ : ವಾ.ಉ.

ಮಂಗಳೂರಿನಲ್ಲಿ ಬೀದಿ ಬದಿ ವ್ಯಾಪಾರಸ್ಥರ ಹೋರಾಟಗಳಿಗೆ ಮಾರ್ಗದರ್ಶನ ನೀಡಿದ್ದ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿಯವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. "ಟೈಗರ್" ಹೆಸರಿನ ತ್ಯಾಜ್ಯ ವಿಲೇ ಮಾಡುವ ಪಾಲಿಕೆಯ ಲಾರಿ ಹಾಗೂ ಸಿಬ್ಬಂದಿಗಳನ್ನು ಬಳಸಿ ಬೀದಿ ವ್ಯಾಪಾರಸ್ಥರ ಮೇಲೆ ನಡೆಸುತ್ತಿದ್ದ ದಾಳಿಯ ಬಗ್ಗೆ ಮಾಧ್ಯಮದವರು ಚೆಲ್ಲಿದ ಬೆಳಕಿನಿಂದ, ಸಿಐಟಿಯುವಿನ ಅರಿವಿಗೆ ಮಾಹಿತಿ ಲಭ್ಯವಾದುದರ ಹಿನ್ನೆಲೆಯಲ್ಲಿ ಸಿಐಟಿಯು ಮಧ್ಯಪ್ರವೇಶ ಮಾಡುವಂತಾಯಿತು. ಸಿಐಟಿಯು ನೇತೃತ್ವದಲ್ಲಿ ಬೀದಿ ಬದಿ ವ್ಯಾಪಾರಸ್ಥರು ಸೆಡ್ಡು ಹೊಡೆದು ನಿಂತಾಗ ಪಾಲಿಕೆಯೇ ಮಣಿಯಬೇಕಾಯಿತು. ಮಹಾನಗರ ಪಾಲಿಕೆಯ ಬಿಜೆಪಿ ಆಡಳಿತ ಈ ದಾಳಿಗಳಿಗೆ ಕುಮ್ಮಕ್ಕು ನೀಡುತ್ತಿದೆಯೆಂದು ಅರಿತ ಹೋರಾಟಗಾರರು, ಬಿಜೆಪಿ ಹಾಗೂ ನಿಷ್ಕ್ರೀಯ ಕಾಂಗ್ರೆಸ್ ಬಗ್ಗೆ ಸ್ಪಷ್ಟ ತಿಳುವಳಿಕೆ ಪಡೆಯುವಂತಾಯಿತು. ತಮ್ಮ ಮೇಲಿನ ದಾಳಿ ದೌರ್ಜನ್ಯಗಳನ್ನು ಪ್ರತಿಭಟಿಸಿ ನಿಂತವರು ಬೀದಿ ಬದಿ ವ್ಯಾಪಾರಿಗಳೇ ಎಂದು ವಸಂತ ಆಚಾರಿ ವಿವರಿಸಿದರು.

ಈ ಹೋರಾಟಗಳ ಫಲವಾಗಿ ಮಂಗಳೂರು ಮಹಾ ನಗರ ಪಾಲಿಕೆ ಪಾಲಿಕಾ ಮಟ್ಟದ ಸಮಿತಿಯೊಂದನ್ನು ರಚಿಸಿದ್ದು, ರಾಷ್ಟ್ರೀಯ ನೀತಿಯಂತೆ ಅದರಲ್ಲಿ ಬೀದಿ ಬದಿ ವ್ಯಾಪಾರಿಗಳ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಲಾಗಿದೆ. ಬೀದಿ ಬದಿ ವ್ಯಾಪಾರಿಗಳ ವ್ಯಾಪ್ತಿಯಲ್ಲಿ ತಳ್ಳುಗಾಡಿ ಹಾಗೂ ಇತರ ಅಂತಹ ಬೀದಿ ಬದಿ ದುಡಿಮೆಗಾರರನ್ನು ತರಬೇಕೆಂದೂ ಒತ್ತಾಯಿಸಲಾಗುವುದು ಎಂದೂ ವಸಂತ ಆಚಾರಿ ತಿಳಿಸಿದರು.

ಆದರೆ ಕೇಂದ್ರ ಸರಕಾರವು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಹೂಡಿಕೆಗೆ ಅವಕಾಶ ನೀಡುವ ಮೂಲಕ ಮತ್ತೆ ಬೀದಿ ಬದಿ ವ್ಯಾಪಾರಿಗಳು ಸೇರಿದಂತೆ ಲಕ್ಷಾಂತರ ಬಡ ವ್ಯಾಪಾರಿಗಳ ಮೇಲೆ ಪ್ರಹಾರಕ್ಕೆ ಮುಂದಾಗಿದೆ. ಈ ಬಗ್ಗೆ ಸಂಘಟಿತ ಹೋರಾಟ ಅಗತ್ಯ ಎಂದು ಹೇಳಿದರು.

ಸಮ್ಮೇಳನದ ಅತಿಥಿಯಾಗಿದ್ದ ಸಿಐಟಿಯು ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಮಾತನಾಡಿ, ಮಂಗಳೂರಿನಲ್ಲಿ ಬೀದಿ ಬದಿ ವ್ಯಾಪಾರಿಗಳು ನಡೆಸಿದ ಹೋರಾಟ ಚಾರಿತ್ರಿಕ. ಇದು ಇತರೆ ಅಸಂಘಟಿತ ಕಾರ್ಮಿಕರಿಗೂ ಮಾರ್ಗದರ್ಶಕ. ಮಹಾನಗರ ಪಾಲಿಕೆ ಬೀದಿ ಬದಿ ವ್ಯಾಪಾರಿಗಳ ರಾಷ್ಟ್ರೀಯ ನೀತಿಯನ್ನು ಸಮರ್ಪಕವಾಗಿ ಜಾರಿಗೆ ತರಬೇಕು ಎಂದರು.

ಇದೇ ಸಂದರ್ಭದಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಸಿಐಟಿಯು ವತಿಯಿಂದ ಗುರುತಿನ ಚೀಟಿ ವಿತರಿಸಲಾಯಿತು. ★



ಸಮ್ಮೇಳನದ ನಿರ್ಣಯಗಳು

ಎಲ್ಲಾ ಬೀದಿ ಬದಿ ವ್ಯಾಪಾರಿಗಳನ್ನು 'ರಾಷ್ಟ್ರೀಯ ಸ್ವಾಸ್ಥ ಭೀಮಾ ಯೋಜನೆ'ಯ ವ್ಯಾಪ್ತಿಗೆ ತಂದು ಸ್ಮಾರ್ಟ್ ಕಾರ್ಡ್ ನೀಡಬೇಕು. ವಿಮಾ ಮೊತ್ತವನ್ನು ರೂ.30 ಸಾವಿರದಿಂದ ರೂ.50 ಸಾವಿರಕ್ಕೆ ಹೆಚ್ಚಿಸಬೇಕು.

ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ಹೂಡಿಕೆಯ ಪ್ರಸ್ತಾಪವನ್ನು ಕೇಂದ್ರ ಸರ್ಕಾರ ಹಿಂದಕ್ಕೆ ಪಡೆಯಬೇಕು.

ಬೀದಿ ಬದಿ ವ್ಯಾಪಾರಿಗಳಿಗೆ ಸ್ವಂತ ಮನೆ ನಿರ್ಮಿಸಲು ಅವಶ್ಯವುಳ್ಳ ನಿವೇಶನವನ್ನು ಸರಕಾರ ಒದಗಿಸಬೇಕು.

ಮಂಗಳೂರಿನಲ್ಲಿ ಬೀದಿ ವ್ಯಾಪಾರಸ್ಥರಿಗೆ ಮಹಾನಗರ ಪಾಲಿಕೆ ವ್ಯಾಪಾರ ಮಾಡಲು ಸಮರ್ಪಕ ಜಾಗಗಳನ್ನು ಶೀಘ್ರದಲ್ಲೇ ಗುರುತಿಸಿ ಒದಗಿಸಬೇಕು.

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸುಮಾರು ಐನೂರಕ್ಕೂ ಹೆಚ್ಚು ಮಂದಿ ಬೀದಿ ವ್ಯಾಪಾರಿಗಳಿದ್ದು, ಅದರಲ್ಲಿ 450ರಷ್ಟು ಮಂದಿ ಬೀದಿ ಬದಿ ವ್ಯಾಪಾರಸ್ಥರ ಸಂಘದ ಸದಸ್ಯರಾಗಿರುತ್ತಾರೆ. ಈ ಸದಸ್ಯರಲ್ಲಿ 250 ಮಂದಿ ಸಮ್ಮೇಳನದ ಪ್ರತಿನಿಧಿಗಳಾಗಿ ಭಾಗವಹಿಸಿರುವುದು, ಹೋರಾಟಗಳು ಅವರಲ್ಲಿ ಸ್ಫೂರ್ತಿ ಮತ್ತು ಧೈರ್ಯವನ್ನು ಮೂಡಿಸಿದುದರ ಸಂಕೇತಗಳಾಗಿವೆ.

ಸಮ್ಮೇಳನದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಿ.ಎಂ.ಹಸನ್ ಅವರು ನಿರರ್ಗಳವಾಗಿ ಮಾತನಾಡಿದ್ದನ್ನು, ಮರು ದಿನ ಕೆಲವು ಪತ್ರಿಕೆಗಳು ವಿಶೇಷವಾಗಿ ವರದಿ ಮಾಡಿದ್ದವು. ಅಷ್ಟು ಮಾತ್ರವಲ್ಲ ಬೀದಿ ಬದಿ ವ್ಯಾಪಾರಿಗಳು ವ್ಯಾಪಾರದ ಸಂದರ್ಭ ತೂಕದ ಕಲ್ಲಿನಲ್ಲಿ ಯಾವುದೇ ರೀತಿಯ ವ್ಯತ್ಯಾಸ ಮಾಡದೆ, ಗ್ರಾಹಕರಿಗೆ ಮೋಸ ಮಾಡದೆ, ಪ್ರಾಮಾಣಿಕವಾಗಿ ವ್ಯಾಪಾರ ಮಾಡಬೇಕೆಂಬ ಬುದ್ಧಿವಾದ ಹೇಳುವ ಮೂಲಕ ಬೀದಿ ಬದಿ ವ್ಯಾಪಾರಿಗಳ ಗೌರವವನ್ನೂ ಹೆಚ್ಚಿಸಬೇಕೆಂಬ ಕಿವಿ ಮಾತನ್ನೂ ಅವರು ಹೇಳಿದರು.

ಪ್ರತಿನಿಧಿ ಅಧಿವೇಶನದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಮುಹಮ್ಮದ್ ಮುಸ್ತಾಫ ವರದಿ ಮಂಡಿಸಿದರು. ಸಂಘದ ಗೌರವಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್ ಇಡೀ ಸಮ್ಮೇಳನದ ಕಲಾಪಗಳನ್ನು ನಿರೂಪಿಸಿ ಮಾರ್ಗದರ್ಶನ ನೀಡಿದ್ದಲ್ಲದೆ, ಕಳೆದ ಮೇ 12 ರಿಂದ ಸಿಐಟಿಯು ಸಂಪರ್ಕ ಹೊಂದಿದ ಮೇಲೆ ಹೇಗೆ ಬೀದಿ ಬದಿ ವ್ಯಾಪಾರಸ್ಥರು ತಮ್ಮ ಸಮರಧೀರ ಹೋರಾಟಗಳನ್ನು ರೂಪಿಸುತ್ತಾ ಬಂದ ಹಿನ್ನೆಲೆಯನ್ನು ಸ್ಫೂರ್ತಿಯುತವಾಗಿ ವಿವರಿಸಿದರು.

ಪ್ರತಿನಿಧಿ ಸದಸ್ಯರು ಪ್ರದೇಶವಾರು 8 ಗುಂಪುಗಳಲ್ಲಿ ಕಾರ್ಯದರ್ಶಿಯ ವರದಿಯ ಬಗ್ಗೆ ಚರ್ಚೆ ನಡೆಸಿದರು. ಸಂಘಟನೆ ದುರ್ಬಲವಾಗಿರುವ ಕಡೆಗಳಲ್ಲಿ ಸಂಘಟನೆ ಬಲಪಡಿಸುವ ಬಗ್ಗೆ ಚರ್ಚೆ ನಡೆಸಲಾಯಿತು ಮತ್ತು ಈ ಎಂಟೂ ಪ್ರದೇಶಗಳಲ್ಲಿ ತಲಾ ಐದೈದು ಮಂದಿಯ ಸ್ಥಳೀಯ ಘಟಕಗಳ ಸಮಿತಿ ಸದಸ್ಯರ ಆಯ್ಕೆ ನಡೆಸಿದರು.

ಹೊಸ ಸಮಿತಿ ಆಯ್ಕೆ

ಪ್ರತಿನಿಧಿ ಸಮ್ಮೇಳನವು ಬೀದಿ ಬದಿ ವ್ಯಾಪಾರಿಗಳ ಸಂಘದ ಮಂಗಳೂರು ನಗರ ಸಮಿತಿಗೆ ಪ್ರತಿ ಘಟಕಗಳಿಂದ ಕನಿಷ್ಠ ಮೂರು ಮಂದಿ ಇರುವಂತೆ 36 ಮಂದಿಯ ನಗರ ಸಮಿತಿಯನ್ನು ಆಯ್ಕೆ ಮಾಡಿರುತ್ತದೆ. ಈ ಸಮಿತಿಯು ತಮ್ಮಲ್ಲಿ 13 ಮಂದಿ ಪದಾಧಿಕಾರಿಗಳನ್ನು ಆಯ್ಕೆ ಮಾಡಿತು. ಸಂಘದ ಗೌರವಾಧ್ಯಕ್ಷರಾಗಿ ಸುನಿಲ್ ಕುಮಾರ್ ಬಜಾಲ್, ಅಧ್ಯಕ್ಷರಾಗಿ ಮಹಮ್ಮದ್ ಮುಸ್ತಾಫ, ಪ್ರಧಾನ ಕಾರ್ಯದರ್ಶಿಯಾಗಿ ಸಂತೋಷ್ ಕುಮಾರ್, ಖಜಾಂಚಿಯಾಗಿ ಮುಹಮ್ಮದ್ ಆಸೀಫ್ ಆಯ್ಕೆಯಾಗಿರುತ್ತಾರೆ. ತೀರಾ ಹೊಸ ಕಾರ್ಮಿಕ ಸಂಘಟನೆಯಾದರೂ, ಬೀದಿ ಬದಿ ವ್ಯಾಪಾರಸ್ಥರೇ ಸಂಘಟನೆಯ ಪ್ರಮುಖ ಜವಾಬ್ದಾರಿಗಳನ್ನು ವಹಿಸಿಕೊಂಡಿರುವುದು ಅವರು ಹೋರಾಟಗಳಿಂದ ಕಲಿತ ಪಾಠಗಳಿಗೆ ಸಾಕ್ಷಿಯಾಗಿದೆ.

ಸಮ್ಮೇಳನದ ವೇದಿಕೆಯಲ್ಲಿ ಅತಿಥಿಗಳಲ್ಲದೆ ಈ ಹಿಂದಿನ ಸಂಘದ ಪದಾಧಿಕಾರಿಗಳಾದ ಬಿ.ಎಂ.ಹಸನ್, ಮುಹಮ್ಮದ್ ಮುಸ್ತಾಫ, ಸಂತೋಷ್ ಕುಮಾರ್, ಮುಹಮ್ಮದ್ ಆಸೀಫ್, ಶೋಭಾ ಮತ್ತಿತರರು ಉಪಸ್ಥಿತರಿದ್ದರು.

* ಭೂ ಸುಧಾರಣಾ ಕಾಯ್ದೆಗೆ ತರುತ್ತಿರುವ ರೈತದ್ರೋಹಿ ತಿದ್ದುಪಡಿ ವಾಪಸ್ಸಾತಿಗಾಗಿ
* ಬಗರ್ ಹುಕುಂ ಸಾಗುವಳಿದಾರರ ಜಮೀನಿಗೆ ಹಕ್ಕು ಪತ್ರಕ್ಕಾಗಿ
* ಅರಣ್ಯ ಭೂಮಿ ಸಾಗುವಳಿ ಸಕ್ರಮಕ್ಕಾಗಿ, ಅರಣ್ಯ ಹಕ್ಕು ಕಾಯ್ದೆಯ ಸಮರ್ಪಕ ಜಾರಿಗಾಗಿ
* ನಗರ, ಪಟ್ಟಣ, ಗ್ರಾಮಾಂತರದ ಬಡವರಿಗೆ ಉಚಿತ ನಿವೇಶನಕ್ಕಾಗಿ

ಮನೆ-ನಿವೇಶನ, ಭೂಮಿ ಹಕ್ಕಿಗಾಗಿ
ಮೇ 21, 2012 ರಿಂದ ರಾಜಧಾನಿ ಬೆಂಗಳೂರಿನಲ್ಲಿ

ಅನಿರ್ದಿಷ್ಟಾವಧಿ ಮಹಾ ಧರಣಿ

ಆರ್.ರಾಮಕೃಷ್ಣ

ಭೂಮಿ ಮತ್ತು ಮನೆ ನಿವೇಶನದ ಪ್ರಶ್ನೆಯು ಕರ್ನಾಟಕ ರಾಜ್ಯದ ಜನರ ಒಂದು ಜ್ವಲಂತ ಪ್ರಶ್ನೆಯಾಗಿದೆ. ಒಂದು ಗಂಭೀರ ಬಿಕ್ಕಟ್ಟಾಗಿದೆ. ಹಲವು ಹೋರಾಟ, ಆ ಹೋರಾಟಗಳಿಂದ ಗಳಿಸಿಕೊಂಡ ಒಂದಷ್ಟು ಪ್ರತಿಫಲ ನಮ್ಮೆದುರಿಗಿದ್ದರೂ ಸಮಗ್ರ ದೃಷ್ಟಿಯಿಂದ ನೋಡಿದಾಗ ರಾಜ್ಯದಲ್ಲಿ ಭೂಮಿಯ ಪ್ರಶ್ನೆಯು ಇಲ್ಲಿಯವರೆವಿಗೂ ಸಮರ್ಪಕವಾಗಿ ಇತ್ಯರ್ಥ ಕಾಣದ ಒಂದು ಸಮಸ್ಯೆಯಾಗಿ ಮುಂದುವರಿಯುತ್ತಲೇ ಇದೆ.

ಕೇರಳ, ಪಶ್ಚಿಮ ಬಂಗಾಳ, ತ್ರಿಪುರದಂತಹ ರಾಜ್ಯಗಳು ಹಲವು ದಶಕಗಳ ಹಿಂದೆಯೇ ಈ ಭೂಮಿ ಸಮಸ್ಯೆಯ ಪ್ರಧಾನ ಪ್ರಶ್ನೆಯನ್ನು ನಿರ್ಣಾಯಕವಾಗಿ ಇತ್ಯರ್ಥ ಪಡಿಸಿಕೊಳ್ಳಲು ಸಾಧ್ಯವಾಗಿದೆ. ಆದರೆ ಜನರ ಚಳುವಳಿ, ಪ್ರಜಾಸತ್ತಾತ್ಮಕ ಚಳುವಳಿ ಕೇರಳ, ಬಂಗಾಳಗಳಷ್ಟು ಬಲಶಾಲಿಯಲ್ಲದ ಕರ್ನಾಟಕ ರಾಜ್ಯದಲ್ಲಿ ಈ ಪ್ರಶ್ನೆ ಇನ್ನೂ ಇತ್ಯರ್ಥ ಆಗಬೇಕಾದ ಪ್ರಶ್ನೆಯಾಗಿಯೇ ಉಳಿದಿದೆ.

ಸಮಾಜದಲ್ಲಿ ಬಡವ, ಶ್ರೀಮಂತ, ಕಾರ್ಮಿಕ, ಮಾಲಿಕ, ವ್ಯಾಪಾರಸ್ತ ಎನ್ನುವ ಬೇಧವಿಲ್ಲದೇ ಎಲ್ಲರಿಗೂ ಅನ್ನ, ಆಹಾರ ಬೇಕೇ ಬೇಕಾಗುತ್ತದೆ. ಸಕಲ ಜನ ವಿಭಾಗಗಳಿಗೂ ಅತ್ಯವಶ್ಯಕವಾದ ಈ ಅನ್ನವನ್ನು ಬೆಳೆಯುವವರು ನಿಜವಾದ ಅರ್ಥದಲ್ಲಿ ಶ್ರಮಿಕರಾದ ರೈತರು, ಕೂಲಿಕಾರರು. ಆದರೆ ಹೊಲ, ಗದ್ದೆ ತೋಟಗಳಲ್ಲಿ ಬೆವರು ಹರಿಸಿ ನಿಜವಾಗಿಯೂ ಯಾರು ದುಡಿಯುತ್ತಾರೋ ಅವರ ಕೈಯಲ್ಲಿ ಬಹುತೇಕ ಆ ಭೂಮಿಯ ಮಾಲಿಕತ್ವ ಇಲ್ಲ, ಅಥವಾ ಅವರ ಅಗತ್ಯಕ್ಕೆ ಯಾವ ರೀತಿಯಲ್ಲೂ ಸಾಲದ ತುಂಡು ಭೂಮಿಗೆ ಮಾತ್ರ ಅವರು ಒಡೆಯರು. ಮತ್ತೊಂದೆಡೆ ಭೂಮಿಯ ಮೇಲೆ ಒಂದು ಹನಿ ಬೆವರನ್ನು ಸುರಿಸದ ಭೂಮಾಲಿಕರು, ಶ್ರೀಮಂತರು, ದೊಡ್ಡ ಪ್ರಮಾಣದಲ್ಲಿ ಭೂಮಿಯ ಒಡೆತನ ಹೊಂದಿರುವ ವಿಪರ್ಯಾಸದ ಪರಿಸ್ಥಿತಿ ರಾಜ್ಯದಲ್ಲಿ ಮುಂದುವರಿದೇ ಇದೆ.

ನಿವೇಶನದ ಪ್ರಶ್ನೆಯಲ್ಲೂ ಅಷ್ಟೆ. ಸಮಾಜದ ಸಂಪತ್ತನ್ನು ಸೃಷ್ಟಿಸುವ ಈ ಗ್ರಾಮಾಂತರದ ಬಡ ಜನರು, ಪಟ್ಟಣ, ನಗರ ಪ್ರದೇಶಗಳ ಸಂಘಟಿತರ ಕಾರ್ಮಿಕರು, ಬಡವರು ದುಡಿಯುವ ಜನರು ಹಗಲೆಲ್ಲಾ ಮೈ ಹಣ್ಣಾಗುವಂತೆ ದುಡಿದರೂ ರಾತ್ರಿ ನೆಮ್ಮದಿಯಾಗಿ ನಿದ್ರೆ ಮಾಡಲು ಆಸರೆಯಾಗಿ ಒಂದು ಸ್ವಂತ ಮನೆ ಕಟ್ಟಿಕೊಳ್ಳಲು ಅವರಿಗೆ ತಮ್ಮದು ಎಂಬ ಒಂದು ನಿವೇಶನ ಇಲ್ಲದ ಪರಿಸ್ಥಿತಿಯೇ ಬಹಳ.

ಆಳುವವರು, ತಾವಾಗಿ ಭೂಮಿಯನ್ನು ಕೊಡದಾಗ ಉಳುವ ರೈತರು ತಮ್ಮ ತುಂಡು ಭೂಮಿ ಸಾಲದೇ ಅನ್ನ ಬೆಳೆಯುವುದಕ್ಕಾಗಿ ತಮ್ಮ ಜಮೀನಿನ ಪಕ್ಕದ ಸರ್ಕಾರಿ ಜಮೀನನ್ನೋ, ಗೋಮಾಳವನ್ನೋ, ಅರಣ್ಯ ಭೂಮಿ ಹೆಸರಿನ ಪಾಳು ಬಿದ್ದ ಭೂಮಿಯನ್ನೋ ಉತ್ತು, ಬಿತ್ತಿ ವ್ಯವಸಾಯ ಮಾಡುತ್ತಾ ತಮ್ಮ ಅನ್ನ ತಾವು ಬೆಳೆದುಕೊಳ್ಳುತ್ತಾ ದೇಶದ ಆಹಾರ ಭದ್ರತೆಗೂ ಕಾಣಿಕೆ ಕೊಡುತ್ತಾ ಬರುತ್ತಿದ್ದಾರೆ. ರೈತರ ಇಂತಹ ಒತ್ತುವರಿ ಸಾಗುವಳಿಯನ್ನು ಸಕ್ರಮ ಮಾಡಿ ಭೂಮಿಯ ಮೇಲೆ ಕಾನೂನು ಬದ್ಧ ಹಕ್ಕು ನೀಡಿ ಎಂಬ ಕೂಗು ಇಂದು ನೆನ್ನೆಯದಲ್ಲ.



ಇವೆಲ್ಲ ಇತ್ಯರ್ಥವಾಗಬೇಕಾದ ಒಂದು ಪ್ರಶ್ನೆಗಳು. ಇದಾಗ ಬೇಕಾದರೆ ರಾಜ್ಯದಲ್ಲಿ ಸಮಗ್ರ ಭೂ ಸುಧಾರಣೆಯಾಬೇಕು. ಭೂ ಸುಧಾರಣಾ ಕಾನೂನು ಜಾರಿಗೆ ಬರಬೇಕು. ಅದು ಹೀಗಿರುವ ಹಾಗೆ ಅದೇ ರೀತಿಯಲ್ಲಿ ಜಾರಿಯಾದರೆ ಆಗದು. ಇರುವ ಕಾನೂನಿಗೆ ಜನಪರವಾದ ತಿದ್ದುಪಡಿ ತಂದು ಜಾರಿ ಮಾಡಬೇಕು. ದೇವರಾಜ ಅರಸು ಅವರ ಕಾಲದ ಭೂ ಸುಧಾರಣೆ, ಉಳುವವರಿಗೆ ಭೂಮಿ ಹಂಚುವ ಕಾರ್ಯ ರಾಜ್ಯದಲ್ಲಿ ಜಾರಿಯಾಗಿರುವುದು ತುಂಬಾ ಸೀಮಿತವಾದದ್ದು. ಅದು ಸಾಲದು. ಸಮಗ್ರವಾಗಿ ಜಾರಿಗೆ ಬರಬೇಕು ಎಂಬ ಬೇಡಿಕೆ ಇರುವಾಗಲೇ ಭೂ ಸುಧಾರಣೆಯ ಮೂಲ ಆಶಯವನ್ನೇ ಮಣ್ಣುಪಾಲು ಮಾಡುವ ರೀತಿಯಲ್ಲಿ ರಾಜ್ಯ ಬಿಜೆಪಿ ಸರ್ಕಾರ ಕೃಷಿ ಆದಾರಿತ ಉದ್ದಿಮೆಗಳಿಗೆ ಭೂಮಿ ನೀಡಲು ಅವಕಾಶ ನೀಡುವ ಹೆಸರಿನಲ್ಲಿ ಕಾಯ್ದೆಗೆ ರೈತದ್ರೋಹಿ ತಿದ್ದುಪಡಿ ತರಲು ಹೊರಟಿದೆ. (ಈ ಬಗೆಗೆ ಇದೇ ಸಂಚಿಕೆಯಲ್ಲಿರುವ ಪ್ರತ್ಯೇಕ ಲೇಖನವನ್ನು ನೋಡಿ.)

ಈ ನಮ್ಮ ಆಳುವ ಜನ ಭೂಮಿಯ ಪ್ರಶ್ನೆಯ ಕುರಿತು ಯೋಚಿಸುತ್ತಿರುವುದೇನು ? ಕಳೆದ ಎರಡು ದಶಕಗಳ ಜಾಗತೀಕರಣ ಉದಾರೀಕರಣ ನೀತಿಗಳು ಸೃಷ್ಟಿಸಿರುವ ಪರಿಸ್ಥಿತಿ ಏನು ? ಎಂಬುದಕ್ಕೆ ಇದೂ ಒಂದು ಸಾಕ್ಷಿ.

ಭೂ ಸುಧಾರಣೆ ಮಾಡುತ್ತೇವೆ... ಭೂಮಿಯಿಲ್ಲದ ಬಡವರಿಗೆ, ಕೂಲಿಕಾರರಿಗೆ ಭೂಮಿ ಕೊಡುತ್ತೇವೆ.... ಎಂಬ ಮಾತುಗಳು ಬರಿ ಬಾಯಿ ಮಾತಿನ ಸುಳ್ಳು ಭರವಸೆಗಳ ರೂಪದಲ್ಲಿ ಕೂಡ ಇಂದು ಉಳಿದಿಲ್ಲ. ಈಗಿರುವ ಭೂ ಸುಧಾರಣಾ ಕಾಯ್ದೆ ಆಧಾರದಲ್ಲಿ ಭೀಮಿತಿಗಿಂತ ಹೆಚ್ಚು ಭೂಮಿ ಹೊಂದಿರುವ ಭೂ ಮಾಲಕರನ್ನು ಈ ಸರ್ಕಾರಗಳು ಮುಟ್ಟುವುದನ್ನು ಕನಸಿನಲ್ಲೂ ಕಲ್ಪಿಸಿಕೊಳ್ಳವಂತಿಲ್ಲ.

ಅಕ್ಷರಶಹ ಈಗ ನಡೆಯುತ್ತಿರುವುದು ಭೂ ಸುಧಾರಣೆಯ ಆಶಯಗಳಿಗೆ ತದ್ವಿರುದ್ದವಾದ ಕೆಲಸ. ದೇಶದ, ರಾಜ್ಯದ ಆಹಾರದ ಬಿಕ್ಕಟಿಗೆ ತಾವೇ ಒಂದು ಹಂತದ ಪರಿಹಾರ ಒದಗಿಸಿರುವ ಬಗರ್ ಹುಕುಂ ಸಾಗುವಳಿದಾರರು, ಅರಣ್ಯ ಭೂ ಒತ್ತುವರಿದಾರರನ್ನು ಸದೆ ಬಡಿದು ಅವರ ಭೂಮಿ ಕಿತ್ತುಕೊಳ್ಳಲು ಹೇಸದ ಮಟ್ಟಕ್ಕೆ ಇತ್ತೀಚಿನ ವರ್ಷಗಳಲ್ಲಿ ಅಧಿಕಾರಕ್ಕೆ ಬಂದ ಆಳುವ ಸರ್ಕಾರಗಳು ಬಂದು ನಿಂತಿವೆ. ಕರ್ನಾಟಕ ರಾಜ್ಯದ ಬಿಜೆಪಿ ಸರ್ಕಾರವಂತೂ ಈ ನಿಟ್ಟಿನಲ್ಲಿ ತಾನು ಎಲ್ಲರಿಗಿಂತ ಮುಂದೆ ಎಂದು ಸಾಬೀತು ಮಾಡುತ್ತಿದೆ.



ಇಷ್ಟು ಮಾತ್ರವೇ ಅಲ್ಲ ಬಡ ರೈತರ ಬಳಿ, ಸಣ್ಣ ಮತ್ತು ಮತ್ತು ರೈತರ ಬಳಿ ಇರುವ ಕಾನೂನು ಬದ್ಧವಾದ ಒಡೆತನ ದಾಖಲೆ ಇರುವ ಭೂಮಿಯನ್ನು ಕಿತ್ತುಕೊಂಡು ಅವರನ್ನು ಒಕ್ಕಲೆಬ್ಬಿಸುವ ಕೆಲಸಕ್ಕೆ ನೀಲನಕ್ಷೆ ಹಾಕಿಕೊಂಡು ಅದನ್ನು ಜಾರಿ ತರುವುದು ಹೇಗೆಂದು ನಾನಾ ಮಾರ್ಗ, ನಾನಾ ಯೋಜನೆಗಳನ್ನು ತಯಾರಿಸುವುದೇ ಬಿಜೆಪಿ ಸರ್ಕಾರದ ಸಚಿವ ಸಂಘುಟದ ಒಂದು ಪ್ರಧಾನ ಆದ್ಯತೆಯ ಕೆಲಸ ಎಂಬಂತಾಗಿದೆ. ಉದಾರೀಕರಣದ ಯುಗದಲ್ಲಿ ಇದಕ್ಕೆ ಕೊಡಲಾದ ಒಂದು ಚಂದದ ಹೆಸರೇ 'ಅಭಿವೃದ್ಧಿ'. ವಿಶ್ವ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ, ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ, ಜವಳಿ ಪಾರ್ಕ್, ಅವಳಿ ಪಾರ್ಕ್, ವಿಮಾನ ನಿಲ್ದಾಣ, ಕಾರಿಡಾರ್ ರಸ್ತೆ, ಹೈ ಟೆಕ್ ರಸ್ತೆ ಎಂದು ಸರ್ಕಾರ ಯಾವ ಮಾತೆತ್ತಿದರೂ ಅದರೆ ಹಿಂದೆ ರೈತರ, ಬಡವರ ಭೂಮಿ ಕಬಳಿಸುವ ಸಂಚು ಇದೆ ಎಂಬುದು ಖಾತ್ರಿ ಎನ್ನುವಂತಾಗಿದೆ.

ಯಡಿಯೂರಪ್ಪ ಸರ್ಕಾರದ ಭೂ ಹಗರಣಗಳು ಯಾರಿಗೆ ಗೊತ್ತಿಲ್ಲ. ಸದಾನಂದಗೌಡರ ಸರ್ಕಾರ ಎಂದರೆ ರೈತ ದ್ರೋಹಿ, ಭ್ರಷ್ಟ ಬಿಜೆಪಿ ಸರ್ಕಾರದ ಎರಡನೇ ಅವತಾರ ಅಷ್ಟೆ. ಸದಾನಂದಗೌಡರ ಸರ್ಕಾರವಾದರೂ ಈ ಮೇಲಿನ ಸಮಸ್ಯೆಗಳ ಪರಿಹಾರ ತಮ್ಮ ಸರ್ಕಾರದ ಆದ್ಯತೆ ಎಂದು ಪರಿಗಣಿಸಿದೆಯೇ ? ಇಲ್ಲ. ಈ ಸರ್ಕಾರದ ಮುಂದೆ ಅಂತಹ ಯಾವ ಯೋಜನೆಯೂ, ಯೋಚನೆಯೂ ಇಲ್ಲ. ಬಂಡವಾಳ... ಹೂಡಿಕೆ... ಬೆಳವಣಿಗೆ... ಅಭಿವೃದ್ಧಿ... ಎಂಬ ಡಂಗೂರ ಬಾರಿಸುತ್ತಿರುವ ಈ ಆಳುವ ಮಂದಿಗೆ ಹಿಂದುಳಿದವರು, ದಲಿತರು, ಆದಿವಾಸಿಗಳು ಮುಂತಾದ ಬಡ ದುಡಿಯುವ ಜನ ವಿಭಾಗಗಳೇ ಹೆಚ್ಚಾಗಿರುವ ಈ ದುಡಿಯುವ ಜನರ ಕೂಗು ಕಿವಿಗೇ ಬೀಳುವುದಿಲ್ಲ.

ಭೂಹೀನರು, ಬಡರೈತರ ಸ್ವಾಧೀನದಲ್ಲಿರುವ ಭೂಮಿಯನ್ನು ಹೇಗಾದರೂ ಮಾಡಿ ಕಬಳಿಸಬೇಕು. ಅದನ್ನು ಬಂಡವಾಳಗಾರರು, ಬಹುರಾಷ್ಟ್ರೀಯ ಕಂಪನಿಗಳ ಬಾಯಿಗೆ, ಭೂಗಳ್ಳ ರಿಯೆಲ್ ಎಸ್ಟೇಟ್ ಲಾಬಿಕೋರರ ಬಾಯಿಗೆ ಹಾಕಬೇಕೆಂಬುದು ಈ ಆಳುವ ಜನರ ತಹ ತಹವಾಗಿದೆ.

ಈ ಧೋರಣೆಯನ್ನು ಒಪ್ಪುವುದು ಎಂದರೆ ಕೃಷಿಕರ, ಕೃಷಿಯ ನಾಶವನ್ನು ಒಪ್ಪಿಕೊಂಡಂತೆ. ಅದು ಸಾಧ್ಯವೇ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಜ್ವಲಂತವಾದ ಈ ಪ್ರಶ್ನೆಗಳ ಆಧಾರದಲ್ಲಿ ಕಳೆದ 2010ರಲ್ಲಿ ನಡೆದ ಆಂದೋಲನ ಇದೀಗ ಗರಿಗೆದರಿ ಮತ್ತೊಮ್ಮೆ ತೀವ್ರಗೊಂಡು ನಮ್ಮ ಮುಂದೆ ಬರುತ್ತಿದೆ. ಈ ಬಾರಿ ಇನ್ನಷ್ಟು ಹುರುಪು ಇನ್ನಷ್ಟು ವಿಶಾಲ ಜನರ ಪಾಲ್ಗೊಳ್ಳುವಿಕೆಯೊಂದಿಗೆ ಈ ಹೋರಾಟ ತನ್ನ ತೀವ್ರತೆ ಪಡೆದುಕೊಳ್ಳುತ್ತಿದೆ.

ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್), ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು) ಈ ಎರಡು ಸಂಘಟನೆಗಳ ಜೊತೆಗೆ ಕರ್ನಾಟಕ ರಾಜ್ಯ ಆದಿವಾಸಿ ಹಕ್ಕುಗಳ ಹೋರಾಟ ಸಮಿತಿಗಳು ಈ ಆಂದೋಲವನ್ನು ತೀವ್ರಗೊಳಿಸುವ ಮೂಲಕ ನಮ್ಮ ನಾಡಿನ ಜನಪರ ಅಭಿವೃದ್ಧಿಗೆ ಪ್ರಮುಖ ಆಧಾರವಾಗಬಹುದಾದ– ನಮ್ಮ ನಾಡಿನ ಜನ ಜೀವನದ ಒಂದು ಪ್ರಧಾನ ಪ್ರಶ್ನೆಯೊಂದನ್ನು ಸಾರ್ವಜನಿಕ ಜೀವನದ ಕೇಂದ್ರ ಸ್ಥಾನಕ್ಕೆ ತರಲು ಸಜ್ಜಾಗಿವೆ.

ಎಸ್ಸೆಫ್ಐ, ಡಿವೈಎಫ್ಐ, ಜನವಾದಿ ಮಹಿಳಾ ಸಂಘಟನೆಗಳಂತಹ ಈ ಹೋರಾಟಕ್ಕೆ ಹೆಗಲಿಗೆ ಹೆಗಲು ಕೊಡಲು ಸಜ್ಜಾಗಿವೆ.

ಮೇ 21, ರಿಂದ ಅನಿಧಿಷ್ಟಾವಧಿ ಮಹಾ ಧರಣ

ಏಪ್ರಿಲ್ ತಿಂಗಳು ಹಾಗೂ ಮೇ ತಿಂಗಳ ಮೊದಲ ವಾರಗಳಲ್ಲಿ ಸ್ಥಳೀಯ ಮಟ್ಟಗಳಲ್ಲಿ ವಿವಿಧ ಸ್ವರೂಪದಲ್ಲಿ ನಡೆಯುವ ಈ ಹೋರಾಟದ ಉತ್ಕರ್ಷವಾಗಿ ಮೇ ತಿಂಗಳ 21 ರಂದು ರಾಜ್ಯದ ನಾನಾ ಜಿಲ್ಲೆಗಳ ಸುಮಾರು ಅರ್ಧ ಲಕ್ಷ ಜನ ರಾಜಧಾನಿ ಬೆಂಗಳೂರಿಗೆ ಬಂದು ತಮ್ಮ ಬದುಕಿನ ಆಧಾರವಾದ, ಬದುಕಿಗೆ

ಪುಟ 12ಕ್ಕೆ......

ಹಣಕಾಸು ಬಂಡವಾಳಿಗರ ಬೆನ್ನು ತಿಕ್ಕುವ ಬಿಜೆಪಿ ಬಜೆಟ್

ಅದೇ ಹಳೆ ಹೆಂಡ-ಆರೆಸ್ಸೆಸ್ ಅಜೆಂಡಾ

ಎಸ್.ಪ್ರಸನ್ನಕುಮಾರ್

ರಾಜ್ಯದ ಮುಖ್ಯಮಂತ್ರಿಗಳಾಗಿ ವಿಧಾನಸೌಧದಲ್ಲಿ ಬಜೆಟ್ ಮಂಡಿಸಲು ಸಾಧ್ಯವೋ, ಇಲ್ಲವೋ ಎಂಬುದು ತಮಗೇ ಗೊತ್ತಿರದ ರಾಜಕೀಯ ಗೊಂದಲದ ಪರಿಸ್ಥಿತಿಯಲ್ಲಿ ಆರ್.ಎಸ್.ಎಸ್. ನಿರ್ದೇಶಿತ ಭ್ರಷ್ಟ ಬಿಜೆಪಿ ಸರಕಾರದ ನಾಯಕರಾಗಿ ಕೊನೆಗೂ ಬಜೆಟ್‌ನ್ನು ಮಂಡಿಸಿದರು. ಒಂದು ಲಕ್ಷ ಕೋಟಿ ಬಜೆಟ್, ಕೃಷಿ ಬಜೆಟ್ ಮತ್ತು ಯುವಜನ ಪರವಾದ ಬಜೆಟ್ ಎಂಬ ಹೆಗ್ಗಳಿಕೆಗಳನ್ನು ಆರೋಪಿಸಿ ಅಗ್ಗದ ಪ್ರಚಾರಗಳನ್ನು ಮಾಡಿ ಬಜೆಟ್ ಮಂಡಿಸಲಾಯಿತು. ಕೃಷಿ ಬಜೆಟ್ ಕರ್ನಾಟಕ ರಾಜ್ಯದಲ್ಲಿ 2ನೇ ಬಾರಿ ಮಂಡಿಸಿ ಕೃಷಿ ಅಭಿವೃದ್ಧಿಯನ್ನು ಭಾರಿ ಸಾಧಿಸಿದ್ದೇವೆಂದು ಆರ್ಭಟ ಮಾಡಿದ್ದಾರೆ. ನಿಜವಾಗಿ ಕೃಷಿಯಲ್ಲಿ ಆಗಿರುವ ಬದಲಾವಣೆ ಏನು ? ಗ್ರಾಮೀಣ ಭಾಗದ ರೈತರು, ಬಡಜನರಿಗೆ ಆಗಿರುವ ಉಪಕಾರವಾದರೂ ಏನು ? ಅಲ್ಲದೇ 1 ಲಕ್ಷ ಕೋಟಿ ಬಜೆಟ್ ಯಾರಿಗಾಗಿ ? ಯಾರ ಕಣ್ಣಿಗೆ ಬೆಣ್ಣೆ ಯಾರ ಕಣ್ಣಿಗೆ ಸುಣ್ಣ ? ಈ ವಿಚಾರಗಳನ್ನು ಅರ್ಥ ಮಾಡಿಕೊಳ್ಳಬೇಕಾದರೆ ಬಜೆಟ್ ಪ್ರಮುಖ ಅಂಶಗಳನ್ನು ಪರಿಶೀಲಿಸುವುದು ಅಗತ್ಯ.

> ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಮಂಡಿಸಿರುವ ಬಜೆಟ್ ಯಾರ ಪರವಾಗಿದೆ. ಅದು ಯಾರ ಹಿತ ಕಾಯುತ್ತದೆ. ಏನೆಲ್ಲ ಅದರಲ್ಲಿ ಏನಿದೆ ? ಓದಿ. ಒಂದು ವಿಶ್ಲೇಷಣೆ ಸಿಐಟಿಯುವಿನ ರಾಜ್ಯ ಪ್ರಧಾನ ಕಾರ್ಯದರ್ಶಿಯವರಿಂದ.

ಕೃಷಿ ಉತ್ಪಾದನೆ ಕುಸಿತ

ಮಾಜಿ ಮುಖ್ಯಮಂತ್ರಿ ಹಾಗೂ ಮುಖ್ಯ ಮಂತ್ರಿ ಪದವಿಗಾಗಿ ರಾಜ್ಯದ ಜನತೆಯ ಹಿತಗಳನ್ನು ಬಲಿಕೊಡಲು ಮುಂದಾಗಿರುವ ಯಡಿಯೂರಪ್ಪ ಕೃಷಿ ಬಜೆಟ್ ಹೆಸರಲ್ಲಿ ಅಗ್ಗದ ಪ್ರಚಾರ ಪಡೆದು ಮಂಡಿಸಿದ ಬಿಜೆಪಿ ಸರಕಾರದ ಕೃಷಿ ಬಜೆಟ್ ಜಾರಿಯ ನಂತರ ರಾಜ್ಯದಲ್ಲಿ ಕೃಷಿ ಉತ್ಪಾದನೆಯು 2010-11ರಲ್ಲಿ 140 ಲಕ್ಷ ಮೆಟ್ರಿಕ್ ಟನ್ ಇದ್ದದ್ದೂ 2011-12ರಲ್ಲಿ 124 ಲಕ್ಷ ಮೆಟ್ರಿಕ್ ಟನ್‌ಗಳಿಗೆ ಕುಸಿದು ನಿವ್ವಳವಾಗಿ 16 ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯಗಳ ಉತ್ಪಾದನೆ ಕುಸಿತವಾಗಿದೆ. ಅಲ್ಲದೇ ರೈತರ ಆತ್ಮ ಹತ್ಯೆಗಳು ಹೆಚ್ಚಾಗಿವೆ. ಯಡಿಯೂರಪ್ಪನ ವಾರಸುದಾರರಾಗಿ ಅಧಿಕಾರ ಸ್ವೀಕರಿಸಿರುವ ಸದಾನಂದ ಗೌಡರು "ಯಾವ ಮನೆಯ ಗಿಳಿ ಆ ಮನೆಯ ಮಾತುಗಳನ್ನೇ ಆಡುವುದು" ಎಂಬ ಗಾದೆ ಮಾತಿನಂತೆ ರೈತಾಪಿ ಜನರನ್ನು ಮರುಳು ಮಾಡುವ ಅದೇ ತಂತ್ರವನ್ನು ಮುಂದುವರೆಸಿದ್ದೂ ಬಿಜೆಪಿ ಸರಕಾರದ 2ನೇ ಕೃಷಿ ಬಜೆಟ್ ಮಂಡಿಸಿದ್ದಾರೆ. ಅದರಲ್ಲಿ 2012-13 ರ ಕೃಷಿ ಉತ್ಪಾದನೆಯ ಗುರಿಯಾಗಿ 136 ಲಕ್ಷ ಮೆಟ್ರಿಕ್ ಟನ್ ಹೊಂದಲಾಗಿದೆ, ಈ ಗುರಿಯು 2 ವರ್ಷಗಳ ಹಿಂದಿನ ಕೃಷಿ ಉತ್ಪಾದನೆಗಿಂತಲೂ ಕಡಿಮೆಯಾಗಿದೆ.

ಹಳೇ ಹೆಂಡ ಹಾಗೂ ಆರೆಸ್ಸೆಸ್ ಅಜೆಂಡಾ


ಹಾಲಿ ಜಾರಿಯುಲ್ಲಿರುವ ಯೋಜನೆಗಳನ್ನೇ ಬಹುತೇಕ ಮುಂದುವರಿಸಿದ ಸರಕಾರ, 'ಗೋ ಸಂರಕ್ಷಣಾ ಆಯೋಗ' ರಚಿಸಿ ಆರ್.ಎಸ್.ಎಸ್. ಅಜೆಂಡಾ ಜಾರಿಗೆ ಮುಂದಾಗಿದೆ. ರೈತರ ರಕ್ಷಣೆಗೆ ಕ್ರಮಗಳಾಗಲಿ ಬಗರ್ ಹುಕುಂ ರೈತರ ಗೋಳಿಗೆ ಪರಿಹಾರವಾಗಲಿ, ಶೇ 75 ರಷ್ಟಿರುವ ಬಡರೈತರಿಗೆ ವಿಶೇಷ ಅನುದಾನಗಳಾಗಲಿ ಈ ಬಜೆಟ್‌ನಲ್ಲಿ ಭೂತ ಕನ್ನಡಿ ಹಾಕಿ ಹುಡುಕಿದರೂ ಏನೂ ಸಿಗುವುದಿಲ್ಲ. ಕೇಂದ್ರ ಸರಕಾರದ ಬಜೆಟ್‌ನಲ್ಲಿ ಘೋಷಿಸಿದ ಕೃಷಿ ಸಾಲಗಳ ಬಡ್ಡಿ ರಿಯಾಯಿತಿಗಳನ್ನು ತಾವೇ ಮಾಡಿದ ಸಾಧನೆಗಳೆಂಬಂತೆ ಬಿಂಬಿಸಲು ಕಸರತ್ತು ಮಾಡಲಾಗಿದೆ.

ಪಶು ಆಸ್ಪತ್ರೆ ಖಾಸಗೀಕರಣವೇ ಸಾಧನೆಯೇ?

ಗೋವುಗಳ ಬಗ್ಗೆ ಭಾರಿ ಕಾಳಜಿ ವ್ಯಕ್ತಪಡಿಸುವ ಬಿಜೆಪಿ ಸರಕಾರವು ಗೋವು, ದನ ಮುಂತಾದ ಪಶುಗಳಿಗೆ ಅನಾರೋಗ್ಯವಾದರೆ ಸರಕಾರದ ಜವಾಬ್ದಾರಿಯಿಂದ ಚಿಕಿತ್ಸೆಕೊಡಲು ಸರಕಾರಿ ಆಸ್ಪತ್ರೆಗಳನ್ನು ನಡೆಸುವ ಬದಲು, ಖಾಸಗಿ ಮತ್ತು ಸರ್ಕಾರಿ ಸಹಯೋಗದಲ್ಲಿ (ಪಿ.ಪಿ.ಪಿ.– ಪಬ್ಲಿಕ್ ಪ್ರೈವೇಟ್ ಪಾರ್ಟನರ್ ಶಿಪ್) ಆಧಾರದಲ್ಲಿ ಪಶುವೈದ್ಯ ಶಾಲೆಗಳನ್ನು ಆರಂಭಿಸಲು ಟೆಂಡರ್ ಕರೆದಿರುವುದನ್ನು ಒಂದು ಸಾಧನೆಯಂತೆ ಪ್ರಸ್ತಾಪಿಸಲಾಗಿದೆ. ಪಶುಗಳ ಅನಾರೋಗ್ಯದ ಬಗ್ಗೆ ಲಾಭದ ಸಾಧ್ಯತೆಗಳಿಲ್ಲದೇ ಖಾಸಗಿ ಬಂಡವಾಳಗಾರರು ಯಾರು ಮುಂದೆ ಬರುತ್ತಾರೋ ಎಂಬುದು ಸಾವಿರ ಡಾಲರ್ ಪ್ರಶ್ನೆಯಾಗಿದೆ.

ಸಾಲದ ಹೊರೆ

ಜಾತಿವಾದವನ್ನು ಪ್ರೋತ್ಸಾಹಿಸುವ ಮಠಮಾನ್ಯಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ.



ಅಲ್ಲದೇ ಸಾಲದ ಹೊರೆಯು ಶೇ 30 ರಷ್ಟು ಇರುವುದು ಈ ಬಜೆಟ್‌ನ ವಿಶೇಷವಾಗಿದೆ. ಕೃಷಿ ಆವರ್ತ ನಿಧಿಯನ್ನು ರೂ 1000 ಕೋಟಿಗಳಿಗೆ ನಿಗದಿ ಮಾಡಲಾಗಿದೆ.

ಎತ್ತಿನ ಹೊಳೆ ಯೋಜನೆ ಎಂಬ ವಂಚನೆ

ಪರಮಶಿವಯ್ಯನವರ ವರದಿಯನ್ನು ಪ್ರಸ್ತಾಪ ಮಾಡಿದ್ದರೂ ಸಮಗ್ರವಾಗಿ ಕುಡಿಯುವ ನೀರಿನ ಪೂರೈಕೆ ಹಾಗೂ ಕೃಷಿ ನೀರಾವರಿಗೆ ನೀರು ಒದಗಿಸುವ ದಿಶೆಯಲ್ಲಿ ಅಗತ್ಯವಾಗಿರುವ ಯಾವುದೇ ಸಂಪನ್ಮೂಲಗಳನ್ನು ಒದಗಿಸದೇ ಕೇವಲ ಎತ್ತಿನ ಹೊಳೆ ಯೋಜನೆ ಎಂಬ ಕಣ್ಣೊರೆಸುವ ಯೋಜನೆಯನ್ನು ಮಾತ್ರ ಪ್ರಕಟಿಸಲಾಗಿದೆ. ಎತ್ತಿನ ಹೊಳೆ ಯೋಜನೆಯನ್ನು ಮಾತ್ರ ಜಾರಿಗೊಳಿಸಲು ಸರಕಾರ ಪ್ರಯತ್ನಿಸಿದರೆ ಇಡೀ ಪರಮಶಿವಯ್ಯ ವರದಿ ಅಂಶಗಳನ್ನು ಬದಿಗೆ ತಳ್ಳುವ ರಾಜಕೀಯ ತಂತ್ರವಾಗಿ ಮಾತ್ರ ಆಗುತ್ತದೆ ಎಂಬ ಕಾರಣಕ್ಕಾಗಿ ಸ್ವತ: 92 ವರ್ಷಗಳ ವಯೋವೃದ್ಧರಾಗಿರುವ ಶ್ರೀ ಪರಮಶಿವಯ್ಯನವರೇ ಎತ್ತಿನ ಹೊಳೆ ಯೋಜನೆಯ ಕಾಮಗಾರಿ ನಡೆಸಲು ಬರುವ ಬುಲ್ಡೋಜರ್‌ಗಳಿಗೆ ಅಡ್ಡವಾಗಿ ಮಲಗುವುದಾಗಿ ಪ್ರಕಟಿಸಿರುವುದು ಸದರಿ ಯೋಜನೆಯ ನಿಜವಾದ ಪ್ರಯೋಜನವೇನು ಎಂಬುದರ ಕುರಿತು ಹಲವು ಪ್ರಶ್ನೆಗಳನ್ನು ಎತ್ತುತ್ತದೆ. ಟಿ.ಬಿ.ಡ್ಯಾಂ ನ ಹೂಳೆತ್ತುವ ಕುರಿತು ಮಾಡಿರುವ ಪ್ರಸ್ತಾಪವೂ ಕೇವಲ ಮೂಗಿಗೆ ತುಪ್ಪ ಹಚ್ಚುವ ಪ್ರಹಸನವಾಗಿದೆ. ಒಟ್ಟು ಕೃಷಿ ಬಜೆಟ್‌ನ ಗಾತ್ರವು ಕೇವಲ 19,660 ಕೋಟಿಗಳಾಗಿದೆ.

ಒಟ್ಟು ಬಜೆಟ್ ಹಿನ್ನಲೆಯನ್ನು ಗಮನಿಸಿದಾಗ ರಾಜ್ಯದ ಪ್ರಗತಿಯು ತೀವ್ರವಾಗಿ ಕುಂಠಿತವಾಗಿರುವುದು ಸ್ಪಷ್ಟವಾಗುತ್ತದೆ. ಕಳೆದ ವರ್ಷವು ಕೃಷಿ ಬೆಳವಣಿಗೆಯು ನಕಾರಾತ್ಮಕವಾಗಿದ್ದು ಶೇ 2.9 ರಷ್ಟು ಹಿನ್ನಡೆಯಾಗಿದೆ. ಅಲ್ಲದೇ ಕೈಗಾರಿಕಾ ರಂಗದಲ್ಲೂ ಕೇವಲ ಶೇ 3.6 ಮಾತ್ರವಾಗಿದ್ದೂ ಹಿಂದಿನ ವರ್ಷದ ಬೆಳವಣಿಗೆಗೆ ಹೋಲಿಸಿದರೆ ಕಡಿಮೆ ಆಗಿದೆ. ಕರ್ನಾಟಕ ರಾಜ್ಯವು ಇಡೀ ದೇಶದಲ್ಲೇ ನಗರ ಜನಸಂಖ್ಯೆ ವೇಗವಾಗಿ ಬೆಳೆಯುತ್ತಿರುವ ರಾಜ್ಯವಾಗಿರುವುದು, ಹಳ್ಳಿಗಳಿಂದ ರೈತಾಪಿ ಜನರು ಉಪಜೀವನವನ್ನು ನಡೆಸಲಾಗದೇ ಗುಳೆ ಹೋಗಿ 'ಕೆಟ್ಟು ಪಟ್ಟಣ ಸೇರು' ಎಂಬ ಗಾದೆಯಂತೆ ನಗರಗಳಿಗೆ ಹೊಟ್ಟೆಪಾಡಿಗಾಗಿ ವಲಸೆ ಹೆಚ್ಚಾಗುತ್ತಿದೆ. ರಾಜ್ಯ 3 ನೇ ಹಣಕಾಸು ಆಯೋಗವು ಗ್ರಾಮೀಣ ಪ್ರದೇಶಗಳಿಗೆ ಪ್ರತಿ ಗ್ರಾಮ ಪಂಚಾಯತಿಗೆ ರೂ. 15 ಲಕ್ಷದ ವರೆಗೆ ಅನುದಾನವನ್ನು ಒದಗಿಸಲು ಶಿಫಾರಸ್ಸು ಮಾಡಿದ್ದರೂ ಈ ಬಜೆಟ್‌ನಲ್ಲಿಯೂ ಜಾರಿಗೊಳಿಸುವ ಗೋಜಿಗೆ ಹೋಗದೆ ಕೇವಲ ಗ್ರಾಮಪಂಚಾಯತಿಗೆ ರೂ 8 ಲಕ್ಷ ಗಳನ್ನು 8 ಸಾವಿರ ಜನಸಂಖ್ಯೆ ಮೀರಿದ ಪಂಚಾಯತಿಗಳಿಗೆ ಮಾತ್ರ ಹಂಚಿಕೆ ಮಾಡಲಾಗಿದೆ.

ರೇಷನ್‌ಗೆ ಹಣ ಕಡಿತ

2 ರೂ. ಅಕ್ಕಿ ಕೊಡುವುದಿಲ್ಲ ಈ ಸರ್ಕಾರ

ರೇಷನ್ ವ್ಯವಸ್ಥೆಯನ್ನು ಜಾರಿಗೊಳಿಸುವ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ಕಳೆದ ವರ್ಷ ರೂ.2,016.16 ಕೋಟಿಯಿದ್ದ ಮೊತ್ತವನ್ನು ರೂ.1,893.77 ಕೋಟಿಗೆ ಕಡಿತಗೊಳಿಸಲಾಗಿದೆ. ಅಂದರೆ



ಬಿಜೆಪಿ ಪಕ್ಷವು ಅಧಿಕಾರಕ್ಕೆ ಬರುವ ಸಲುವಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿದ ರೂ.2 ಕ್ಕೆ ಒಂದು ಕೆ.ಜಿ. ಯಂತೆ 35 ಕೆ.ಜಿ. ಅಕ್ಕಿಯನ್ನು ಪ್ರತಿ ಕುಟುಂಬಕ್ಕೆ ಕೊಡುವ ಭರವಸೆ ಜಾರಿ ಮಾಡುವುದು ದೂರ ಉಳಿಯಿತು. ಈಗಿರುವ ರೇಷನ್ ಕೂಡ ಕಡಿತ ಮಾಡುವ ಹುನ್ನಾರ ಇದರಿಂದ ಬಯಲಾಗುತ್ತದೆ. ಈಗಾಗಲೇ ಒಂದಲ್ಲ ಒಂದು ನೆಪದಲ್ಲಿ ರೇಷನ್ ಕಾರ್ಡ್‌ಗಳನ್ನು ಕಡಿತ ಮಾಡಲಾಗಿದೆ. ಆದರೆ ಸರಕಾರವು ವಿಶ್ವ ಬಂಡವಾಳಗಾರರ 2 ನೇ ಸಮಾವೇಶವನ್ನು ಜೂನ್ 2012 ರಲ್ಲಿ ನಡೆಸುವ ತಯಾರಿಯ ಭಾಗವಾಗಿ ರೂ.2,000 ಕೋಟಿಗಳನ್ನು ಶ್ರೀಮಂತ ಕೈಗಾರಿಕಾ ಬಂಡವಾಳಗಾರರಿಗೆ ಭೂ ಬ್ಯಾಂಕ್ ಹೆಸರಲ್ಲಿ ಮೀಸಲಿಟ್ಟಿರುವುದು ಸರಕಾರದ ಬಂಡವಾಳಗಾರರ ಪರವಾದ ನಿಷ್ಠೆಯನ್ನು ಸ್ಪಷ್ಟಪಡಿಸುತ್ತದೆ. ಅಲ್ಲದೇ ಕೈಗಾರಿಕಾ ಮಾಲೀಕರಿಗೆ ಹಳೆ ಬಾಕಿ ಇರುವ ಸಬ್ಸಿಡಿ ರೂ.160 ಕೋಟಿ ಬಿಡುಗಡೆ ಮಾಡುವ ಭರವಸೆ ನೀಡಲಾಗಿದೆ. ಶಿಕ್ಷಣ ರಂಗವನ್ನು ಮತ್ತಷ್ಟು ಖಾಸಗಿ ಬಂಡವಾಳಗಾರರಿಗೆ ತೆರೆದಿಡುವ ದಿಶೆಯಲ್ಲಿ ಕಾನೂನು ಮಾಡಲು ಮುಂದಾಗಿದೆ. ಪ್ರತಿ ವರ್ಷ ನವೆಂಬರ 1 ರಂದು ಎಲ್ಲಾ ಶಾಲಾ ಕಾಲೇಜುಗಳು ಮತ್ತು ಸರಕಾರಿ

ಪುಟ 12 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಲಿಷ್ಠ ಅಖಿಲ ಭಾರತ ಪಕ್ಷ ಕಟ್ಟೋಣ

ಎಡ ಐಕ್ಯತೆ ಬೆಸೆಯೋಣ,

20ನೇ ಮಹಾಧಿವೇಶನದಲ್ಲಿ ಮೊಳಗಿದ ಘೋಷ ವಾಕ್ಯ

ವೇದರಾಜ ಎನ್.ಕೆ.



ನಮ್ಮ ಎಲ್ಲ ಚೈತನ್ಯ ಮತ್ತು ಸಂಪನ್ಮೂಲಗಳನ್ನು ಬಳಸಿ ಒಂದು ಬಲಿಷ್ಠ ಅಖಿಲ ಭಾರತ ಪಕ್ಷವನ್ನು ಕಟ್ಟೋಣ. ಸಮಸ್ತ ಪಕ್ಷವನ್ನು ಜನತೆಯತ್ತ, ಅವರ ಸಮಸ್ಯೆಗಳನ್ನೆತ್ತಿಕೊಳ್ಳುವತ್ತ ಒಯ್ಯೋಣ. 20ನೇ ಮಹಾಧಿವೇಶನ ಅದಕ್ಕೆ ಬೇಕಾದ ಸೈದ್ಧಾಂತಿಕ ಉದ್ದೇಶ ಮತ್ತು ರಾಜಕೀಯ ದಿಕ್ಕನ್ನು ಒದಗಿಸುತ್ತದೆ- ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ ಕಾರಟ್ ರವರ ಈ ಉತ್ತೇಜನೆ ತುಂಬುವ ಕರೆ ನೀಡಿದ ಭಾಷಣದೊಂದಿಗೆ ಸಿಪಿಐ(ಎಂ)ನ ಇಪತ್ತನೇ ಮಹಾಧಿವೇಶನ ಕೇರಳದ ಕೋಝಿಕ್ಕೋಡ್‌ನಲ್ಲಿ ಎಪ್ರಿಲ್ 4, 2012 ರಂದು ಉದ್ಘಾಟನೆಗೊಂಡಿತು.

2008ರಲ್ಲಿ ನಡೆದ ಸಿಪಿಐ(ಎಂ)ನ 19ನೇ ಮಹಾಧಿವೇಶನದ ನಂತರದ ನಾಲ್ಕು ವರ್ಷಗಳ ಬೆಳವಣಿಗೆಗಳನ್ನು ಅವಲೋಕಿಸುತ್ತಾ ಕರಾಟ್ ರವರು ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಈ ಅವಧಿಯ ವೈಶಿಷ್ಟ್ಯ ಎಂದರು. 21ನೇ ಶತಮಾನದಲ್ಲಿ ಬಂಡವಾಳಶಾಹಿಯ ಈ ಮೊದಲ ದೀರ್ಘ ಬಿಕ್ಕಟ್ಟು ಒಂದು ತಿರುಗು ಬಿಂದು ಕೂಡ. ಇದು ಯುರೋಪು ಮತ್ತು



ಅಮೆರಿಕ ಸಂಯುಕ್ತ ಸಂಸ್ಥಾನಗಳಂತಹ ಮುಂದುವರಿದ ಬಂಡವಾಳಶಾಹಿ ದೇಶಗಳ ಜನತೆಯನ್ನು ತಟ್ಟಿರುವ ಈ ಬಿಕ್ಕಟ್ಟು ಹಣಕಾಸು ಬಂಡವಾಳ-ಪ್ರೇರಿತ ಜಾಗತೀಕರಣ ಬಹಳ ಕಾಲ ಉಳಿಯಲಾರದು ಎಂಬುದನ್ನು ಎತ್ತಿ ತೋರಿದೆ. ಗ್ರೀಸ್, ಪೋರ್ತುಗಾಲ್ ,ಸ್ಪೇನ್ ಮತ್ತು ಯುರೋಪಿನ ಇತರ ದೇಶಗಳಲ್ಲಿನ ಸಾರ್ವತ್ರಿಕ ಮುಷ್ಕರಗಳು, ಅಮೆರಿಕಾದಲ್ಲಿ ಆರಂಭವಾದ 'ವಾಲ್ ಸ್ಟ್ರೀಟ್ ಆಕ್ರಮಿಸಿಕೊಳ್ಳಿ' ಚಳುವಳಿ ಮತ್ತು ವಿದ್ಯಾರ್ಥಿ-ಯುವಜನರ ಬೃಹತ್ ಪ್ರತಿಭಟನೆಗಳು ನವ-ಉದಾರವಾದಿ ಧೋರಣೆಗಳನ್ನು ಅಂತ್ಯಗೊಳಿಸಬೇಕು ಎಂದು ಆಗ್ರಹಿಸುತ್ತಿವೆ. ಈ ವ್ಯವಸ್ಥೆಯ ವಿರುದ್ಧ ನಡೆಯುತ್ತಿರುವ ಎಲ್ಲ ಹೋರಾಟಗಳಿಗೆ ಸಿಪಿಐ(ಎಂ)ನ ಬೆಂಬಲ ಹಾಗೂ ಸೌಹಾರ್ದವನ್ನು ಪ್ರಕಾಶ ಕಾರಟ್ ವ್ಯಕ್ತಪಡಿಸಿದರು. ಈ ಅವಧಿಯಲ್ಲಿ ಅರಬ್ ದೇಶಗಳಲ್ಲಿ ಎದ್ದಿರುವ ಜನತೆಯ ಹೋರಾಟಗಳ ಅಲೆಗಳನ್ನು ದಿಕ್ಕು ತಪ್ಪಿಸುತ್ತ ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿಯ ಆಕ್ರಾಮಕ ಕ್ರಮಗಳನ್ನು ಖಂಡಿಸುತ್ತ ಇದರ ವಿರುದ್ಧ ನಡೆದಿರುವ ಹೋರಾಟಗಳಿಗೂ ಅವರು ಸಿಪಿಐ(ಎಂ)ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು.

ಯುಪಿಎ ವಿಫಲತೆ

ಅಧಿಕಾರಕ್ಕೆ ಮರಳಿದ ಯುಪಿಎ ನ ಎರಡನೇ ಸರಕಾರದ್ದು ಶೋಚನೀಯ ದಾಖಲೆ ಎನ್ನುತ್ತ ಕಳೆದ ಮೂರು ವರ್ಷಗಳ ಅದರ ಆಡಳಿತದಲ್ಲಿ ಜನಸಾಮಾನ್ಯರ ಶೋಷಣೆ ತೀವ್ರಗೊಂಡಿದೆ ಎಂದರು. ಮತ್ತೆ ದೇಶದ ವಿವಿಧ ಭಾಗಗಳಲ್ಲಿ ರೈತರು ಆತ್ಮಹತ್ಯೆಗಿಳಿಯುತ್ತಿದ್ದಾರೆ, ದುಡಿಯುವ ಜನಗಳ ಮೇಲೆ ಹೆಚ್ಚೆಚ್ಚು ಹೊರೆಗಳನ್ನು ಹೇರಲಾಗುತ್ತಿದೆ; ಹಸಿವು, ಮಕ್ಕಳ ಅಪೌಷ್ಟಿಕತೆ ನಮ್ಮ ಸಮಾಜದ ಮೇಲಿನ ನಾಚಿಕೆಗೇಡಿನ ಕಪ್ಪು ಚುಕ್ಕೆ. ಈ ನಡುವೆ ಮೋಸದ ಬಡತನ ರೇಖೆಗಳನ್ನು ಎಳೆಯುತ್ತ ಬಡತನವನ್ನು ಮರೆಮಾಚುವ ಪ್ರಯತ್ನಗಳು. ಎರಡು ದಶಕಗಳ ಉದಾರೀಕರಣ ಅಸಮಾನತೆಗಳನ್ನು ಹಿಂದೆಂದೂ ಕಾಣದ ರೀತಿಯಲ್ಲಿ ಹೆಚ್ಚಿಸಿದೆ. ಇಂತಹ ಸನ್ನಿವೇಶದಲ್ಲಿ ನವ-ಉದಾರವಾದಿ ಧೋರಣೆಗಳ ವಿರುದ್ಧ ಹೋರಾಟ ತನ್ನ ಮುಖ್ಯ ಕರ್ತವ್ಯ ಎಂದು ಪರಿಗಣಿಸಿರುವ ಸಿಪಿಐ(ಎಂ) ಮುಂದಿನ ದಿನಗಳಲ್ಲಿ ಇಂತಹ ಹೋರಾಟಗಳನ್ನು ವಿಸ್ತರಿಸಲು, ತೀವ್ರಗೊಳಿಸಲು ಶ್ರಮಿಸುತ್ತದೆ ಎಂದು ಪ್ರಕಾಶ ಕಾರಟ್ ಹೇಳಿದರು. ಕಾರ್ಮಿಕರು ಮತ್ತು ನೌಕರರ ಫೆಬ್ರುವರಿ 28ರ ಸಾರ್ವತ್ರಿಕ ಮುಷ್ಕರ ಈ ದಿಕ್ಕಿನಲ್ಲಿ ಮುಂದುವರೆವ ಹೋರಾಟದ ಸಂಕೇತವಾಗಬೇಕು, ಪಕ್ಷದ ಈ ಮಹಾಧಿವೇಶನ ಮುಂಬರುವ ದಿನಗಳಲ್ಲಿ ಈ ಕೆಲಸವನ್ನು ಹೇಗೆ ಕೈಗೊಳ್ಳಬೇಕು ಎಂಬುದನ್ನು ಚರ್ಚಿಸುತ್ತದೆ ಎಂದು ಅವರು ಹೇಳಿದರು.

ಯುಪಿಎ-2 ಸರಕಾರದ ವಿದೇಶಾಂಗ ನೀತಿ ಅಮೆರಿಕಾದೊಂದಿಗೆ ಸಾಮರಿಕ ಸಂಬಂಧಗಳ ಪ್ರಭಾವಕ್ಕೊಳಗಾಗಿದೆ. ಇದು ಅದರ ಆಂತರಿಕ ಧೋರಣೆಗಳ ಮೇಲೂ ಪ್ರಭಾವ ಬೀರುತ್ತಿದೆ. ಉದಾಹರಣೆಗೆ, ವಾಲ್ ಮಾರ್ಟ್‌ಗೆ ಭಾರತದಲ್ಲಿ ಸೂಪರ್ ಮಾರ್ಕೆಟ್ ಗಳನ್ನು ತೆರೆಯಲು ಅವಕಾಶ ಕೊಡಬೇಕು ಎಂದು ಅಮೆರಿಕನ್ ಆಡಳಿತ ಸತತವಾಗಿ ಒತ್ತಡ ಹಾಕುತ್ತಿದೆ.



ಭ್ರಷ್ಟಾಚಾರದಲ್ಲಂತೂ ಎಂಟು ವರ್ಷಗಳ ಯುಪಿಎ ಆಳ್ವಿಕೆ ಅಭೂತಪೂರ್ವ ದಾಖಲೆಗಳನ್ನೇ ನಿರ್ಮಿಸಿದೆ. ಇದು ನವ-ಉದಾರವಾದಿ ವ್ಯವಸ್ಥೆಯ ಒಂದು ದುಷ್ಫಲ- ದೊಡ್ಡ ಬಂಡವಾಳಿಗರು, ಆಳುವ ವರ್ಗಗಳ ರಾಜಕಾರಣಿಗಳು ಮತ್ತು ಅಧಿಕಾರಶಾಹಿಗಳ ದುಷ್ಟಕೂಟ ಸಾರ್ವಜನಿಕ ಹಣವನ್ನು ಮತ್ತು ದೇಶದ ಅತ್ಯಮೂಲ್ಯ ಸಂಪನ್ಮೂಲಗಳನ್ನು ಲೂಟಿ ಹೊಡೆಯುತ್ತಿದೆ. ಆದ್ದರಿಂದ ಭ್ರಷ್ಟಾಚಾರ ತೊಲಗಿಸಲು ಒಂದು ಪರಿಣಾಮಕಾರಿ ಲೋಕಪಾಲ ವ್ಯವಸ್ಥೆಯೊಂದಿಗೆ, ನವ-ಉದಾರವಾದಿ ವ್ಯವಸ್ಥೆಯ ವಿರುದ್ಧ ಹೋರಾಟವೂ ನಡೆಯಬೇಕಾಗಿದೆ. ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಇದ್ದ, ತ್ರಿಪುರಾದಲ್ಲಿ ಈಗಲೂ ಇರುವ ಸಿಪಿಐ(ಎಂ) ನೇತೃತ್ವದ ಸರಕಾರಗಳ ಮಾತ್ರ ಉನ್ನತ ಮಟ್ಟಗಳಲ್ಲಿನ ಭ್ರಷ್ಟಾಚಾರಗಳಿಂದ ಮುಕ್ತವಾಗಿದ್ದು ಸಿಪಿಐ(ಎಂ) ಮತ್ತು ಎಡಪಕ್ಷಗಳು ಮಾತ್ರವೇ ಭ್ರಷ್ಟಾಚಾರದ ವಿರುದ್ಧ ದೃಢ ಹೋರಾಟಗಳನ್ನು ನಡೆಸಬಲ್ಲವು ಎಂದು ಪ್ರಕಾಶ ಕಾರಟ್ ಹೇಳಿದರು.

ಆಳುವ ವರ್ಗಗಳ ಕಾರ್ಯತಂತ್ರ

ಕೋಮುವಾದ ಎಂಬುದು ಆಳುವ ವರ್ಗಗಳ ಕಾರ್ಯತಂತ್ರದಲ್ಲೇ ಅಡಕವಾಗಿದೆ. ಅವರು ದುಡಿಯುವ ವರ್ಗವನ್ನು ಒಡೆಯಲು, ಬಲಪಂಥೀಯ ನವ-ಉದಾರವಾದಿ ಧೋರಣೆಗಳನ್ನು ಬಲಪಡಿಸಲು ಇದನ್ನು ಬಳಸುತ್ತಾರೆ. ಹಿಂದುತ್ವ ಶಕ್ತಿಗಳ ಅಜೆಂಡಾ ಜಾತ್ಯಾತೀತ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮತ್ತು ಮೌಲ್ಯಗಳಿಗೆ ವಿರುದ್ಧವಾದದ್ದು. ಅಲ್ಪಸಂಖ್ಯಾತರ ಹಕ್ಕುಗಳನ್ನು ದಮನ ಮಾಡಿರುವ ಕರ್ನಾಟಕ, ಮಧ್ಯಪ್ರದೇಶ ಮತ್ತು ಗುಜರಾತದ ಬಿಜೆಪಿ ಸರಕಾರಗಳ ದಾಖಲೆಗಳು ಅವು ಹೇಗೆ ದೊಡ್ಡ ಬಂಡವಾಳಿಗರ ಮತ್ತು ಭೂಮಾಲಕರ ಏಜೆಂಟರಾಗಿ ವರ್ತಿಸುತ್ತಿವೆ ಎಂಬುದನ್ನು ಕೂಡ ತೋರಿಸಿವೆ. ಸಿಪಿಐ(ಎಂ) ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ಹೋರಾಡುವಾಗಲೇ, ಅಲ್ಪಸಂಖ್ಯಾತರೊಳಗಿರುವ ಕೋಮುವಾದ ಮತ್ತು ಉಗ್ರವಾದದ ವಿರುದ್ಧವೂ ಹೋರಾಡುತ್ತದೆ ಎಂದು ಅವರು ನೆನಪಿಸಿದರು.

ಹುರುಪಿನ, ನಿರೀಕ್ಷೆಯ ವಾತಾವರಣದಲ್ಲಿ ಕೋಜ್ಹೀಕೋಡ್‌ನಲ್ಲಿ ಸಿಪಿಐ(ಎಂ) 20ನೇ ಮಹಾಧಿವೇಶನ ಆರಂಭಗೊಂಡಿದೆ.

ಕಳೆದ ಮಹಾಧಿವೇಶನದ ನಂತರ ನಡೆದ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಗಂಭೀರ ಸೋಲುಗಳನ್ನು ಅನುಭವಿಸಿವೆ. ಪಕ್ಷ ಇವುಗಳ ವಿಮರ್ಶೆ ನಡೆಸಿ ಕೊರತೆಗಳು ಮತ್ತು ದೌರ್ಬಲ್ಯಗಳನ್ನು ನಿವಾರಿಸಲು ಕ್ರಮಗಳನ್ನು ಕೈಗೊಳ್ಳುತ್ತಿದೆ. ಆಳುವ ವರ್ಗಗಳು ಮತ್ತು ಸಾಮ್ರಾಜ್ಯಶಾಹಿ ಪಕ್ಷದ ಬಲಿಷ್ಠ ನೆಲೆಯಾದ ಪಶ್ಚಿಮ ಬಂಗಾಳದ ಮೇಲೆ ಗುರಿಯಿಟ್ಟಿವೆ. ಕಳೆದ ಮಹಾಧಿವೇಶನದ ನಂತರ ಅಲ್ಲಿ 570 ಸಂಗಾತಿಗಳು ಅಲ್ಲಿ ಹುತಾತ್ಮರಾಗಿದ್ದಾರೆ. ವಿಧಾನ ಸಭಾ ಚುನಾವಣೆಗಳ ನಂತರ ಈ ದಾಳಿಗಳು ಹೆಚ್ಚಾಗಿವೆ. ಪ್ರಜಾಪ್ರಭುತ್ವ ಹಕ್ಕುಗಳ ಮೇಲೂ ದಾಳಿ ನಡೆಯುತ್ತಿದೆ. ಪಶ್ಚಿಮ ಬಂಗಾಲದಲ್ಲಿ ದಶಕಗಳ ವರ್ಗಹೋರಾಟಗಳು ಮತ್ತು ತ್ಯಾಗ-ಬಲಿದಾನಗಳಿಂದ ಕಟ್ಟಿದ, ಲಕ್ಷಾಂತರ ಸದಸ್ಯರನ್ನು ಹೊಂದಿರುವ ಬಲಿಷ್ಠ ನೆಲೆ ಈಗಲೂ ಇದೆ. ದಮನ-ಹಿಂಸಾಚಾರದಿಂದ ಅದನ್ನು ಬಗ್ಗು ಬಡಿಯಲು ಸಾಧ್ಯವಿಲ್ಲ ಎಂದ ಪ್ರಕಾಶ ಕಾರಟ್ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಪಕ್ಷ ಪಶ್ಚಿಮ ಬಂಗಾಲದಲ್ಲಿ ಪ್ರಜಾಪ್ರಭುತ್ವವನ್ನು ರಕ್ಷಿಸಲು ಎಲ್ಲ

ಮಟ 15ಕ್ಕೆ.......

ಜನದ್ರೋಹಿ ರಾಜಕಾರಣವೇನು ?

ಪುಟ 5ರಿಂದ......

ಏನು ಎಂಬುದರ ವಿವರವಿಲ್ಲ. ಇದರ ಬಗ್ಗೆ ಸದನದಲ್ಲಿ ಯಾವುದೇ ರೀತಿಯ ಗಂಭೀರ ಚರ್ಚೆ ಇಲ್ಲ.

ವಿದ್ಯುತ್ ಸಮಸ್ಯೆಗೆ ಪರಿಹಾರವಿಲ್ಲ

ಇನ್ನು ರಾಜ್ಯದ ಅಭಿವೃದ್ಧಿಗೆ ಮೂಲಭೂತ ಅವಶ್ಯಕತೆಯಾಗಿರುವ ವಿದ್ಯುಚ್ಛಕ್ತಿ ಮತ್ತು ನೀರಾವರಿ ಅಭಿವೃದ್ಧಿ ಇದರ ಬಗ್ಗೆ ಬಡ್ಜೆಟ್‌ನಲ್ಲಿ ಯಾವ ರೀತಿಯ ಕಾರ್ಯಕ್ರಮವೂ ಇಲ್ಲ. ಇಂಧನ ಇಲಾಖೆಗೆ 10 ಸಾವಿರ ಕೋಟಿ ರೂಗಳನ್ನು ತೆಗೆದಿಟ್ಟಿದ್ದಾರೆ. ಅದು ರಾಜ್ಯದ ವಿದ್ಯುಚ್ಛಕ್ತಿ ಅಗತ್ಯಗಳನ್ನು ಪೂರೈಸಲು ಯಾವ ರೀತಿಯಲ್ಲೂ ಸಾಕಾಗುವುದಿಲ್ಲ. ಕೊಂಡುಕೊಳ್ಳುತ್ತಿರುವ ವಿದ್ಯುಚ್ಛಕ್ತಿ ಮತ್ತು ವಿದ್ಯುಚ್ಛಕ್ತಿ ಪೂರೈಕೆ ಮಾಡಿದ ಸಂಸ್ಥೆಗೆ ಬಾಕಿ ಹಣವನ್ನು ತೀರಿಸಲು ಕೂಡ ಸಾಕಾಗುವುದಿಲ್ಲ. ಇನ್ನು ವಿದ್ಯುಚ್ಛಕ್ತಿಯ ಸರಬರಾಜು ಮತ್ತು ವಿತರಣೆಯಲ್ಲಿ ಆಗುತ್ತಿರುವ ನಷ್ಟಗಳ ಸರಿಪಡಿಸುವಿಕೆ ಮತ್ತು ಅದನ್ನು ಉತ್ತಮ ಪಡಿಸಲಿಕ್ಕೆ ಯಾವ ಕಾರ್ಯಕ್ರಮವೂ ಇಲ್ಲ. ಇದರ ಬಗ್ಗೆ ಬಡ್ಜೆಟ್‌ನಲ್ಲಿ ಪ್ರಸ್ತಾಪವಿದೆಯೇ ಹೊರತು ಪರಿಹಾರಕ್ಕೆ ಮಾರ್ಗವಿಲ್ಲ.

ನೀರಾವರಿ ಬಗೆಗೆ ದಿವ್ಯ ನಿರ್ಲಕ್ಷ್ಯ

ಇನ್ನು ನೀರಾವರಿ ಯೋಜನೆಗಳ ಬಗ್ಗೆ ಈ ರಾಜ್ಯದಲ್ಲಿ ಪ್ರಾರಂಭದಿಂದ ಇಂದಿನವರೆವಿಗೂ ರಾಜಕಾರಣ ನಡೆದಿರುವುದು ಬಿಟ್ಟರೆ ನೀರಾವರಿ ಸಮಸ್ಯೆಗಳನ್ನು ಮಾತ್ರ ಪರಿಹರಿಸಲಿಲ್ಲ. ಈಗಲೂ ಆ ಪ್ರಯತ್ನವಿಲ್ಲ. ಅದಕ್ಕೊಂದು ಸಮಗ್ರ ಯೋಜನೆ ಇಲ್ಲ.

ಬಜೆಟ್ ಎರಡು ಭಾಗ ಮಾಡಿದ್ದೇ ಸಾಧನೆ !!

ಕೃಷಿ ಬಡ್ಜೆಟ್ ಪ್ರತ್ಯೇಕ ಮಂಡಿಸಿರುವುದರ ಸಾಧನೆ ಏನು ಎಂಬುದೇ ತಿಳಿಯುತ್ತಿಲ್ಲ. ಇಡೀ ಬಡ್ಜೆಟ್ಟನ್ನು ಎರಡು ಭಾಗ ಮಾಡಿ ಎರಡು ಹೆಸರನ್ನು ಇಟ್ಟಿರುವುದು ಬಿಟ್ಟರೆ ಬೇರೇನು ಇಲ್ಲ. ಕೃಷಿ ಅಭಿವೃದ್ಧಿ ಹೆಸರಿನಲ್ಲಿ ಕೃಷಿ ಬಂಡವಾಳ ಹೂಡಿಕೆ ಸಮಾವೇಶ ಮಾಡಿ ಲಕ್ಷಾಂತರ ಎಕರೆ ಕೃಷಿ ಭೂಮಿಯನ್ನು ಕಾರ್ಪೋರೇಟ್ ಕಂಪನಿಗಳಿಗೆ ಹಂಚುವ ಹುನ್ನಾರ ಬಿಟ್ಟರೆ ಕೃಷಿ ಅಭಿವೃದ್ಧಿಯ ಪ್ರಶ್ನೆ ಇಲ್ಲ. ಇನ್ನು ಕೈಗಾರಿಕೆ ಅಭಿವೃದ್ಧಿ ಹೆಸರಿನಲ್ಲಿ ಕೈಗಾರಿಕೆಯಲ್ಲಿ ಬಂಡವಾಳ ಹೂಡಿಕೆ ಸಮಾವೇಶವನ್ನು ಮಾಡಿರುವುದು ಬಿಟ್ಟರೆ ಇದುವರೆವಿಗೂ ಯಾವುದೇ ಒಂದು ಕೈಗಾರಿಕೆ ಪ್ರಾರಂಭವಾಗಲಿಲ್ಲ. ಕೈಗಾರಿಕೆಗಳು ಪ್ರಾರಂಭವಾಗದೆ ಉತ್ಪಾದನೆ ಹೆಚ್ಚಾಗುವುದಿಲ್ಲ. ಉದ್ಯೋಗಾವಕಾಶಗಳು ಸೃಷ್ಟಿಯಾಗುವುದಿಲ್ಲ. 1,02,742 ಕೋಟಿ ರೂಗಳ ಸಂಪನ್ಮೂಲಗಳನ್ನು ಯಾವ ರೀತಿಯಲ್ಲಿ ಕ್ರೋಢೀಕರಿಸಲಾಗುತ್ತದೆ ಎಂದು ಎಲ್ಲೂ ಸ್ಪಷ್ಟ ಪಡಿಸಿಲ್ಲ. ರಾಜ್ಯದ ಬಡ್ಜೆಟ್‌ನಲ್ಲಿ ಮಂಡಿಸಿರುವ ಆದಾಯದ ವಿಧಾನವನ್ನು ಗಮನಿಸಿದರೆ. ಶೇಕಡ 50 ಭಾಗ ಮಾತ್ರ ರಾಜ್ಯದ ಆದಾಯ–ಇನ್ನು ಸಾಲವನ್ನು ಪಡೆಯುತ್ತಿರುವುದು ಶೇ. 34. (ಶೇ.21+13=34 ಭಾಗ ಸಾಲ). ಕೇಂದ್ರ ಸರ್ಕಾರದಿಂದ 13%, ತೆರಿಗೆಯೇತರ ಭಾಗದಿಂದ 3 ಶೇ. ಹಾಗಾದರೆ ರಾಜ್ಯ ಆದಾಯದ 50 ಭಾಗದಲ್ಲಿ ಶೇ. 80 ಪಾಲು ಮಾಹಿತಿ ತಂತ್ರಜ್ಞಾನ ಮತ್ತು ಬಿ.ಟಿ. ತಂತ್ರಜ್ಞಾನದಿಂದ ಬರುವುದೇ ? ಹಾಗಾದರೆ ರಾಜ್ಯದ ನಿಜವಾದ ಆದಾಯ, ಉತ್ಪಾದನೆ ಎಷ್ಟು ? ಇದೊಂದು ಅತಂಕಕಾರಿ ವಿಷಯವಾಗಿದೆ..ರಾಜ್ಯ ಪಡೆಯುವ ಸಾಲಕ್ಕೆ ಬಡ್ಡಿಯಾಗಿ ರಾಜ್ಯದ ಒಟ್ಟು ಆದಾಯದಲ್ಲಿ ಶೇ. 13 ಭಾಗ ಪಾವತಿ ಮಾಡಬೇಕಾಗುತ್ತದೆ. ಇನ್ನು ರಾಜ್ಯದ ಒಟ್ಟು ಸಾಲದ ಮೊತ್ತ 1,44,000 ಕೋಟಿಗಳಾಗಿದೆ. ಈ ಸಾಲವನ್ನು ತೀರಿಸುವುದು ಹೇಗೆ ? ಇದರ ಜೊತೆಗೆ 15,312 ಕೋಟಿ ರೂಗಳು ವಿತ್ತೀಯ ಕೊರತೆ ಇದೆ. ಆರ್ಥಿಕ ನೀತಿ ನಿಯಮಗಳ ಬಗ್ಗೆ ಕನಿಷ್ಠ ಜ್ಞಾನವಿರುವ ಯಾರೂ ಇದನ್ನು ಅಭಿವೃದ್ಧಿ ಪೂರಕ ಬಡ್ಜೆಟ್ ಎಂದಾಗಲಿ ಅಥವಾ ಜನಪರ ಬಡ್ಜೆಟ್ ಎಂದಾಗಲಿ ಹೇಳಲು ಸಾಧ್ಯವಿಲ್ಲ. ಇದೊಂದು ಅಂಕಿ ಸಂಖ್ಯೆಗಳ ಬೂಟಾಟಿಕೆ ಮತ್ತು ಬರೀ ಆಶ್ವಾಸನೆಗಳ ಗಂಟು. ಇದು ರಾಜ್ಯಕ್ಕೂ ಮತ್ತು ರಾಜ್ಯದ ಜನತೆಗೂ ಮಾರಕವಾಗಿದೆ.



ರಾಜ್ಯದಲ್ಲಿ ಒಂದು ಕಡೆ ಬರಗಾಲ. ನೀರಿನ ಸಮಸ್ಯೆ ಎಲ್ಲ ರಂಗದಲ್ಲಿ ಅರಾಜಕತೆ, ಆಡಳಿತ ಯಂತ್ರಾಂಗದ ಕುಸಿತ. ಭ್ರಷ್ಟಾಚಾರ ತಾಂಡವಾಡುತ್ತಿದೆ. ಇನ್ನೊಂದು ಕಡೆ ರಾಜಕೀಯ ಅಸ್ಥಿರತೆ. ಈ ರಾಜಕೀಯ ಅಸ್ಥಿರತೆ ಎಷ್ಟರ ಮಟ್ಟಿಗೆ ತಲುಪಿದೆಯೆಂದರೆ 2012–13ರ ಬಡ್ಜೆಟ್ ಮಂಡನೆ ಆಗುವ ದಿವಸದ ವರೆವಿಗೂ ಈ ಬಡ್ಜೆಟ್‌ನ್ನು ಯಾರು ಮಂಡಿಸುತ್ತಾರೆ ಎಂಬುದೆ ತಿಳಿಯದಾಗಿತ್ತು. ಇದು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಇತಿಹಾಸದಲ್ಲಿ ಅತ್ಯಂತ ಪ್ರಜಾಪ್ರಭುತ್ವ ವಿರೋಧಿ ವಿಧಾನ. ಇಷ್ಟೆಲ್ಲಾ ನಡೆದರೂ ವಿಧಾನ ಸಭೆಯ ಅಧಿವೇಶನದಲ್ಲಿ ಚರ್ಚೆಗಳಾದ ವಿಧಾನ ನೋಡಿದರೆ ನಿಜವಾಗಿಯೂ ಅತಂಕಕ್ಕೆ ಕಾರಣವಾಗಿದೆ. ಸರಿ ಸುಮಾರು 100 ರಷ್ಟು ವಿರೋಧ ಪಕ್ಷದ ಸದಸ್ಯರಿದ್ದಾರೆ. ಅದರಲ್ಲಿ ಅನುಭವಿ ಸದಸ್ಯರಿದ್ದಾರೆ. ರಾಜ್ಯ ಇಂತಹ ಗಂಭೀರ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಆದರೆ ಪ್ರಮುಖ ವಿರೋಧ ಪಕ್ಷಗಳು ಚರ್ಚೆ ಮಾಡಿದ ವಿಧಾನ ಮತ್ತು ಆಡಳಿತ ಪಕ್ಷದ ವೈಖರಿಯೂ ಅತ್ಯಂತ ಖಂಡನೀಯ ಮತ್ತು ಬೇಜವಾಬ್ದಾರಿಯಿಂದ ಕೂಡಿತ್ತು.

ಇದರ ಪರಿಣಾಮ ಸದನವು ಮತ್ತು ಅಧಿವೇಶನಗಳು ತಮ್ಮ ಗಂಭೀರತೆಯನ್ನು ಕಳೆದುಕೊಂಡು ನಿರರ್ಥಕವಾಗತೊಡಗಿವೆ. ಕಳೆದ ನಾಲ್ಕು ವರ್ಷಗಳಿಂದ ಬಿ.ಜೆ.ಪಿ.ಯು ವಿಧಾನಸಭೆಯ ಅರ್ಥವನ್ನು ಕಳೆದು ಬಿಟ್ಟಿದೆ. ಮತ್ತು ವಿಧಾನಸಭೆಯನ್ನೇ ನಿರುಪಯುಕ್ತ ಮಾಡಿ ಬಿಟ್ಟಿದೆ. ಆದರೆ 130 ವರ್ಷಗಳಷ್ಟು ಇತಿಹಾಸವಿರುವ ಕಾಂಗ್ರೆಸ್ ಪಕ್ಷವು ಕೂಡ ತನ್ನ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಲಿಲ್ಲ. ಇದರ ಒಟ್ಟು ಪರಿಣಾಮ ರಾಜ್ಯದ ಅಧೋಗತಿ.

ಬಿ.ಜೆ.ಪಿ. ಸರ್ಕಾರದ ಜನವಿರೋಧಿ ನೀತಿಗಳು ಮತ್ತು ಅದು ಮಂಡಿಸಿರುವ 2012–13ರ ರಾಜ್ಯಕ್ಕೆ ಕಂಟಕವನ್ನು ಉಂಟುಮಾಡುವ ಬಡ್ಜೆಟ್‌ನ್ನು ವಿರೋಧಿಸಿ ರಾಜ್ಯದಾದ್ಯಂತ ಜನರ ಚಳುವಳಿಯನ್ನು ಹೂಡಬೇಕಾಗಿದೆ. ●

ಕ್ರ.	ವಲಯ	2008–2009		2009–2010		2010–2011		2011–2012	
		ಆಯವ್ಯಯ ಹಂಚಿಕೆ	ವೆಚ್ಚ	ಆಯವ್ಯಯ ಹಂಚಿಕೆ	ವೆಚ್ಚ	ಆಯವ್ಯಯ ಹಂಚಿಕೆ	ವೆಚ್ಚ	ಆಯವ್ಯಯ ಹಂಚಿಕೆ	ವೆಚ್ಚ
1.	ಕೃಷಿ ಮತ್ತು ಸಂಬಂಧಪಟ್ಟ ಸೇವೆ	2,492.00	1,680.72	2,122.00	1,954.99	2,357.00	2,522.74	4,256.00	4,094.62
2.	ಗ್ರಾಮೀಣಾಭಿವೃದ್ಧಿ	1,593.00	1,323.25	1,503.00	1,775.40	1,506.00	1,794.53	4,385.00	1,851.19
3.	ವಿಶೇಷ ಪ್ರದೇಶಾಭಿವೃದ್ಧಿ	182.00	88.86	144.00	133.37	138.00	148.76		356.10
4.	ನೀರಾವರಿ ಮತ್ತು ಪ್ರವಾಹ ನಿಯಂತ್ರಣ	3,469.00	2,758.61	3,984.00	3,597.81	4,429.00	4,583.81	7,800.00	7,165.96
5.	ಇಂಧನ	2,414.00	3,607.44	3,621.00	4,067.82	3,360.00	3,063.64	8,523.00	4,408.34
6.	ಕೈಗಾರಿಕೆ ಮತ್ತು ಖನಿಜಗಳು	357.00	505.63	828.00	510.02	414.00	837.38	1,457.00	699.75
7.	ಸಾರಿಗೆ	3,294.00	3,781.08	3,804.00	3,715.64	3,097.00	3,878.04	3,602.00	3,760.33
8.	ವಿಜ್ಞಾನ–ತಂತ್ರಜ್ಞಾನ ಮತ್ತು ಪರಿಸರ	25.00	32.69	36.00	3047.00	39.00	46.45		54.88
9.	ಸಾಮಾನ್ಯ ಆರ್ಥಿಕ ಸೇವೆಗಳು	741.00	719.27	766.00	710.83	1,118.00	1,059.03		1,202.31
10.	ಶಿಕ್ಷಣ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ	2,199.00	2,080.15	2,298.00	2,130.91	2,634.00	3,373.45	2,284.00	3,493.79
11.	ಆರೋಗ್ಯ	965.00	992.06	898.00	1,068.40	1,087.00	1,389.75	3,254.00	1,648.20
12.	ನೀರು ಸರಬರಾಜು ಮತ್ತು ನೈರ್ಮಲ್ಯ	1,268.00	1,344.94	1,353.00	1,680.22	1,675.00	1,635.49		2,131.65
13.	ವಸತಿ ಮತ್ತು ನಗರಾಭಿವೃದ್ಧಿ	4,672.00	2,802.10	5,313.00	3,306.54	4,749.00	4,140.20	8,904.00	4,667.57
14.	ವಾರ್ತಾ ಮತ್ತು ಪ್ರಚಾರ	19.00	18.88	16.00	13.96	28.00	36.95		33.05
15.	ಸಮಾಜ ಕಲ್ಯಾಣ	1,546.00	1,077.68	2,143.00	1,466.20	2,359.00	1,493.96	3,264.00	1,702.98
16.	ಕಾರ್ಮಿಕ ಮತ್ತು ಉದ್ಯೋಗ	154.00	124.92	168.00	117.49	316.00	264.29		355.97
17.	ಸಾಮಾನ್ಯ ಸೇವೆಗಳು	565.00	1,093.31	505.00	565.12	821.00	427.93		1,192.95
18.	ಮಹಿಳಾ ಮತ್ತು ಮಕ್ಕಳ ಕಲ್ಯಾಣ		962.65		1,467.61		2,167.08	2,399.00	2,052.67
19.	ಕಂದಾಯ							2,415.00	
20.	ಲೋಕೋಪಯೋಗಿ							4,319.00	

ಬಿಡಿಎ 'ಸೈಟು ಹಗರಣ' ಈಗ ಮತ್ತೆ 18 ಬಿಜೆಪಿ ಶಾಸಕರು

ಸೈಟು ಹಗರಣ, ಗಣಿ ಹಗರಣ, ಭೂ ಹಗರಣಗಳಿಗೂ ದೇಶ ಭಕ್ತ ಬಿಜೆಪಿ ಪಕ್ಷದ ನಾಯಕರು, ಶಾಸಕರು, ಸಚಿವರುಗಳಿಗೂ ಏನೋ ಒಂದು ವಿಶೇಷ ನಂಟು.

ಭಾರತವೆಂಬುದೊಂದು ಪುಣ್ಯ ಭೂಮಿ. ಆ ಪುಣ್ಯ 'ಭೂಮಿ'ಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಪಾಲು ಗೆಬರಿಕೊಳ್ಳಲು ಈ ಜನಗಳು ಯತ್ನಸಿದರೆ ಅದಕ್ಕೆ ಈ ಮುಖಂಡರು, ಶಾಸಕರು, ಸಚಿವರ ಎದೆಯಲ್ಲಿ ದೇಶ ಪ್ರೇಮದ ಬುಗ್ಗೆಯೇ ಉಕ್ಕಲು ಪ್ರೇರಣೆಯಾಗಿರುವ ಬಿಜೆಪಿ ಪಕ್ಷದ ಧೋರಣೆಗಳು, ಸಿದ್ಧಾಂತಗಳೇ ಕಾರಣ. ಇರಲಿ. ಈಗ ಮುಖ್ಯ ವಿಷಯ ಎಂದರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸೈಟು ಪಡೆದುಕೊಳ್ಳುವುದಕ್ಕಾಗಿ ಸುಳ್ಳು ಪ್ರಮಾಣ ಪತ್ರ ಕೊಟ್ಟು ಸಿಕ್ಕಿ ಬಿದ್ದಿರುವ ಶಾಸಕ ರತ್ನರ ಪಟ್ಟಿಯಲ್ಲಿ ಬಿಜೆಪಿ ಪಕ್ಷದ ಶಾಸಕರೇ ಮುಂದಿದ್ದಾರೆ ಎಂಬ ಅಂಶ ಮಾಧ್ಯಮಗಳಲ್ಲಿ ಬಯಲಾಗಿದೆ. ಹೇಮಚಂದ್ರ ಸಾಗರ್, ಮುಮ್ತಾಜ್ ಆಲಿ ಖಾನ್, ದೊಡ್ಡರಂಗೇಗೌಡ, ಜಿ.ಸೋಮಶೇಖರ ರೆಡ್ಡಿ, ವೈ. ಸಂಪಂಗಿ, ಎಸ್.ಆರ್. ವಿಶ್ವನಾಥ್, ಮುಂತಾದ 18 ಬಿಜೆಪಿ ಶಾಸಕರ ಹೆಸರುಗಳು ಪಟ್ಟಿಯಲ್ಲಿವೆ. ಇದರ ಜೊತೆಗೆ ಮೂವರು ಕಾಂಗ್ರೆಸ್ ಶಾಸಕರ ಹೆಸರೂ ಇವೆ ಅನ್ನಿ. ಪಾಪ ಕಾಂಗ್ರೆಸ್ ಸ್ವಲ್ಪ ಹಿಂದೆ ಬಿತ್ತು. ಇರಲಿ. ಇಂಥ ವಿಷಯದಲ್ಲಿ ರಾಜ್ಯದಲ್ಲಿ ಬಿಜೆಪಿ ಮುಂದೆ ಇರಬಹುದು. ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಸಾಕಷ್ಟು ಮುಂದಿದೆ.

'ಜಿ' ಕೆಟಗರಿ ಎನ್ನಲಾಗುವ ಬಿಡಿಎ ಸೈಟು ಪಡೆದುಕೊಳ್ಳುವುದಕ್ಕೆ ಕೆಲವೊಂದು ನಿರ್ಬಂಧ, ನಿಷೇಧಗಳಿವೆ. ಸಂಬಂಧಿಸಿದ ವ್ಯಕ್ತಿಗೆ ಅಥವಾ ವ್ಯಕ್ತಿಯ ಪತ್ನಿ/ಪತಿಗೆ ಈಗಾಗಲೇ ಬೆಂಗಳೂರಿನಲ್ಲಿ ನಿವೇಶನ, ಅಥವಾ ಆಸ್ತಿ ಇದ್ದಲ್ಲಿ ಅವರು ಈ ನಿವೇಶನ ಪಡೆಯಲು ಅರ್ಹರಲ್ಲ ಅನ್ನುವುದೂ ಒಂದು ನಿಯಮ. ಮೇಲೆ ಹೇಳಲಾದವರು ಸೇರಿ ಒಟ್ಟು 18 ಮಂದಿ ಒಂದಲ್ಲ ಒಂದು ರೀತಿಯಲ್ಲಿ ಬೆಂಗಳೂರಿನಲ್ಲಿ ನಿವೇಶನ, ಆಸ್ತಿ ಹೊಂದಿದ್ದರೂ, ಹೊಂದಿಲ್ಲ ಎಂದು ಪ್ರಮಾಣ ಪತ್ರಗಳನ್ನು ಸಲ್ಲಿಸಿ ನಿವೇಶನಗಳನ್ನು ಪಡೆದಿದ್ದಾರಂತೆ.

ಬೆಂಗಳೂರಿನ ಗುಡಿಸಲು ನಿವಾಸಿಗಳಿಗೆ, ಬಡವರಿಗೆ ಹತ್ತಾರು ವರ್ಷಗಳಿಂದ ಅಲ್ಲಿ ವಾಸಿಸುತ್ತಿರುವವರಿಗೆ ತಮ್ಮ ಗುಡಿಸಲಿರುವ ಜಾಗಕ್ಕೆ ಹಕ್ಕು ಪತ್ರ ಕೊಡಿಸಲು ಬಿಜೆಪಿ ಶಾಸಕರು, ಮಾಜಿ ಸಚಿವರು ಎಲ್ಲಿಯಾದರೂ ಶ್ರಮಿಸಿದ್ದು, ಬಿಜೆಪಿ ಸರ್ಕಾರ ಅದಕ್ಕಾಗಿ ಕ್ರಮ ವಹಿಸಿದ್ದು ಅಪ್ಪಿ ತಪ್ಪಿ ನಿಮ್ಮ ಕಣ್ಣಿಗೆ ಬಿದ್ದಿದೆಯಾ ? ಬಿದ್ದರೆ ದಯಮಾಡಿ ನಮಗೆ ತಿಳಿಸಿ.



ಕೃಪೆ : ಪ್ರಜಾವಾಣಿ

ವೃತ್ತಿ ಶಿಕ್ಷಣ ಶುಲ್ಕ ಏರಿಕೆ ಬರೆ

ರಾಜ್ಯದಲ್ಲಿ ವೃತ್ತಿ ಶಿಕ್ಷಣ ಎನ್ನುವುದು ಇತ್ತೀಚಿನ ವರ್ಷಗಳಲ್ಲಿ ದಿನೇ ದಿನೇ ದುಬಾರಿಯಾಗುತ್ತಾ ನಡೆದಿದೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲಂತೂ ಖಾಸಗಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಗಳ ಒಡೆಯರಿಗೆ ಹಾಲು ಕುಡಿದಂತೆ ವರ್ಷ ವರ್ಷವೂ ಸಂತೋಷ ಹೆಚ್ಚಾಗುತ್ತಲೇ ಇದೆ. ಏಕೆಂದರೆ ವರ್ಷ ವರ್ಷವೂ ಶುಲ್ಕಗಳನ್ನು ಏರಿಸ ಬೇಕೆಂಬ ಕಾಮೆಡ್–ಕೆ ಒತ್ತಡಕ್ಕೆ ಸರ್ಕಾರ ಮಣಿಯುತ್ತಲೇ ಇದೆ. ಶುಲ್ಕ ಏರಿಕೆ ಮಾತ್ರವೇ ಅಲ್ಲ. ಖಾಸಗಿ ಕಾಲೇಜುಗಳಲ್ಲಿ ಸರ್ಕಾರಕ್ಕೆ ಸಿಗುವ ಸೀಟುಗಳ ಪ್ರಮಾಣ ಕುಸಿಯುತ್ತಲೇ ಇದೆ. ಈ ವರ್ಷ ಮತ್ತೆ ಶೇ. 10 ರಷ್ಟು ಶುಲ್ಕ ಹೆಚ್ಚಳಕ್ಕೆ ಸರ್ಕಾರ ಅನುಮತಿ ನೀಡಿದೆ. ಜೊತೆಗೆ ಸರ್ಕಾರಿ ಕಾಲೇಜುಗಳಲ್ಲಿ ಕೂಡ ಶೇ 10 ರಷ್ಟು ಶುಲ್ಕ ಏರಿಕೆ ಮಾಡಲಾಗಿದೆ.

ಇಲ್ಲಿ ಇನ್ನೊಂದು ಮುಖ್ಯವಾದ ಸಂಗತಿ ಇದೆ. ಸಭೆಯಲ್ಲಿ ಆಡಳಿತ ಮಂಡಳಿಗಳು ಶೇ.30 ರಷ್ಟು ಶುಲ್ಕ ಏರಿಕೆ ಆಗಬೇಕೆಂದು ಒತ್ತಾಯಿಸಿದವಂತೆ. ಆಗ ನಮ್ಮ ಮುಖ್ಯಮಂತ್ರಿಗಳು ಇದು ಚುನಾವಣೆ ವರ್ಷ. ಈ ವರ್ಷದಲ್ಲಿ 30ಶೇ.ಶುಲ್ಕ ಏರಿಕೆ ಕಷ್ಟ ಎಂದು ಅಲವತ್ತುಕೊಂಡರಂತೆ. ಆಮೇಲೆ ಆಡಳಿತ ಮಂಡಳಿಗಳು ಶೇ. 10 ಏರಿಕೆಗೆ ಒಪ್ಪಿಕೊಂಡವಂತೆ.

ಹೇಗಿದೆ ನೋಡಿ. ಒಂದು ಪಕ್ಷ ಚುನಾವಣೆ ಈ ವರ್ಷ ಇಲ್ಲದಿದ್ದರೆ ವಿದ್ಯಾರ್ಥಿ ಪೋಷಕರ ಬೆನ್ನ ಮೇಲೆ ಸರ್ಕಾರ ಇನ್ನಷ್ಟು ಬರೆ ಹಾಕಲು ಸಿದ್ಧವಿತ್ತು ಅಮತ ಅಲ್ಲವೇ ಇದರ ಅರ್ಥ. ಇದು ಬಿಜೆಪಿ ಸರ್ಕಾರದ ಶಿಕ್ಷಣ ಕಾಳಜಿ.

ಪೌರ ಕಾರ್ಮಿಕರು ಒಳ ಚರಂಡಿಯಲ್ಲಿ ಸತ್ತು ಹೋದರೆ ಬಿಜೆಪಿ ಸರ್ಕಾರವೇನು ಮಾಡಲಾದೀತು ?

ಮನುಷ್ಯರು ಮಲ ಹೋರುವ ಪದ್ಧತಿ ನಿವಾರಿಸಬೇಕು. ಒಳ ಚರಂಡಿಯೊಳಗೆ ಮನುಷ್ಯರು ಇಳಿದು ಕೆಲಸ ಮಾಡುವುದನ್ನು ತಪ್ಪಿಸಬೇಕು. ಈ ಕೆಲಸಗಳಿಗೆ ಆಧುನಿಕ ಯಂತ್ರೋಪಕರಣಗಳನ್ನು ಬಳಸಲು ಸರ್ಕಾರ ಕ್ರಮ ವಹಿಸಬೇಕು ಅಂತ ಹಲವಾರು ಆದೇಶಗಳನ್ನು ನಮ್ಮ ನ್ಯಾಯಾಲಯಗಳು ಕೊಡುತ್ತಲೇ ಇವೆ. ಯಾಕೆ ಈ ನಿಟ್ಟಿನಲ್ಲಿ ಇನ್ನೂ ಸರಿಯಾದ ಕ್ರಮ ವಹಿಸಿಲ್ಲ ಅಂತ ಹಲವಾರು ಬಾರಿ ಕೋರ್ಟ್‌ಗಳು ಚಾಟಿ ಬೀಸಿದ್ದು ಇವೆ. ಇಷ್ಟಾದರೂ ರಾಜ್ಯ ಬಿಜೆಪಿ ಸರ್ಕಾರಕ್ಕೆ ಈ ಬಗ್ಗೆ 'ಫಿಕರೇ' ಇಲ್ಲ. ಒಳ ಚರಂಡಿ, ಮಲ, ಮೂತ್ರ ಗುಂಡಿಗಳನ್ನು ಸ್ವಚ್ಛಗೊಳಿಸುವವರ ಬಗ್ಗೆ ಮಾನವೀಯ ಕಾಳಜಿ ಹೋಗಲಿ, ಇದೇ ಕೆಲಸ ಮಾಡುತ್ತಾ ಪ್ರಾಣವನ್ನೇ ಕಳೆದುಕೊಂಡ ದುರಂತ ಪ್ರಕರಣಗಳಲ್ಲಿ ಸರ್ಕಾರದ ನಡವಳಿಕೆಯನ್ನು ನೋಡಿ.

2008ರಿಂದ 2012ರ ವರೆಗೆ ಒಟ್ಟು 21 ಪೌರ ಕಾರ್ಮಿಕರು ಒಳ ಚರಂಡಿ, ಅಥವಾ ಮಲದ ಗುಂಡಿ ಸ್ವಚ್ಛ ಮಾಡುವಾಗ ಪ್ರಾಣ ಕಳೆದುಕೊಂಡಿದ್ದಾರೆ. ಇಂತಹ ಪ್ರಕರಣಗಳಲ್ಲಿ ಮೃತರ ಕುಂಟುಂಬದವರಿಗೆ 5 ಲಕ್ಷ ರೂಪಾಯಿಗಳ ಪರಿಹಾರ ನೀಡಬೇಕೆಂದು ಮಾನವ ಹಕ್ಕುಗಳ ಆಯೋಗ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಸತ್ತ 21 ಜನರ ಪೈಕಿ 10 ಜನಕ್ಕೆ ಸರ್ಕಾರದಿಂದ ಇನ್ನು ಯಾವ ಪರಿಹಾರವೂ ಸಿಕ್ಕಿಲ್ಲ. ಮೊದಲೇ ಬಡತನದ ಕೂಪದಲ್ಲಿ ಮುಳುಗಿರುವ ಈ ಕುಟುಂಬಗಳ ಕತೆ ದುಡಿಯುವ ಕುಟುಂಬದ ಒಬ್ಬ ಪ್ರಮುಖರನ್ನು ಕಳೆದುಕೊಂಡು ಯಾವ ಸ್ಥಿತಿ ತಲುಪಿರಬಹುದು !! ಈ 21 ಪ್ರಕರಣಗಳಲ್ಲಿ ಬಹುತೇಕ ತೀರಿಕೊಂಡವರು ದಲಿತ ಸಮುದಾಯಕ್ಕೆ ಸೇರಿದವರು ಎಂಬುದನ್ನು ತಿಳಿದುಕೊಳ್ಳಲು ಯಾವ ಮಹಾ ಸಮಾಜಶಾಸ್ತ್ರ ಅಧ್ಯಾಪಕರ ನೆರವು ಬೇಕಾಗಿಲ್ಲ.

11 ಪ್ರಕರಣಗಳಲ್ಲಿ ಕುಟುಂಬದವರಿಗೆ ಪರಿಹಾರ ಸಿಕ್ಕಿದೆ. ಆದರೆ ನಿಕೃಷ್ಟ ಪರಿಹಾರ. ಕೆಲವರಿಗೆ 1.5 ಲಕ್ಷ ಪರಿಹಾರ ನೀಡಿ ಸರ್ಕಾರ ಕೈ ತೊಳೆದುಕೊಂಡಿದೆಯಂತೆ. ಈ ಬಾಬ್ತಿನಲ್ಲಿ ಒಟ್ಟು 11 ಕುಟುಂಬಗಳಿಗೆ 25.88,000 ರೂಪಾಯಿ ಪರಿಹಾರ ನೀಡಲಾಗಿದೆ. ಮಾನವ ಹಕ್ಕುಗಳ ಆಯೋಗ ಸೂಚಿಸಿದ ಪರಿಹಾರದ ಅರ್ಧಕಿಂತ ಕಮ್ಮಿ. ಉಳಿದ ಹತ್ತು ಕುಟುಂಬಗಳಿಗೆ ಯಾವ ಪರಿಹಾರವೂ ಇಲ್ಲ. ಅವರ ಕತೆ ಏನು ??

ಬಿಜೆಪಿ, ಆರೆಸ್ಸೆಸ್ ಬಯಸುವ ಭವ್ಯ ಹಿಂದೂ ರಾಷ್ಟ್ರ ನಿರ್ಮಾಣವಾದಲ್ಲಿ, ಅಲ್ಲಿ –ಈಗ ತಲೆಯ ಮೇಲೆ ಮಲ ಹೊರಿಸಲಾಗಿರುವ, ಒಳ ಚರಂಡಿ ಸ್ವಚ್ಛ ಮಾಡಿಸಲಾಗುತ್ತಿರುವ ದಲಿತರಿಗೆ ಜಾಗ ಎಲ್ಲಿ ಅಂತ ಹೇಳುವವರು ಯಾರು ?



ಬಿಜೆಪಿ ದರ್ಬಾರ್

ಆರ್. ರಾಮಕೃಷ್ಣ

ರೇವು ಪಾರ್ಟಿ ಕುರಿತು ತನಿಖೆ ಊರೆಲ್ಲ ಕೊಳ್ಳೆ ಹೋದ ಮೇಲೆ....

ಉಡುಪಿ ಸಮೀಪದ ಸೇಂಟ್ ಮೇರೀಸ್ ದ್ವೀಪದಲ್ಲಿ ಬಿಜೆಪಿ ಸರ್ಕಾರದ ಸಕಲ ಸರ್ಕಾರಿ ಗೌರವ, ಸೌಲಭ್ಯ, ಆಶೀರ್ವಾದಗಳೊಂದಿಗೆ ವಿದೇಶಿ ಪ್ರವಾಸಿಗರು ಕುಡಿದು... ಕುಣಿದು, ಮಾದಕ ವಸ್ತುಗಳೊಂದಿಗೆ ನಡೆಸಿದ ಅನೈತಿಕ, ಮೋಜು ಪಾರ್ಟಿಯ ಬಗೆಗೆ ಈಗ ತನಿಖೆ ನಡೆಸಲಾಗುತ್ತಿದೆಯಂತೆ.

ಘಟನೆ ನಡೆದು ಹೋದ ಎರಡು ತಿಂಗಳ ನಂತರ ತನಿಖಾ ತಂಡ ದ್ವೀಪಕ್ಕೆ ಬಂದು ಹುಡುಕಿದರೆ ಅಲ್ಲಿ ಏನು ಸಾಕ್ಷಿ ಸಿಗುತ್ತದೆ ಎಂದು ಉಡುಪಿ ಸ್ಥಳೀಯ ನಿವಾಸಿಗಳು ಸರ್ಕಾರದ ವಿರುದ್ಧ ಕಿಡಿಕಾರುತ್ತಿರುವುದು ಗಮನಕ್ಕೆ ಬರುತ್ತಿದೆ. ನಾಗರಿಕರು ಈ ಕುರಿತು ಸಿಟ್ಟಾಗ ಬೇಕಿಲ್ಲ. ಬಹುಶಃ ಸರ್ಕಾರಕ್ಕೆ ಈ ಹಗರಣದ ಬಗೆಗೆ ಯಾವ ಸಾಕ್ಷ್ಯಾಧಾರಗಳೂ ಬೇಕಾಗಿಲ್ಲ. ಅತ್ಯಾಚಾರ, ಗಣಿ ಲೂಟಿ, ಭೂ ಗಳ್ಳತನ, ಸುಳ್ಳು ಪ್ರಮಾಣ ಪತ್ರ, ಬ್ಯಾಂಕಿಗೆ ನಕಲಿ ದಾಖಲೆ ನೀಡಿ ವಂಚನೆ, ಅಕ್ರಮ ಸೈಟು ಗಳಿಕೆ, ಜಮೀನು ನಿವೇಶನಗಳ ಅಕ್ರಮ ಡೀ ನೋಟಿಫಿಕೇಷನ್,... ಲಂಚ ಸ್ವೀಕಾರ, ಸಾಕ್ಷಿಗಳಿಗೆ ಪ್ರಾಣ ಬೆದರಿಕೆ, ಸದನದಲ್ಲಿ ನೀಲಿ ಚಿತ್ರ ವೀಕ್ಷಣೆ...ಹೀಗೆ ಯಾವುದಾದರೂ ಅಕ್ರಮ, ಹಗರಣದ ವಿಷಯದಲ್ಲಿ ಬಿಜೆಪಿ ಸರ್ಕಾರ ಸಾಕ್ಷ್ಯ ಸಂರಕ್ಷಿಸಲು ಯತ್ನಿಸಿದ, ತನಿಖೆ ನಡೆಸಿ ಅಪರಾಧಿಗಳಿಗೆ ಶಿಕ್ಷೆ ನೀಡಿದ ಉದಾಹರಣೆ ಇದೆಯೇ ? ಇಲ್ಲವಲ್ಲ.!! ತಗಾದೆ ತೆಗೆಯುವ ಜನರ ಕಣ್ಣಿಗೆ ಮಣ್ಣೆರಚಲು ಒಂದು ತನಿಖೆ ಎಂಬ ಶಾಸ್ತ್ರ. ತನಿಖಾ ವರದಿಯಲ್ಲಿ ತಕರಾರು ಕಂಡು ಬಂದರೆ ರೇಣುಕಾಚಾರ್ಯರ ನೇತೃತ್ವದಲ್ಲಿ ತನಿಖಾ ವರದಿ ಅಧ್ಯಯನ ನಡೆಸಿ ಶಿಫಾರಸ್ಸು ಮಾಡಿ ಅಂತ ಇನ್ನೊಂದು ಉಪ ಸಮಿತಿ ಮಾಡಿದರೆ ಅಲ್ಲಿಗೆ ಮುಗಿಯುತ್ತದೆ. ಅದಕ್ಕೆ ಯಾಕೆ ಜನ ಸುಮ್ಮನೇ ತಲೆ ಬಿಸಿ ಮಾಡಿಕೊಳ್ಳಬೇಕು. ಅಲ್ಲವೇ ?

20ನೇ ಮಹಾಧಿವೇಶನಕ್ಕೆ......

ಪುಟ 2 ರಿಂದ ......

ಚಳವಳಿಗೆಯನ್ನು ದೇಶಾದ್ಯಂತ ವಿಸ್ತರಿಸುವುದು. ಇವರ ಜತೆಯಲ್ಲೇ, ಎಡ ಐಕ್ಯತೆಯನ್ನು ಬಲಪಡಿಸಬೇಕು ಮತ್ತು ಎಡ ರಾಜಕೀಯವನ್ನು ಜನರ ಮುಂದಿಡಲು ಎಲ್ಲಾ ಎಡ ಶಕ್ತಿಗಳನ್ನು ಒಂದೆಡೆ ಸೇರಿಸಬೇಕು.

ದೊಡ್ಡ ಬಂಡವಾಳಶಾಹಿ ಪಕ್ಷಗಳು ಮತ್ತು ಬಂಡವಾಳಶಾಹಿ ಭೂಮಾಲಕ ವ್ಯವಸ್ಥೆಗೆ ನೈಜ ಪರ್ಯಾಯವಾಗಬಹುದಾದ ಒಂದು ಎಡ ಮತ್ತು ಪ್ರಜಾಸತ್ತಾತ್ಮಕ ಕೂಟ ಕಟ್ಟುವ ಕೆಲಸವನ್ನು ಪಕ್ಷವು ಮಾಡಬೇಕಾಗಿದೆ. ಹೋರಾಟಗಳು ಮತ್ತು ಐಕ್ಯ ಚಳುವಳಿಗಳ ಮೂಲಕ ಕಾರ್ಮಿಕ ವರ್ಗ, ರೈತಾಪಿ ವರ್ಗ, ಕೃಷಿ ಕೂಲಿಗಾರರು ಮತ್ತು ದುಡಿಯುವ ಇತರೆ ಜನವಿಭಾಗಗಳನ್ನು ಅಣಿನೆರೆಸಲು ನಮಗೆ ಸಾಧ್ಯವಾದರೆ ಆಗ ಎಡ ಮತ್ತು ಪ್ರಜಾಸತ್ತಾತ್ಮಕ ರಂಗವು ಹೊರ ಹೊಮ್ಮುತ್ತದೆ. ಕಾಂಗ್ರೆಸ್ ಮತ್ತು ಬಿಜೆಪಿಯ ವಿರುದ್ಧ ಹೋರಾಡಲು ಇಂತಹ ಕೂಟವನ್ನು ಕಟ್ಟುವ ಸಮಯದಲ್ಲಿ ಪಕ್ಷವು ಜನರ ಸಮಸ್ಯೆಗಳ ಕುರಿತು ಮತ್ತು ಜಾತ್ಯತೀತವಾದದ ರಕ್ಷಣೆಗಾಗಿ ಇತರೆ ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತ ಪಕ್ಷಗಳೊಂದಿಗೆ ಸಹಕರಿಸಲು ಬಯಸುತ್ತದೆ.

19ನೇ ಮಹಾಧಿವೇಶನದ ನಂತರದ ಕಾಲವು ಕಷ್ಟಕರವಾಗಿತ್ತು ಮತ್ತು ಪ್ರಯಾಸದ್ದಾಗಿತ್ತು. ಪಕ್ಷವು ತನ್ನ ಅತ್ಯಂತ ಬಲಿಷ್ಠ ನೆಲೆಯಾದ ಪಶ್ಚಿಮಬಂಗಾಳದಲ್ಲಿ ತೀವ್ರತರವಾದ ದಾಳಿಗೆ ಒಳಗಾಯಿತು. ಕಳೆದ ಮಹಾಧಿವೇಶನದ ನಂತರ ನಾವು 570 ಸದಸ್ಯರು ಮತ್ತು ಬೆಂಬಲಿಗರನ್ನು ಪಶ್ಚಿಮಬಂಗಾಳದಲ್ಲಿ ಕಳೆದುಕೊಂಡಿದ್ದೇವೆ. ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳಲ್ಲಿ ಪಕ್ಷವು ಅನುಭವಿಸಿದ ಹಿನ್ನಡೆಯನ್ನು ಬಳಸಿಕೊಂಡು ದಾಳಿಯನ್ನು ತೀವ್ರಗೊಳಿಸಲಾಗಿದೆ. ಈ ಸನ್ನಿವೇಶವನ್ನು ನಮ್ಮ ಪಕ್ಷವು ದೃಢವಾಗಿ ಎದುರಿಸುತ್ತಿದೆ ಮತ್ತು ಕಳೆದುಕೊಂಡಿರುವ ನೆಲೆಯನ್ನು ಹಿಂದಕ್ಕೆ ಪಡೆಯಲು ಜನರ ನಡುವೆ ಹೋಗಿ ದುಡಿಯುವ ಜನರ ಸಮಸ್ಯೆಗಳಿಗಾಗಿ ಹೋರಾಟಗಳನ್ನು ಹಾಗೂ ಚಳುವಳಿಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಪಶ್ಚಿಮ ಬಂಗಾಳದಲ್ಲಿ ನೆಲೆಯನ್ನು ಮತ್ತೆ ಪಡೆಯುವುದು ಮತ್ತು ಹಿಮ್ಮೆಟ್ಟಿಸುವುದೆಂದರೆ ಅದು ಪಕ್ಷದ ಸ್ವತಂತ್ರ ನೆಲೆಯನ್ನು ಗಟ್ಟಿಗೊಳಿಸುವ ಪ್ರಯತ್ನ.

ಸೈದ್ಧಾಂತಿಕ ಪ್ರಶ್ನೆಗಳು

ಈ ಮಹಾಧಿವೇಶನದಲ್ಲಿ ಪಕ್ಷವು ಕೈಗೆತ್ತಿಕೊಳ್ಳಲಿರುವ ಮತ್ತೊಂದು ಪ್ರಮುಖ ವಿಷಯವೆಂದರೆ ಸೈದ್ಧಾಂತಿಕ ಪ್ರಶ್ನೆಗಳ ಬಗ್ಗೆ ಚರ್ಚೆ ನಡೆಸುವುದು ಹಾಗೂ ಒಂದು ನಿರ್ಣಯವನ್ನು ಅಂಗೀಕರಿಸುವುದು. ಪಕ್ಷದ ಕೇಂದ್ರ ಸಮಿತಿಯು ಸಿದ್ಧಪಡಿಸಿರುವ ಕರಡು ವರದಿಯನ್ನು ಪಕ್ಷ ಎಲ್ಲಾ ಹಂತದ ಸಮಿತಿಗಳು ಚರ್ಚೆ ಮಾಡಿವೆ. ಮಾರ್ಕ್ಸ್‌ವಾದಿ–ಲೆನಿನ್‌ವಾದಿ ದೃಷ್ಟಿಕೋನದ ಆದಾರದಲ್ಲಿ ಕಮ್ಯುನಿಸ್ಟ್ ಪಕ್ಷವು ಸದಾಕಾಲವೂ ತನ್ನ ತಾತ್ವಿಕ ಹಾಗೂ ಸೈದ್ಧಾಂತಿಕ ತಿಳುವಳಿಕೆಯನ್ನು ಸಮಕಾಲೀನಗೊಳಿಸಬೇಕಾಗುತ್ತದೆ. ಸಮಕಾಲೀನ ಜಗತ್ತಿನಲ್ಲಿ, ಕೆಲವು ಎಡಪಂಥೀಯರೂ ಒಳಗೊಂಡಂತೆ ಅನೇಕ ಜನರು ಸಾಮ್ರಾಜ್ಯವಾದ ಅಸ್ತಿತ್ವದಲ್ಲಿದೆ ಎಂಬುದನ್ನು ಒಪ್ಪಿಕೊಳ್ಳುತ್ತಿಲ್ಲ. ಸಮಕಾಲೀನ ಜಗತ್ತಿನಲ್ಲಿ ಸಾಮ್ರಾಜ್ಯವಾದ ಹೇಗೆ ಕಾರ್ಯೋನ್ಮುಖವಾಗಿದೆ ಎಂದು ಸರಿಯಾಗಿ ಗ್ರಹಿಸಬೇಕಾದ ಹೊಣೆ ನಮ್ಮ ಮೇಲಿದೆ. ಹೊಸ ರೂಪ ಪಡೆದಿರುವ, ಜಾಗತಿಕವಾಗಿರುವ ಹಣಕಾಸು ಚಾಲಿತ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕ ವರ್ಗವು ಕ್ರಾಂತಿಕಾರಿ ಪಾತ್ರ ವಹಿಸಲು ಸಾಧ್ಯವಿದೆ ಎನ್ನುವುದನ್ನು ಅನೇಕರು ಅಲ್ಲಗಳೆಯುತ್ತಾರೆ. ಕಾರ್ಮಿಕ ವರ್ಗದ ಕ್ರಾಂತಿಕಾರಿ ಪಾತ್ರವನ್ನು ಪುನರ್ ಸಮರ್ಥಿಸಬೇಕಾಗಿದೆ. ಅದೇ ಸಮಯದಲ್ಲಿ, ಸಾಮ್ರಾಜ್ಯಶಾಹಿ ಜಾಗತೀಕರಣ ಯುಗದಲ್ಲಿನ ರಾಜಕೀಯ, ಸೈದ್ಧಾಂತಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಎದುರಾಗುತ್ತಿರುವ ಸವಾಲುಗಳನ್ನು ನಾವು ವಿಮರ್ಶಿಸಬೇಕಾಗುತ್ತದೆ. ರಾಜಕೀಯ, ಸೈದ್ಧಾಂತಿಕ ಹಾಗೂ ಭೌತಿಕ ಆಯಾಮಗಳಲ್ಲಿ ಮತ್ತು ಭಾರತೀಯ ಪರಿಸ್ಥಿತಿಯಲ್ಲಿ ವರ್ಗ ಹೋರಾಟವನ್ನು ನಡೆಸುವ ಸಾಧನವನ್ನು ಬೆಳೆಸುವುದು ಹೇಗೆ ಎಂಬುದನ್ನು ನಿರ್ಣಯದಲ್ಲಿ ಹೇಳಲಾಗಿದೆ.

ಸಂಘಟನೆ ಕಟ್ಟಿ

ಹೊಸ ಜನವಿಭಾಗಗಳ ಹತ್ತಿರ ಮತ್ತು ಹೊಸ ಪ್ರದೇಶಗಳಿಗೆ ಹೋಗುವ ಮೂಲಕ ತನ್ನ ಒಂದು ಮಿಲಿಯಕ್ಕಿಂತಲೂ ಹೆಚ್ಚಿರುವ ಸದಸ್ಯತ್ವವನ್ನು ಇನ್ನೂ ಹೆಚ್ಚು ಮಾಡಿ ಸಿಪಿಐ(ಎಂ) ಸಂಘಟನೆಯನ್ನು ಒಂದು ಸಮರಶೀಲ ಶಕ್ತಿಯನ್ನಾಗಿ ಬೆಳೆಸಬೇಕಾಗಿದೆ. ಅದಕ್ಕೆ ಅಗತ್ಯವಿರುವ ಸಂಘಟನಾ ಕ್ರಮಗಳ ಕುರಿತು ಮಹಾಧಿವೇಶನ ನಿರ್ಧರಿಸುತ್ತದೆ.

ಕೋಝಿಕೋಡ್‌ನಿಂದ ಕರೆ

ಒಂದು ಬಲಿಷ್ಠವಾದ ಕಮ್ಯುನಿಸ್ಟ್ ಚಳುವಳಿಯನ್ನು ಹೊಂದಿರುವ ಮತ್ತು ದಶಕಗಳ ಹೋರಾಟ ಹಾಗೂ ಬಲಿದಾನಗಳ ಮೂಲಕ ಕಟ್ಟಿರುವ ಜನಪ್ರಿಯ ನೆಲೆಯನ್ನು ಹೊಂದಿರುವ ರಾಜ್ಯವಾದ ಕೇರಳದ ಕೋಝಿಕೋಡ್‌ನಲ್ಲಿ ಪಕ್ಷದ 20ನೇ ಮಹಾಧಿವೇಶನ ನಡೆಯುತ್ತಿದೆ. ಪಕ್ಷದ ಮಹಾಧಿವೇಶನಕ್ಕೆ ತಕ್ಕುದಾದ ಸ್ಥಳ ಅದು. ಭವಿಷ್ಯದ ಎಲ್ಲಾ ಸವಾಲುಗಳನ್ನು ಎದುರಿಸುವ ಮತ್ತು ಸಿಪಿಐ(ಎಂ) ಹಾಗೂ ಎಡ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಹೆಚ್ಚಿಸುವ ಕರೆಯನ್ನು ಈ ಮಹಾಧಿವೇಶನ ನೀಡಲಿದೆ.

– ಕನ್ನಡಕ್ಕೆ ತರಗಳಲೆ ಸುರೇಂದ್ರರಾವ್

ಮಹಾ ಧರಣಿ

ಪುಟ 7ರಿಂದ.......

ಆಸರೆಯಾದ ಭೂಮಿಯ ಪ್ರಶ್ನೆಯನ್ನು ಇತ್ಯರ್ಥಗೊಳಿಸಿ ಎಂದು ಹೋರಾಟದ ಬಾವುಟವನ್ನು ಊರಿ ಮಹಾಧರಣಿ ಆರಂಭಿಸಲಿದ್ದಾರೆ. ಮತ್ತು ಈ ಧರಣಿ ಒಂದು ದಿನ ಬೆಂಗಳೂರಿಗೆ ಬಂದು ಮೆರವಣಿಗೆ ಮಾಡಿ ಮನವಿ ಕೊಟ್ಟು ಸಮಸ್ಯೆ ಬಗೆ ಹರಿಸಿ ಎಂದು ಒತ್ತಾಯಿಸಿ ವಾಪಸ್ ಹೋಗುವ ಹೋರಾಟವಲ್ಲ. ಸಮಸ್ಯೆಗೆ ಪರಿಹಾರ ದೊರೆಯುವವರೆಗೆ ಪಟ್ಟಾಗಿ ಕೂರುವ ಒಂದು ಅನಿರ್ದಿಷ್ಟಾವಧಿಯ ಆಂದೋಲನ.

ಅನ್ನ ಬೆಳೆಯುವ ರೈತನ ಒಡೆತನದಲ್ಲಿರಬೇಕಾದ ಕೃಷಿ ಭೂಮಿಯು ಬಂಡವಾಳಗಾರರ ಕೈಯಲ್ಲಿ ಕಂಪನಿಗಳ, ಭೂಗಳ್ಳರ ಮುಷ್ಟಿಯಲ್ಲಿ ಕೇಂದ್ರೀಕರಣಗೊಳ್ಳತೊಡಗಿರುವಾಗ, ಒತ್ತುವರಿ, ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಬಡ ರೈತರ ಬದುಕಿನ ಆಧಾರವಾಗ ಬೇಕಾದ ಸರ್ಕಾರಿ ಭೂಮಿ, ಅರಣ್ಯ ಭೂಮಿ ಕಾರ್ಪೊರೇಟ್ ಕಂಪನಿಗಳ ಬಾಯಿಗೆ ಬಲಿಯಾಗುತ್ತಿರುವಾಗ, ಬಿಸಿಲು ಮಳೆ ಎನ್ನದೇ ಹಗಲಿರುಳು ದುಡಿಯುವ ಜನರಿಗೆ ನೆರಳು ಮನೆಗೆ ನಿವೇಶನವಾಗಬೇಕಾದ ಜಾಗ ಶ್ರೀಮಂತರು, ಭ್ರಷ್ಟ ಸಚಿವ, ಶಾಸಕರು, ಅಧಿಕಾರಿಗಳು ಹಂಚಿಕೊಂಡು ತಿನ್ನುವ ಆಹಾರವಾಗುತ್ತಿರುವಾಗ, ಬೇಕು ಬೇಕಾದವರಿಗೆ ಹರಿದು ಹಂಚುವ ಉದಾರ ಉಂಬಳಿಯಂತಾಗುತ್ತಿರುವಾಗ.... ಇದು ಸುಮ್ಮನೆ ಕೂರುವ ಕಾಲವಲ್ಲ. ಖಂಡಿತ ಇದು ನಾಳೆ ನೋಡೋಣ ಎಂದು ಕಾದು ನೋಡುವ ಕಾಲವೂ ಅಲ್ಲ.

ಈಗಿಲ್ಲದಿದ್ದರೆ ಇನ್ನೆಂದು ಇಲ್ಲ

ಇದು ಒಂದು ತುರ್ತು ಪರಿಸ್ಥಿತಿ. ಈಗ ಎಚ್ಚೆತ್ತುಕೊಂಡು ಭೂಮಿಯ ಹಕ್ಕಿಗಾಗಿ, ನಿವೇಶನ ಹಕ್ಕಿಗಾಗಿ ಸೆಟೆದು ನಿಂತರೆ ದುಡಿಯುವವರಿಗೆ, ಬಡವರಿಗೆ ಭೂಮಿ ಉಂಟು. ಇಲ್ಲವಾದರೆ ಇಲ್ಲ. ಅಕ್ಷರಶಃ ಇದು ವಸ್ತು ಸ್ಥಿತಿ.

ಇದನ್ನರಿತು ರೈತರು, ಕೂಲಿಕಾರರು, ಬಡವರು, ದಲಿತರು, ಬಗರ್ ಹುಕುಂ ಸಾಗುವಳಿದಾರರು, ಅರಣ್ಯ ಭೂಮಿ ಸಾಗುವಳಿದಾರರು ನಿವೇಶನ ಭೂರಹಿತ ಅರ್ಜಿದಾರರು, ಈ ಹೋರಾಟದ ಪ್ರವಾಹದಲ್ಲಿ ಹರಿದು ಬಂದರೆ ಕರ್ನಾಟಕ ರಾಜ್ಯದಲ್ಲಿ ಭೂಮಿ ಪ್ರಶ್ನೆಯನ್ನು ನಿರ್ಣಾಯಕ ಭೂ ಸುಧಾರಣೆಯ ಹೋರಾಟಕ್ಕೆ ಅದು ಮುನ್ನುಡಿಯಾಗುತ್ತದೆ. ಬವಣೆ, ತೊಂದರೆ, ಸಂಕಷ್ಟಗಳ ಭಾರದಲ್ಲಿ ಜರ್ಜರಿತವಾಗಿರುವ ನೊಂದ ಜನಗಳ ಬಾಳು ಒಂದಷ್ಟಾದರೂ ಹಸನಾಗುತ್ತದೆ. ಕರ್ನಾಟಕ ರಾಜ್ಯ ನಿಜವಾದ ಪ್ರಗತಿಯ ಹಾದಿಯಲ್ಲಿ ದೃಢವಾದ ಹೆಜ್ಜೆಗಳನ್ನು ಹಾಕಿದಂತಾಗುತ್ತದೆ.

ಸೂಚನೆ : ಸಂಗಾತಿಗಳೇ, ಈ ಭೂಮಿ ಹೋರಾಟಕ್ಕೆ ಪೂರಕವಾಗಿ ಹಲವು ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾಗಲಿವೆ. ಈ ಆಂದೋಲನದ ಸ್ಥಳೀಯ ಹೋರಾಟ, ಪ್ರಶ್ನೆಗಳ ಕುರಿತ ವರದಿ–ಫೋಟೋಗಳನ್ನು ದಯಮಾಡಿ ಜನಶಕ್ತಿಗೆ ಕಳುಹಿಸಿಕೊಡಿ.

ಹಣಕಾಸು ಬಂಡವಾಳಿಗರ ಬೆನ್ನು...

ಪುಟ 8 ರಿಂದ.......


ಇಲಾಖೆಗಳಲ್ಲಿ ಕನ್ನಡ ಬಾವುಟ ಹಾರಿಸುವುದನ್ನು ಕಡ್ಡಾಯ ಮಾಡುವ ಪ್ರಸ್ತಾಪ ಮಾಡಿರುವುದು ಬಜೆಟ್‌ಗೆ ಹೇಗೆ ಸಾಂಧರ್ಬಿಕವೋ ತಿಳಿಯದಾಗಿದೆ.

ಕಾರ್ಮಿಕರಿಗೆ ಪಿಂಚಣಿ ಯೋಜನೆ ಎಂಬ ಹಣಕಾಸು ಬಂಡವಾಳಿಗರ ಸೇವೆ

ಕಾರ್ಮಿಕರಿಗೆ ಮಾರಕವಾಗಿರುವ ಷೇರು ಪೇಟೆ ಆಧಾರಿತ ಪಿಂಚಣಿ ಯೋಜನೆಯನ್ನು ಈಗ ಜಾರಿ ಮಾಡಿರುವ 7 ವಿಧ ಕಾರ್ಮಿಕರ ಜೊತೆಗೆ ಒಟು 32 ವಿಧದ ಕಾರ್ಮಿಕರಿಗೆ ಅಳವಡಿಸುವ ಉದ್ದೇಶವನ್ನು ಪ್ರಕಟಿಸಿ ಅಂತರ ರಾಷ್ಟ್ರೀಯ ಹಣಕಾಸು ಬಂಡವಾಳಗಾರರ ಸೇವೆಯಲ್ಲಿ ತಾನೇನೂ ಕಮ್ಮಿಯಿಲ್ಲ ಎಂಬುದನ್ನು ತೋರಿಸಲು ಆತುರ ಪಡುತ್ತಿದೆ. 20 ಲಕ್ಷ ಅಸಂಘಟಿತ ಕಾರ್ಮಿಕರಿಗೆ ಜನಶ್ರೀ ಭೀಮಾ ಯೋಜನೆಯನ್ನು ಅಳವಡಿಸುವುದಾಗಿ ಮಾಡಿರುವುದು ಮಾತ್ರ ಸ್ವಲ್ಪ ಪ್ರಯೋಜನಕಾರಿ ಆಗಬಹುದಾಗಿದೆ.

ಇದನ್ನು ಹೊರತು ಪಡಿಸಿದರೆ ಬೇರೇನೂ ಪ್ರಯೋಜನಕಾರಿ ಯೋಜನೆಗಳನ್ನು ಕಾರ್ಮಿಕರಿಗೆ ಪ್ರಸ್ತಾಪ ಮಾಡಲಾಗಿಲ್ಲ. ನಿರುದ್ಯೋಗಿಗಳನ್ನು ಉದ್ಧಾರ ಮಾಡುವ ಹೆಸರಲ್ಲಿ ಜರ್ಮನ್ ದೇಶದ ಜಿಐಝೆಡ್ ಕಂಪನಿ ಸಹಯೋಗದಿಂದ ಕುಶಲತೆ ಅಭಿವೃದ್ಧಿ ಯೋಜನೆ ಭಾಗವಾಗಿ ಗುಲ್ಬರ್ಗಾ ಮತ್ತು ಬೆಂಗಳೂರಲ್ಲಿ ಕೇಂದ್ರಗಳನ್ನು ಆರಂಭಿಸಲಾಗುತ್ತಿದೆ. ಅಂಗನವಾಡಿ ಕಟ್ಟಡಗಳಿಗೆ ರೂ. 75 ಕೋಟಿ ಮಂಜೂರು ಮಾಡಿದ್ದೂ, ಸುಮಂಗಲಿ ಸೇವಾಶ್ರಮಕ್ಕೆ ರೂ 50 ಲಕ್ಷ ಒದಗಿಸಲಾಗಿದೆ. ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳು ಅಂಗನವಾಡಿ ನೌಕರರ ಬೆನ್ನು ಹತ್ತಿ ಸರಕಾರದ ಸೌಲಭ್ಯಗಳನ್ನು ಕೊಡುವಂತೆ ಕೇಳುತ್ತಿರುವಾಗ ರೂ.500 ಕೋಟಿಗಳನ್ನು ಮಾತ್ರ ಹಂಚಿಕೆ ಮಾಡಲಾಗಿದೆ. ರಾಜ್ಯ ಅಬ್ಕಾರಿ ಶುಲ್ಕ, ಮಾರಾಟ ತೆರಿಗೆ ಮತ್ತು ಮುದ್ರಾಂಕ ಶುಲ್ಕಗಳನ್ನು ಹೆಚ್ಚಿಸುವ ಮೂಲಕ ರೂ. 3,550 ಕೋಟಿಗಳ ಹೆಚ್ಚುವರಿ ಆದಾಯ ಗಳಿಸುವ ಮೂಲಕ ಮತ್ತಷ್ಟು ಬೆಲೆ ಏರಿಕೆಗೆ ಕಾರಣವಾಗಿದೆ. ಸರಕಾರದ ಸಾಲದ ಬಡ್ಡಿ ಪಾವತಿಗಳಿಗಾಗಿ ರೂ.7,500 ಕೋಟಿ ವೆಚ್ಚಮಾಡುವುದು ಜನ ಕಲ್ಯಾಣ ಕಾರ್ಯಕ್ರಮಗಳಿಗೆ ಹಣ ಇಲ್ಲದಂತೆ ಮಾಡಲು ಮತ್ತೊಂದು ಕಾರಣವಾಗಿದೆ. ಸರಕಾರದ ಸಾಲವು ಕೂಡ ಜನತೆಯ ಮೇಲೆ ಮುಂದಿನ ದಿನಗಳಲ್ಲಿ ಮತ್ತಷ್ಟು ಹೊರೆಗಳನ್ನು ಹಾಕುವ ಮುನ್ಸೂಚನೆಯಾಗಿದೆ. ಒಟ್ಟಾರೆ ರಾಜ್ಯದ ಬಿಜೆಪಿ ಸರಕಾರವು ರೈತವಿರೋಧಿ, ಕಾರ್ಮಿಕ ವಿರೋಧಿ, ಬಂಡವಾಳಗಾರರ ಪರ ಬಜೆಟ್‌ನ್ನು ವಿರೋಧಿಸಿ ತೀವ್ರ ಪತ್ರಿಭಟನೆಗಳನ್ನು ಸಂಘಟಿಸುವುದು ಅಗತ್ಯವಾಗಿದೆ.

2ಜಿ ತೀರ್ಪಿನ ಮರು ಪರಿಶೀಲನೆಯ ಅಗತ್ಯವೇನಿಲ್ಲ ಎಂದ ಸುಪ್ರಿಂ ಕೋರ್ಟ್



ಯುಪಿಎ ಸರಕಾರದ 2ಜಿ ತರಂಗಾಂತರ ಹಂಚಿಕೆ ಕಾನೂನುಬಾಹಿರವಾಗಿದೆ, ನೈಸರ್ಗಿಕ ಸಂಪನ್ಮೂಲವೊಂದನ್ನು ಈ ರೀತಿ 'ಮೊದಲು ಬಂದವರಿಗೆ ಮೊದಲ ಸೇವೆ' ಎಂಬ ಧೋರಣೆಯ ಅಡಿಯಲ್ಲಿ ನೀಡುವಂತಿಲ್ಲ ಎನ್ನುತ್ತ ಸರಕಾರ ನೀಡಿರುವ 122 ಪರವಾನಿಗೆಗಳನ್ನೆಲ್ಲ ರದ್ದು ಮಾಡಿದ ಸುಪ್ರಿಂ ಕೋರ್ಟಿನ ತೀರ್ಪಿನಲ್ಲಿ ದೋಷಗಳಿವೆ, ಅವುಗಳ ಮರು ಪರಿಶೀಲನೆ ಮಾಡಬೇಕು ಎಂದು ಕೇಳಿಕೊಂಡು ಟಾಟಾ ಟೆಲಿಸರ್ವಿಸಸ್, ಯುನಿನೋರ್, ವಿಡಿಯೋಕೋನ್ ಟೆಲಿಕಮ್ಯುನಿಕೇಶನ್ಸ್ ಮುಂತಾದ ಪರವಾನಿಗೆ ರದ್ದಾದ ಏಳು ಕಂಪನಿಗಳು ಮತ್ತು ಸ್ವತಃ ಮಾಜಿ ದೂರ ಸಂಪರ್ಕ ಮಂತ್ರಿಗಳಲ್ಲದೆ, ಸ್ವತಃ ಯುಪಿಎ-2 ಪ್ರಧಾನ ಮಂತ್ರಿಗಳ ಕಚೇರಿ ಮತ್ತು ಯುಪಿಎ-2 ಸರಕಾರ ಕೂಡ ಅರ್ಜಿ ಸಲ್ಲಿಸಿದ್ದವು.

"ನಾವು ಈ ಮೊಕದ್ದಮೆಗೆ ಸಂಬಂಧಪಟ್ಟ ದಾಖಲೆಗಳನ್ನು ಜಾಗರೂಕತೆಯಿಂದ ನೋಡಿದ್ದೇವೆ. ಅರ್ಜಿದಾರರು ಮರು ಪರಿಶೀಲಿಸಬೇಕೆಂದು ಕೇಳಿರುವ ತೀರ್ಪಿನಲ್ಲಿ ಯಾವುದೇ ತಪ್ಪು ಕಾಣಿಸುತ್ತಿಲ್ಲ" ಎನ್ನುತ್ತ ಈ ಅರ್ಜಿಗಳನ್ನು ಇಬ್ಬರು ನ್ಯಾಯಮೂರ್ತಿಗಳ ಸುಪ್ರಿಂ ಕೋರ್ಟ್ ಪೀಠ ವಜಾ ಮಾಡಿದೆ. ಈ ತೀರ್ಪು ತನ್ನ ಹಗರಣದ ಮೊಕದ್ದಮೆಯ ಮೇಲೆ ಪ್ರಭಾವ ಬೀರುತ್ತದೆಯಾದ್ದರಿಂದ ಅದರ ಮರು ಪರಿಶೀಲನೆ ಮಾಡಬೇಕು ಎಂದು ಕೇಳಿರುವ ಮಾಜಿ ದೂರಸಂಪರ್ಕ ಮಂತ್ರಿಗಳ ಅರ್ಜಿಯನ್ನು ಪರಿಶೀಲಿಸಲು ಸಮರ್ಥನೆ ಮಾತ್ರವಲ್ಲ, ಸರಿಯಾದ ಆಧಾರಗಳು ಕೂಡ ಇಲ್ಲ ಎಂದು ಸುಪ್ರಿಂ ಕೋರ್ಟ್ ಹೇಳಿದೆ. ವಿಚಾರಣೆಗೆ ಅನುಮತಿ ನೀಡುವ ವಿಷಯದಲ್ಲಿ ಪ್ರಧಾನ ಮಂತ್ರಿಗಳ ಕಚೇರಿಯ ಅಧಿಕಾರಿಗಳ ಬಗ್ಗೆ ಮಾಡಿರುವ ಟೀಕೆಗಳ ಮರು ಪರಿಶೀಲನೆಯ ಅಗತ್ಯವೂ ಇಲ್ಲ ಎಂದು ಸುಪ್ರಿಂ ಕೋರ್ಟ್ ಹೇಳಿದೆ. 2ಜಿ ತರಂಗಾಂತರವನ್ನು ನಾಲ್ಕು ತಿಂಗಳ ಒಳಗೆ ಹೊಸದಾಗಿ ಹಂಚಲು ಹರಾಜು ನಡೆಸುವ ಪ್ರಕ್ರಿಯೆಯನ್ನು ಮುಗಿಸಲು ಸಾಧ್ಯವಿಲ್ಲ ಎನ್ನುತ್ತ ಈ ಬಗ್ಗೆ ಸ್ಪಷ್ಟೀಕರಣ ಕೇಳಿ ಯುಪಿಎ-2 ಸರಕಾರ ಹಾಕಿರುವ ಅರ್ಜಿಯನ್ನು ಮಾತ್ರ ಪರಿಶೀಲನೆಗೆ ಸ್ವೀಕರಿಸಿ ಎಪ್ರಿಲ್ 13ರಂದು ಬಹಿರಂಗ ಕೋರ್ಟಿನಲ್ಲಿ ವಿಚಾರಣೆ ನಡೆಸಲಾಗುವುದು ಎಂದು ಸುಪ್ರಿಂ ಕೋರ್ಟ್ ಹೇಳಿರುವುದಾಗಿ ವರದಿಯಾಗಿದೆ. ಪೆಚ್ಚುಮೋರೆ ಹಾಕಿಕೊಳ್ಳಬೇಕಾಗಿ ಬಂದ ಯುಪಿಎ-2 ಸರಕಾರ ಎಪ್ರಿಲ್ 13ಕ್ಕೆ ವಿಚಾರಣೆಗೆ ಒಪ್ಪಿರುವುದು 'ಸಂತೋಷದ ಸಂಗತಿ' ಎಂದು ಅದನ್ನು ಮರೆಮಾಚಲು ಯತ್ನಿಸಿದೆ. ●



ವೇದರಾಜ ಎನ್.ಕೆ.

ಯುಪಿಎ-2 ದರ್ಬಾರಿನಲ್ಲಿ ಬಾಲವೇ ತಲೆಯನ್ನು ಅಲ್ಲಾಡಿಸುವ ಸ್ಥಿತಿ

ಸಾರ್ವಜನಿಕ ವಲಯದ ಕೋಲ್ ಇಂಡಿಯಾ ಲಿಮಿಟೆಡ್(ಸಿಐಎಲ್)ನಲ್ಲಿ ಕೇವಲ 1ಶೇ. ಶೇರು ಬಂಡವಾಳ ಪಡೆದಿರುವ ವಿದೇಶಿ ಹಣಕಾಸು ಸಂಸ್ಥೆಯೊಂದು ದರ್ಬಾರು ನಡೆಸಿದ್ದರೂ ಯುಪಿಎ-2 ಸರಕಾರದ ಕಲ್ಲಿದ್ದಲು ಮಂತ್ರಾಲಯ ದಿವ್ಯ ಮೌನ ತಳೆದಿರುವ ಬಗ್ಗೆ ಕಳೆದ ಸಂಚಿಕೆಯಲ್ಲಿ ಓದಿರುವಿರಿ. ಈ ಅನುಭವದ ಹಿನ್ನೆಲೆಯಲ್ಲಿ, ಸಾರ್ವಜನಿಕ ವಲಯದ ಕಂಪನಿಯೊಂದರ 49ಶೇ.ದ ವರೆಗಿನ ಶೇರು ವಿಕ್ರಯದಿಂದ ಏನೂ ತೊಂದರೆಯಿಲ್ಲ, ಏಕೆಂದರೆ ಆಗಲೂ ಸರಕಾರದ್ದೇ ಪ್ರಮುಖ ಪಾಲು ತಾನೇ ಎಂಬ ಯುಪಿಎ ವಕ್ತಾರರು ಮತ್ತು ನವ-ಉದಾರವಾದದ ಬೆಂಬಲಿಗರ ತರ್ಕಕ್ಕೆ ಏನು ಅರ್ಥವುಳಿಯುತ್ತದೆ? ಇದು ಸಹಜವಾಗಿ ಏಳುವ ಪ್ರಶ್ನೆ. 1ಶೇ. ದ ಕಂಪನಿಯ ದರ್ಬಾರೇ ಇಷ್ಟಿರುವಾಗ 49ಶೇ. ಶೇರು ಹೊಂದುವ ವಿದೇಶಿ ಕಂಪನಿಯ ಅಟಾಟೋಪ ಹೇಗಿರಬಹುದು, ಅದಕ್ಕೆ ಭಾರತ ಸರ್ಕಾರದ ಪ್ರತಿಕ್ರಿಯೆ ಹೇಗಿರಬಹುದು ಎಂದು ಊಹಿಸಿಕೊಳ್ಳಬಲ್ಲಿರಾ?

ಯುಪಿಎ ವಕ್ತಾರರ ಮತ್ತು ನವ-ಉದಾರವಾದಿಗಳ ಇಂತಹ ಸಮರ್ಥನೆಗಳೆಲ್ಲ ಪೊಳ್ಳು ಎಂಬುದಕ್ಕೆ ಟಿಸಿಐನ ವರ್ತನೆ ಮತ್ತೊಂದು ಜೀವಂತ ಉದಾಹರಣೆ, ಬಾಲವೇ ತಲೆಯನ್ನು ಅಲ್ಲಾಡಿಸಲು ಸರ್ಕಾರ ಬಿಟ್ಟಿದೆ ಎಂದು ಸಿಐಟಿಯು ಇದನ್ನು ಖಂಡಿಸಿದೆ. ಸಿಐಎಲ್ ಅತ್ಯುನ್ನತ ಲಾಭ ಗಳಿಸುತ್ತಿರುವ ಒಂದು ಮಹಾರತ್ನ ಕಂಪನಿ, ಶೇರು ವಿಕ್ರಯದ ನಂತರವೂ ಈಗಲೂ 90ಶೇ. ಬಂಡವಾಳದ ಮೇಲೆ ಒಡೆತನವನ್ನು ಹೊಂದಿದೆ. ಆದರೂ ಕೇವಲ 1ಶೇ. ಬಂಡವಾಳ ಹೊಂದಿರುವ, ವಿದೇಶಿ ನೆಲದಿಂದ ಕಾರ್ಯ ನಿರ್ವಹಿಸುತ್ತಿರುವ ಕಂಪನಿಯೊಂದು ಕಾನೂನು ಕ್ರಮದ ಬೆದರಿಕೆ ಹಾಕುವ ಧಿಮಾಕು ಪ್ರದರ್ಶಿಸುತ್ತಿದೆ.

ಇಂತಹ ಪ್ರತಿಕೂಲ ಪರಿಸ್ಥಿತಿ ಬರಬಹುದೆಂದು ಕಂಡರಿಸಿಯೇ ಕಾರ್ಮಿಕ ಸಂಘಗಳು ತಮ್ಮ ಫೆಬ್ರುವರಿ 28ರ ಸಾರ್ವತ್ರಿಕ ಮುಷ್ಕರದಲ್ಲಿ ಸಾರ್ವಜನಿಕ ವಲಯದ ಘಟಕಗಳ ಶೇರು ಮಾರಾಟವನ್ನು ನಿಲ್ಲಿಸಬೇಕು, ಏಕೆಂದರೆ ಇದು ದೇಶದ ಹಿತಾಸಕ್ತಿಗಳಿಗೆ ವ್ಯತಿರಿಕ್ತವಾದದ್ದು ಎಂದು ಇದನ್ನೊಂದು ಪ್ರಮುಖ ಬೇಡಿಕೆಯಾಗಿ ಮುಂದಿಟ್ಟಿದ್ದವು. ಆದರೆ ನವ-ಉದಾರವಾದವನ್ನು ಅಪ್ಪಿಕೊಂಡು ಕುರುಡಾಗಿರುವ ಯುಪಿಎ-2 ಪ್ರಸಕ್ತ ಬಜೆಟಿನಲ್ಲೂ ಇನ್ನೂ 40,000 ಕೋಟಿ ರೂ.ಗಳ ಶೇರು ವಿಕ್ರಯದ ಯೋಜನೆ ಹಾಕಿಕೊಂಡಿದೆ. ಈಗಲಾದರೂ ಯುಪಿಎ-2 ಸರಕಾರ ದೇಶದ ಹಿತದೃಷ್ಟಿಯಿಂದ ಈ ಶೇರು ವಿಕ್ರಯವನ್ನು ನಿಲ್ಲಿಸಬೇಕು ಎಂದು ಸಿಐಟಿಯು ಆಗ್ರಹ ಪಡಿಸಿದೆ.

ಸಂವಿಧಾನಿಕ ಹೊಣೆ ನಿಭಾಯಿಸದ ಯುಪಿಎ-2 ಬಜೆಟ್

'ಬುಡಕಟ್ಟು ಉಪಯೋಜನೆ' (ಟಿಎಸ್‌ಪಿ)ಯ ಅಡಿಯಲ್ಲಿ ಕೇಂದ್ರದಲ್ಲಿನ ಸರಕಾರದ ಪ್ರತಿಯೊಂದು ಇಲಾಖೆ ಬುಡಕಟ್ಟು ಅಭಿವೃದ್ಧಿಗೆ ವಿಶೇಷ ನೆರವು ಒದಗಿಸಬೇಕು, ಇದು ಬುಡಕಟ್ಟು ಜನಸಂಖ್ಯೆಯ ಅನುಪಾತಕ್ಕೆ ಅನುಗುಣವಾಗಿ ಇರಬೇಕು ಎಂದು ಐದನೇ ಪಂಚವಾರ್ಷಿಕ ಯೋಜನೆಯ ನಂತರ ಸಂವಿಧಾನ ಇನ್ನೊಂದು ಹೊಣೆ ವಿಧಿಸಿತ್ತು. ಅದೇ ರೀತಿ, ಪರಿಶಿಷ್ಟ ಜಾತಿಗಳಿಗೆ 'ವಿಶೇಷ ಘಟಕ ಯೋಜನೆ' (ಎಸ್‌ಸಿಪಿ)ಗೆ ಪರಿಶಿಷ್ಟ ಜಾತಿಗಳ ಜನರ ಅಭಿವೃದ್ಧಿಗೆ ಪ್ರತ್ಯೇಕ ಹಣ ಒದಗಿಸಬೇಕು. ಆದರೆ ಯುಪಿಎ-2 ಸರಕಾರಕ್ಕೆ ಈ ಎರಡೂ ಹೊಣೆಗಳನ್ನು ನಿಭಾಯಿಸುವಲ್ಲಿ ಏನೇನೂ ಆಸಕ್ತಿಯಿಲ್ಲ ಎಂಬುದನ್ನು ಈ ಸಲದ ಬಜೆಟ್ ಕೂಡ ತೋರಿಸಿಕೊಟ್ಟಿದೆ.



ವಾಸ್ತವವಾಗಿ ಬಜೆಟಿನಲ್ಲಿ ಟಿಎಸ್‌ಪಿ ಗೆ 8.2ಶೇ. ಮತ್ತು ಎಸ್‌ಸಿಪಿ ಗೆ 16.2ಶೇ. ಹಣ ಒದಗಿಸಬೇಕಾಗಿತ್ತು. ಇದು ಸರಕಾರವೇ ಹಾಕಿಕೊಂಡ ಗುರಿ ಕೂಡ. ಆದರೆ 2012-13ರ ಬಜೆಟಿನಲ್ಲಿ ಕೊಡ ಬಯಸಿರುವುದು ಅನುಕ್ರಮವಾಗಿ 5.4ಶೇ. ಮತ್ತು 8.2 ಶೇ. ಮಾತ್ರ ಇದನ್ನು ಮರೆ ಮಾಚುತ್ತಾ ಹಣಕಾಸು ಮಂತ್ರಿಗಳು ಈ ಎರಡೂ ಪ್ರಮುಖ ಯೋಜನೆಗಳಿಗೆ ಮೊತ್ತವನ್ನು 17.6ಶೇ. ದಿಂದ 18ಶೇ. ದಷ್ಟು ಹೆಚ್ಚಿಸಲಾಗಿದೆ ಎಂದಿದ್ದಾರೆ. ವಾಸ್ತವವಾಗಿ ಒಟ್ಟು ಬಜೆಟಿನ ಶೇಕಡಾವಾರಾಗಿ ಇವು ಕಳೆದ ವರ್ಷಕ್ಕಿಂತಲೂ ಕೆಳಗೆ ಇಳಿದಿವೆ.

ಬಹುಶಃ ಇಂತಹ ಅಂಕಿ-ಅಂಶಗಳ ಕಸರತ್ತೇ ಹಣಕಾಸು ಮಂತ್ರಿಗಳ ಮೇಲೆ ಹೆಚ್ಚಿನ 'ಹೊರೆ' ಹಾಕಿರಬೇಕು ಎಂದು ಒಬ್ಬ ವಿಶ್ಲೇಷಕರು ಟಿಪ್ಪಣಿ ಮಾಡಿದ್ದಾರೆ. ಅವರೇನು ಮಾಡಿಯಾರು, ಪಾಪ! ಯುಪಿಎ-2 ಸರಕಾರದ ನವ-ಉದಾರವಾದಿ ತತ್ವವನ್ನು ಪ್ರತಿನಿಧಿಸಬೇಕು ತಾನೇ? ಆದ್ದರಿಂದ ಹೇಳುವುದೊಂದು, ಮಾಡುವುದು ಇನ್ನೊಂದು.

ಬಜೆಟ್ ಮಂಡಿಸುವ ಹಿಂದಿನ ದಿನ ಇದೇ ಹಣಕಾಸು ಮಂತ್ರಿಗಳು ಮಂಡಿಸಿದ ಆರ್ಥಿಕ ಸರ್ವೇಕ್ಷಣೆ ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ಜಾತಿ(ಒಬಿಸಿ)ಗಳ ಕಲ್ಯಾಣಕ್ಕೆ 2011-12ರಲ್ಲಿ ಮಾಡಿರುವ ಖರ್ಚಿನ ಪ್ರಮಾಣ ಜಿಡಿಪಿಯ 0.67 ಶೇ.ದಿಂದ 0.57 ಶೇ.ಕ್ಕೆ ಇಳಿದಿದೆ ಎಂದಿದ್ದರು. ಇಂತಹ ಕಡಿತ ಪರಿಶಿಷ್ಟ ಜಾತಿ/ಪಂಗಡಗಳು, ಒಬಿಸಿ ಗಳಿಗಷ್ಟೇ ಸೀಮಿತವಾಗಿಲ್ಲ, ಸಮಸ್ತ 'ಆಮ್ ಆದ್ಮಿ'ಗಳಿಗೂ ಅನ್ವಯವಾಗಿದೆ ಎಂದು ಅವರು ಈ ಸರ್ವೇಕ್ಷಣೆಯಲ್ಲಿ ಕೊಟ್ಟಿರುವ ಇತರ ಅಂಕಿ-ಅಂಶಗಳೂ ಹೇಳುತ್ತವೆ. ಶಿಕ್ಷಣದ ಮೇಲಿನ ಖರ್ಚು 3.25ಶೇ.ದಿಂದ 3.11 ಶೇ.ಕ್ಕೆ ಇಳಿದಿದೆ; ಆರೋಗ್ಯದ ಮೇಲಿನ ಖರ್ಚು 1.5ಶೇ.ದಿಂದ 1.3 ಶೇ.ಕ್ಕೆ ಇಳಿದಿದೆ.

ಹೀಗಿದೆ 'ಆಮ್ ಆದ್ಮಿ'ಯ ಬಗ್ಗೆ ಯುಪಿಎ-2 ಸರಕಾರದ ಕಾಳಜಿ. ಬಹುಶಃ ಬಜೆಟ್ ಭಾಷಣದಲ್ಲಿ ಹೇಳಿರುವಂತೆ 'ದಯಾಮಯಿಯಾಗಿರಲು ಕ್ರೂರವಾಗಿರಬೇಕಾದ' ಪರಿಯೆಂದರೆ ಇದೇ- ಶ್ರೀಮಂತರಿಗೆ ದಯಾಮಯಿಯಾಗಲು ಬಡವರ ವಿಷಯದಲ್ಲಿ ಕ್ರೂರಿಯಾಗಬೇಕು-ಇದು ನವ-ಉದಾರವಾದದ ತತ್ವ! ●

ಸ್ವರ್ಗಕ್ಕೆ ದಾರಿ?

ಸ್ವರ್ಗಕ್ಕೆ ದಾರಿಯನು ತೋರಿಸುವೆ ಎಂದು
ಪುರೋಹಿತ ಪ್ರವಚನ ನೀಡಿದನು ಅಂದು
ಕೊನೆಯಲ್ಲಿ ಅವನೇನೆ ಅಲ್ಲಿಯೇ ಮತ್ತೆ
ಅಂಚೆ ಕಛೇರಿಗೆ ದಾರಿ ಕೇಳಿದನು ಗೊತ್ತೆ?

– ವಿಡಂಬಾರಿ

ಯುಪಿಎ ದರ್ಬಾರ್

ತಲಾ ಆಹಾರ ಧಾನ್ಯಗಳ ಲಭ್ಯತೆಯನ್ನು ಕಡಿಮೆಗೊಳಿಸಿದ 'ಆರ್ಥಿಕ ಸುಧಾರಣೆಗಳು'

ದೇಶದ ಜಿಡಿಪಿಯ ಬೆಳವಣಿಗೆ ದರದಲ್ಲಿ 'ಅಮೋಘ ಹೆಚ್ಚಳ' ತಂದಿದೆ ಎಂದು ಹೇಳಿಕೊಳ್ಳುವ ಮನಮೋಹನ್ ಸಿಂಗ್ ನೇತೃತ್ವದ 'ಸುಧಾರಣೆ'ಗಳ ಎರಡು ದಶಕಗಳ ಪ್ರತಿ ಪಂಚವಾರ್ಷಿಕ ಅವಧಿಯಲ್ಲಿ ತಲಾ ಸರಾಸರಿ ಆಹಾರ ಧಾನ್ಯಗಳ ಲಭ್ಯತೆ ನಿರಂತರವಾಗಿ ಕಡಿಮೆಯಾಗುತ್ತಾ ಬಂದಿದೆ; ಗಮನಿಸಬೇಕಾದ ಸಂಗತಿಯೆಂದರೆ ಈ 'ಸುಧಾರಣೆಗಳು' ಆರಂಭವಾಗುವ ಹಿಂದಿನ ಎರಡು ದಶಕಗಳ ಪಂಚವಾರ್ಷಿಕ ಅವಧಿಗಳಲ್ಲಿ ಈ ಲಭ್ಯತೆ ಸತತವಾಗಿ ಏರುತ್ತ ಬಂದಿತ್ತು. ಪ್ರಖ್ಯಾತ ಪತ್ರಕರ್ತ ಈ ಕುರಿತು ಕಲೆ ಹಾಕಿದ ಅಂಕಿ-ಅಂಶಗಳು ಹೀಗಿವೆ:

ತಲಾ ದೈನಂದಿನ ಲಭ್ಯತೆ (ಗ್ರಾಂಗಳಲ್ಲಿ)

	ಧಾನ್ಯಗಳು	ಬೇಳೆ ಕಾಳುಗಳು	ಒಟ್ಟು
1972–1991ರ 'ಸುಧಾರಣಾ' ಪೂರ್ವ ಅವಧಿ			
ಸರಾಸರಿ 1972–1976	383.9	43.8	433.7
ಸರಾಸರಿ 1977–1981	407.5	40.4	447.9
ಸರಾಸರಿ 1982–1986	420.2	40.6	460.8
ಸರಾಸರಿ 1987–1991	440.7	39.6	480.3
1992–2010 ರ 'ಸುಧಾರಣಾ'ಅವಧಿ			
ಸರಾಸರಿ 1992–1996	439.3	35.6	474.9
ಸರಾಸರಿ 1997–2001	423.7	33.6	457.3
ಸರಾಸರಿ 2002–2006	419.6	32.9	452.4
ಸರಾಸರಿ 2006–2010*	403.9	36.5	440.4

(*2011 ರಂಕಿ-ಅಂಶಗಳು ಸಿಕ್ಕಿರಲಿಲ್ಲ. ಆದ್ದರಿಂದ ಇದು ನಾಲ್ಕು ವರ್ಷಗಳ ಸರಾಸರಿ)

ಮೂಲ: ಭಾರತದ ಆರ್ಥಿಕ ಸರ್ವೇಕ್ಷಣೆ 2011–2012, ಕೋಷ್ಟಕ 1.17

ಈ ರೀತಿ ತಲಾ ಆಹಾರ ಲಭ್ಯತೆ ಕಡಿಮೆಯಾಗಲು ಜನಸಂಖ್ಯೆ ಹೆಚ್ಚಳವೇ ಕಾರಣ ಹೊರತು ಸರಕಾರ ಆರ್ಥಿಕ ಧೋರಣೆಗಳಲ್ಲ ಎಂಬ ತರ್ಕಕ್ಕೂ ಅವಕಾಶವಿಲ್ಲ ಎನ್ನುತ್ತಾರೆ. ಏಕೆಂದರೆ, ಜನಸಂಖ್ಯೆಯ ಹೆಚ್ಚಳದ ದರ 'ಸುಧಾರಣಾ' ಪೂರ್ವ ಅವಧಿಯಲ್ಲಿಯೇ ಹೆಚ್ಚಿತ್ತು, ಮತ್ತು ಆಗ ಮಾತ್ರ ಅದು ಆಹಾರ ಉತ್ಪಾದನೆಯ ಹೆಚ್ಚಳದ ದರಕ್ಕಿಂತ ಕಡಿಮೆಯಿತ್ತು. ಆದರೆ 'ಸುಧಾರಣೆ'ಯ ಅವಧಿಯಲ್ಲಿ ಜನಸಂಖ್ಯಾ ಹೆಚ್ಚಳದ ದರ ಬಹಳಷ್ಟು ಇಳಿದರೂ, ಆಹಾರ ಉತ್ಪಾದನೆಯ ಹೆಚ್ಚಳದ ದರ ಬಹಳಷ್ಟು ಕಡಿಮೆಯಾಗಿತ್ತು. ಈ ಅಂಕಿ-ಅಂಶಗಳನ್ನು ನೋಡಿ:

ವಾರ್ಷಿಕ ಹೆಚ್ಚಳ ದರ

ಅವಧಿ	ಜನಸಂಖ್ಯೆ	ಆಹಾರ ಉತ್ಪಾದನೆ
1961–1971	2.24	2.83
1971–1981	2.23	1.80
1981–1991	2.16	3.13
1991–2001	1.95	1.1
2001–2011	1.65	1.03*

(*ಕೊನೆಯ ದಶಕದ ಆಹಾರ ಉತ್ಪಾದನೆ ದರ 2010ರ ವರೆಗೆ ಮಾತ್ರ, ಏಕೆಂದರೆ 2011ರ ಅಂಕಿ-ಅಂಶ ಇನ್ನೂ ಸಿಕ್ಕಿಲ್ಲ.)

ಈ ಅಂಕಿ-ಅಂಶಗಳನ್ನು ನೋಡಿದ ನಂತರ ನವ-ಉದಾರವಾದಿಗಳು ಇನ್ನೊಂದು ತರ್ಕ ಮುಂದಿಡುತ್ತಾರೆ- ಜನಗಳ ಸ್ಥಿತಿ ಎಷ್ಟು ಉತ್ತಮಗೊಂಡಿದೆಯೆಂದರೆ, ಅವರಿಗೀಗ ಧಾನ್ಯಗಳು, ಬೇಳೆ ಕಾಳುಗಳ ಅಗತ್ಯ ಕಡಿಮೆ, ಅವರಿಗೆ ಇನ್ನೂ ಉತ್ತಮ ಆಹಾರ ಲಭ್ಯವಾಗಿದೆ! ಹಾಗಿದ್ದರೆ ನಾವು ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಕಳೆದ 15 ವರ್ಷಗಳಲ್ಲಿ 81 ದೇಶಗಳಲ್ಲಿ 60ನೇ ಸ್ಥಾನದಲ್ಲಿರುವ ರ್‍ವಾಂಡಾದಂತಹ ಬಡ ಆಫ್ರಿಕನ್ ದೇಶಕ್ಕಿಂತಲೂ ಕೆಳಕ್ಕೆ 67ನೇ ಸ್ಥಾನಕ್ಕೆ ಏಕೆ ಇಳಿದಿದ್ದೇವೆ ಎಂಬುದಕ್ಕೆ ಅವರ ಬಳಿ ಉತ್ತರವಿಲ್ಲ.

ಯುಪಿಎ-2 ಆಹಾರ ಮಂತ್ರಿಗಳ ಹೇಳಿಕೆಗಳ ಪ್ರಕಾರ ಆಹಾರ ಉತ್ಪಾದನೆಯಲ್ಲಿ ಹೆಚ್ಚಳವಾಗುತ್ತಿದೆ, ಆದರೆ ವಾಸ್ತವವಾಗಿ ತಲಾ ಉತ್ಪಾದನೆ ಇಳಿಯುತ್ತಿದೆ. ಇವೆಲ್ಲ ಕಳೆದ 20 ವರ್ಷಗಳಲ್ಲಿ ಆಹಾರ ಧಾನ್ಯಗಳ ಬದಲು ವಾಣಿಜ್ಯ ಬೆಳೆಗಳಿಗೆ ಪ್ರೋತ್ಸಾಹ ಕೊಟ್ಟ, ಆಹಾರ ಧಾನ್ಯಗಳ ಉತ್ಪಾದನೆಯನ್ನು ನಷ್ಟದಾಯಕಗೊಳಿಸಿದ, ಸಣ್ಣ ಹಿಡುವಳಿದಾರರ ಬದಲು ಕಾರ್ಪೊರೇಟ್ ಹಿತಗಳ ಪರವಾದ ಹಾಗೂ ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆ ಕುಸಿಯುವಂತೆ ಮಾಡಿದ ಧೋರಣೆಗಳ ದುಷ್ಫಲ. ಆದ್ದರಿಂದಲೇ ಮಾನ್ಯ ಆಹಾರ ಮಂತ್ರಿಗಳು ಒಟ್ಟು ಆಹಾರ ಉತ್ಪಾದನೆಯ ಬಗ್ಗೆಯಷ್ಟೇ ಮಾತಾಡುತ್ತಾರೆ, ತಲಾ ಉತ್ಪಾದನೆ ಆತಂಕಕಾರಿಯಾಗಿ ಇಳಿಯುತ್ತಿರುವುದರ ಬಗ್ಗೆ ಮೌನವಾಗಿದ್ದಾರೆ ಎನ್ನುತ್ತಾರೆ ಪಿ. ಸಾಯಿನಾಥ್.

ಆಂಧ್ರ ಪ್ರದೇಶ

ಎಸ್‌ಸಿ-ಎಸ್‌ಟಿ ಉಪ ಯೋಜನೆಗೆ ಕಾಯ್ದೆ ನಿರಂತರ ಐಕ್ಯ ಚಳವಳಿಗೆ ಸಂದ ಜಯ


2007ರ ಕೆವಿಪಿಎಸ್‌ನ ಹೋರಾಟ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದ ಉಪ ಯೋಜನೆಗೆ ಸಮರ್ಪಕ ಜಾರಿಗೆ ಸಂಬರಧಿಸಿದ ಕಾಯ್ದೆಯನ್ನು ರೂಪಿಸುವ ನಿರಂತರ ಹಾಗೂ ಐಕ್ಯ ಹೋರಾಟಕ್ಕೆ ಆಂಧ್ರ ಪ್ರದೇಶದಲ್ಲಿ ಮಹತ್ವದ ಜಯ ಲಭಿಸಿದೆ. 100ಕ್ಕೂ ಹೆಚ್ಚು ದಲಿತ, ಬುಡಕಟ್ಟು, ಕಾರ್ಮಿಕ, ನೌಕರರ, ಎನ್‌ಜಿಓ ಹಾಗೂ ಇತರ ಸಾಮೂಹಿಕ ಸಂಘಟನೆಗಳ ನ್ನೊಳಗೊಂಡ ಜಂಟಿ ಕ್ರಿಯಾ ಸಮಿತಿಯ ನೇತೃತ್ವದಲ್ಲಿ ಈ ಬೃಹತ್ ಹೋರಾಟ ನಡೆದಿತ್ತು.

ಕಾಂಗ್ರೆಸ್ ಹೊರತುಪಡಿಸಿದ ಎಲ್ಲ ರಾಜಕೀಯ ಪಕ್ಷಗಳೂ ಈ ಹೋರಾಟ ವನ್ನು ಬೆಂಬಲಿಸಿತ್ತು. ಸದನದ ಹೊರಗೆ ನಡೆದ ಬೃಹತ್ ಹೋರಾಟಕ್ಕೆ ಸದನದಲ್ಲಿ ರಾಜಕೀಯ ಪಕ್ಷಗಳು ತೀವ್ರ ಒತ್ತಡವನ್ನೂ ಹೇರಿತು. ಮಾರ್ಚ್ 26ರಂದು ಪ್ರತ್ಯೇಕ ಸಭೆ ಕರೆಯುವಂತೆ ಆಡಳಿತಾರೂಢ ಪಕ್ಷದ ಎಸ್‌ಸಿ, ಎಸ್‌ಟಿ ಸಚಿವರು, ಶಾಸಕರೂ ಒತ್ತಡ ಹೇರಿದರು. ಇದೆಲ್ಲದರ ಫಲವಾಗಿ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ ಮಾರ್ಚ್ 27ರಂದು ಸದನದಲ್ಲಿ ಪ್ರತ್ಯೇಕ ಕಾಯ್ದೆ ರೂಪಿಸುವ ಘೋಷಣೆ ಮಾಡಿದರು. ಜನಪರ ಚಳವಳಿಗೆ ಮಹೋನ್ನತ ಗೆಲುವು ಸಿಕ್ಕಿತು.

ಕಾಯಿದೆಯನ್ನು ರೂಪಿಸಲು ಸಂಪುಟ ಉಪಸಮಿತಿ ರಚಿಸಲಾಗಿದ್ದು, ಎರಡು-ಮೂರು ತಿಂಗಳಲ್ಲಿ ಕರಡು ಮಸೂದೆಯನ್ನು ಸದನದಲ್ಲಿ ಮಂಡಿಸಲಾಗುವುದು ಎಂದು ಸರ್ಕಾರ ಭರವಸೆ ನೀಡಿತು. ಇದಕ್ಕಾಗಿ ಎರಡು ದಿನದ ವಿಶೇಷ ಅಧಿವೇಶನ ಕರೆಯಲೂ ನಿರ್ಧರಿಸಲಾಯಿತು. ಒಂದು ವೇಳೆ ಈ ಮಸೂದೆ ಅಂಗೀಕಾರವಾದರೆ ದೇಶದ ಇತಿಹಾಸದಲ್ಲೇ ಇಂಥ ಕಾಯ್ದೆ ಜಾರಿಗೊಳಿಸಿದ ಮೊಧಲ ರಾಜ್ಯವಾಗಿ ಆಂಧ್ರ ಪ್ರದೇಶ ದಾಖಲೆ ನಿರ್ಮಿಸಲಿದೆ.

ಈ ದಾಖಲೆಯ ಹಿಂದೆ ನೆತ್ತರು ಸುರಿಸಿದ ಹೋರಾಟವಿದೆ. ಅದೆಷ್ಟೋ ನಾಯಕರು, ಕಾರ್ಯಕರ್ತರು ಬಸಿದ ಬೆವರ ಹನಿಗಳು ಇವೆ. ಸರ್ಕಾರಕ್ಕೆ ಬಿಸಿ ತರಲು ನಡೆದ ಹೋರಾಟದ ಎಷ್ಟೋ ಮಾನವ ದಿನಗಳು ಇವೆ. ತ್ಯಾಗ-ಬಲಿದಾನಗಳ ಸಾಕಾರ ರೂಪವಾಗಿ ಈ ಸಾಧನೆ ಮೈವೆತ್ತಿನಿಂತಿದೆ.

ಮಾರ್ಚ್ 23ರಂದು 10 ಸಂಘಟನೆಗಳ 11 ನಾಯಕರು ನಡೆಸಿದ 72 ಗಂಟೆಗಳ ಉಪವಾಸ ಸತ್ಯಾಗ್ರಹ ಹೋರಾಟಕ್ಕೆ ಬಿಸಿ ಮುಟ್ಟಿಸಿತ್ತು. ಇದಕ್ಕೆ ಸರ್ಕಾರ ಮಣಿಯಲಿಲ್ಲ. ಸತ್ಯಾಗ್ರಹಕ್ಕೆ ಮುಂದಾದಾಗ ಸಚಿವರ ನಿಯೋಗವೊಂದು ಹೋರಾಟ ಕೈಬಿಡುವಂತೆ ಮನವಿ ಮಾಡಿತು. ಆದರೆ, ಸತ್ಯಾಗ್ರಹದ ಜೊತೆಗೆ ಮಾರ್ಚ್ 25ಕ್ಕೆ ಅಸೆಂಬ್ಲಿ ಚಲೋ ಕಾರ್ಯಕ್ರಮ ನಡೆಯಿತು.

ಮಾರ್ಚ್ 26ರಂದು ದಲಿತರು ಮತ್ತು ಬುಡಕಟ್ಟು ಸಮುದಾಯದ ಸಾವಿರಾರು ಮಂದಿ ರಾಜ್ಯದ ವಿವಿಧ ಪ್ರದೇಶಗಳಿಂದ ರಾಜಧಾನಿಗೆ ಆಗಮಿಸಿದರು. ಸಭೆಗೆ ಪೂರ್ವಭಾವಿಯಾಗಿ ಬಿಗಿ ಪೊಲೀಸ್ ಭದ್ರತೆಯನ್ನು ಕೈಗೊಳ್ಳಲಾಯಿತು. ಧಮನಿತರ ಬೃಹತ್ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಬಿ.ವಿ. ರಾಘವುಲು ಹೋರಾಟಕ್ಕೆ ಮತ್ತಷ್ಟು ಪ್ರಖರತೆ ನೀಡಿದರು. ಉಪ ಯೋಜನೆಯ ಹಣವನ್ನು ಮತ್ತೊಂದು ಕಾರಣಕ್ಕೆ ಬಳಸುವ ಮೂಲಕ ರಾಜ್ಯ ಸರ್ಕಾರ ತನ್ನ ನೈಜ ಹಿತಾಸಕ್ತಿಯನ್ನು ತೋರಿಸಿದೆ. ಎಸ್‌ಸಿ ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಪ್ರಕಾರ ರಾಜ್ಯ ಸರ್ಕಾರದ ವಿರುದ್ಧ ಪ್ರಕರಣ ದಾಖಸಬೇಕಾಗಿದೆ ಎಂದು ಅವರು ಕರೆ ನೀಡಿದರು.

ಪ್ರತಿಪಕ್ಷ ನಾಯಕ ಚಂದ್ರಬಾಬು ನಾಯ್ಡು, ಸಿಪಿಐ, ತೆಲಂಗಾಣ ರಾಷ್ಟ್ರ ಸಮಿತಿ, ಬಿಜೆಪಿ, ಸಿಪಿಐಎಂಎಲ್ ಮತ್ತು ವೈಎಸ್‌ಆರ್ ಕಾಂಗ್ರೆಸ್‌ನ ನಾಯಕರೂ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು.

ಅಗ್ರ ನಾಯಕರ ಸತ್ಯಾಗ್ರಹ ಮತ್ತು ವಿಧಾನಸೌಧ ಚಲೋ ಹೋರಾಟಕ್ಕೆ ಮತ್ತಷ್ಟು ವೇಗ ನೀಡಿದೆ. ಈ ಪರಿಸ್ಥಿತಿಯಲ್ಲೇ ಸರ್ಕಾರ ಮಾರ್ಚ್ 27ರಿಂದ ಅಧಿವೇಶನ ಕರೆಯಿತು. ಇದಾದ ಕೆಲವೇ ಕ್ಷಣಗಳಲ್ಲಿ ಉಪ ಮುಖ್ಯಮಂತ್ರಿ ಡಿ.ರಾಜಾ ನರಸಿಂಹ ಸರ್ಕಾರದ ನಿರ್ಧಾರವನ್ನು ಪ್ರಕಟಿಸಿದರು.

ಹೋರಾಟದ ಇತಿಹಾಸ

2002ರಲ್ಲಿ ಕೆವಿಪಿಎಸ್ ಈ ಹೋರಾವನ್ನು ಕೈಗೆತ್ತಿಕೊಂಡಿತ್ತು. ದಲಿತರ ಬುಡಕಟ್ಟು ಸಮುದಾಯದ ಶ್ರೇಯೋಭಿವೃದ್ಧಿಗೆ ರೂಪಿಸಲಾದ ಉಪ ಯೋಜನೆಯ ಫಲ

ಬಲಿಷ್ಠ ಅಖಿಲ ಭಾರತ ಪಕ್ಷ ಕಟ್ಟೋಣ

ಪುಟ 9ರಿಂದ......

ಪ್ರಜಾಪ್ರಭುತ್ವ ಶಕ್ತಿಗಳನ್ನು ಅಣಿನೆರೆಸುವ ಭರವಸೆಯನ್ನು ಅಲ್ಲಿಯ ಜನತೆಗೆ ಮತ್ತು ಪಕ್ಷಕ್ಕೆ ನೀಡುತ್ತದೆ ಎಂದರು.

ಆರ್ಥಿಕ ಧೋರಣೆಗಳ ವಿಷಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಏನೂ ವ್ಯತ್ಯಾಸವಿಲ್ಲ. ಎರಡೂ ನವ-ಉದಾರವಾದವನ್ನು ಅಪ್ಪಿಕೊಂಡಿವೆ. ಭ್ರಷ್ಟಾಚಾರದ ವಿಷಯದಲ್ಲೂ ಇಬ್ಬರೂ ಒಂದೇ. ಇತ್ತೀಚಿನ ಬೆಳವಣಿಗೆಗಳು ಯುಪಿಎ ಮತ್ತು ಎನ್‌ಡಿಎ ಎರಡೂ ಕ್ರೋಡೀಕರಣಗೊಳ್ಳಲಾರದೆ ವಿಫಲವಾಗಿರುವುದು ಕಂಡು ಬಂದಿದೆ. ಪ್ರಸಕ್ತ ವ್ಯವಸ್ಥೆಯ ದಿವಾಳಿಕೋರತನ, ಹೊಲಸುತನ ಹೆಚ್ಚೆಚ್ಚು ಬಯಲಾಗುತ್ತಿರುವಂತೆ, ಜನತೆ ಒಂದು ಪರ್ಯಾಯವನ್ನು ಹುಡುಕುತ್ತಿದ್ದಾರೆ. ಈ ಪರ್ಯಾಯವನ್ನು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಮಾತ್ರ ಕೊಡಲು ಸಾಧ್ಯ ಎಂಬುದು ನಮ್ಮ ಭಾವನೆ. ಈ ಪರ್ಯಾಯವನ್ನು ಕಟ್ಟಲು ದೇಶಾದ್ಯಂತ ಸಿಪಿಐ(ಎಂ) ನ್ನು ಬಲಪಡಿಸಬೇಕಾಗಿದೆ. ಇದಕ್ಕಾಗಿ ಸಿಪಿಐ(ಎಂ) ಕಾರ್ಮಿಕ ವರ್ಗ, ರೈತಾಪಿಗಳು, ಕೃಷಿ ಕೂಲಿಕಾರರು, ಯುವಜನತೆ ಮತ್ತು ಇತರ ದುಡಿಯುವ ಜನವಿಭಾಗಗಳ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ಹೋರಾಡುತ್ತದೆ, ಸಾಮಾಜಿಕ ದಮನ ಎದುರಿಸುತ್ತಿರುವ ದಲಿತರು, ಆದಿವಾಸಿಗಳು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಹಕ್ಕುಗಳನ್ನು ನಿರಂತರವಾಗಿ ಪ್ರತಿಪಾದಿಸುತ್ತದೆ ಎಂದು ಪ್ರಕಾಶ ಕಾರಟ್ ಹೇಳಿದರು.

ಮಹಾಧಿವೇಶನಕ್ಕೆ ಸಿದ್ಧತೆ

ಇದಕ್ಕೆ ಮೊದಲು ಸ್ವಾಗತ ಭಾಷಣ ಮಾಡುತ್ತಾ ಸ್ವಾಗತ ಸಮಿತಿಯ ಅಧ್ಯಕ್ಷರಾದ ಪಿನರಾಯಿ ವಿಜಯನ್ ಮಾತನಾಡಿದರು. ಕೇರಳದಲ್ಲಿ ಸಿಪಿಐ(ಎಂ)ನ ಮಹಾಧಿವೇಶನ ನಡೆಯುತ್ತಿರುವುದು ಇದು ಮೂರನೇ ಬಾರಿ. ಸಿಪಿಐ(ಎಂ) ಸ್ಥಾಪನೆಯ ಮೊದಲು ಅವಿಭಜಿತ ಕಮ್ಯುನಿಸ್ಟ್ ಪಕ್ಷದ ನಾಲ್ಕನೇ ಮಹಾದಿವೇಶನ 1956ರಲ್ಲಿ ಇದೇ ರಾಜ್ಯದಲ್ಲಿ ನಡೆದಿತ್ತು. ಈ ಮಹಾಧಿವೇಶನ ಕೇರಳದಲ್ಲಿ ನಡೆಯುತ್ತಿರುವುದು 22 ವರ್ಷಗಳ ನಂತರ. 1989 ರಲ್ಲಿ ಕೇರಳದ ರಾಜಧಾನಿ ತಿರುವನಂತಪುರದಲ್ಲಿ ಸಿಪಿಐ(ಎಂ)ನ 13ನೇ ಮಹಾಧಿವೇಶನ ನಡೆದಿತ್ತು. ಅದಕ್ಕೆ ಮೊದಲು 1968ರಲ್ಲಿ ಕೊಚ್ಚಿಯಲ್ಲಿ 8ನೇ ಮಹಾಧಿವೇಶನ ನಡೆದಿತ್ತು. ಕೋಳಿಕ್ಕೋಡ್ ದೇಶದ ಕಮ್ಯುನಿಸ್ಟ್ ಚಳುವಳಿಯ ಇತಿಹಾಸದಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಕೇರಳದಲ್ಲಿ ಮೊದಲ ಕಮ್ಯುನಿಸ್ಟ್ ಸೆಲ್ ಆರಂಭವಾದದ್ದು ಇದೇ ಪಟ್ಟಣದಲ್ಲಿ. ಕಾಂ. ಸುಂದರಯ್ಯನವರು ವಹಿಸಿದ ಮುತುವರ್ಜಿಯಿಂದಾಗಿ ಇಎಂಎಸ್, ಕೃಷ್ಣ ಪಿಳ್ಳೆ, ಕೆ.ದಾಮೋದರನ್ ಮತ್ತು ಎನ್ ಸಿ ಶೇಖರ್ ಇದ್ದ ಈ ಸೆಲ್ 1937 ರಲ್ಲಿ ಎಸ್.ವಿ ಘಾಟೆಯವರ ಸಮ್ಮುಖದಲ್ಲಿ ರಚನೆಗೊಂಡಿತು. ಕಳೆದ ಮೂರೂವರೆ ದಶಕಗಳಿಂದ ಇಲ್ಲಿಯ ಮಹಾನಗರ ಪಾಲಿಕೆ ಎಡಪಕ್ಷಗಳ ಆಡಳಿತದಲ್ಲಿದೆ.

ಈ ಇತಿಹಾಸವನ್ನು ನೆನಪಿಸಿದ ಪಿನರಾಯಿ ವಿಜಯನ್ ಈ 20ನೇ ಮಹಾಧಿವೇಶನ ಈ ರಾಜ್ಯದಲ್ಲಿ ಮಾತ್ರವಲ್ಲ, ದೇಶಾದ್ಯಂತ ಹೋರಾಟದ ಒಂದು ಹೊಸ ಪರ್ವಕ್ಕೆ, ಕಮ್ಯುನಿಸ್ಟ್ ಆಂದೋಲನದ ಬೆಳವಣಿಗೆಗೆ ನಾಂದಿಯಾಗಲಿದೆ ಎಂದು ಹಾರೈಸಿದರು. ದುಡಿಯುವ ಜನಗಳ ಧೀರ ಹೋರಾಟಗಳ, ಅದೇ ರೀತಿ ಭಾವೈಕ್ಯತೆಯ ಪರಂಪರೆಯಿರುವ ಈ ಪಟ್ಟಣದಲ್ಲಿ ಪಕ್ಷದ ಮಹಾಧಿವೇಶನದ ಸಿದ್ಧತೆಗೆ ಹಮ್ಮಿಕೊಂಡ ಕಾರ್ಯಕ್ರಮಗಳಲ್ಲಿ ಈ ಪ್ರದೇಶದ ವೀರ ಪರಂಪರೆಯನ್ನು ಮತ್ತು ಜನಚಳುವಳಿಗಳ ಸಾಧನೆಗಳನ್ನು ಬಳಸಿಕೊಂಡ ಪರಿಯ ಒಂದು ಪಕ್ಷಿನೋಟವನ್ನು ನೀಡಿದರು. ಈ ಜಿಲ್ಲೆಯಲ್ಲಿನ ಒಟ್ಟು 2500 ಪಕ್ಷದ ಶಾಖೆಗಳಲ್ಲಿ ಸದಸ್ಯರ ಮತ್ತು ಹಿತೈಷಿಗಳ ಕುಟುಂಬ ಸಮಾರಂಭಗಳನ್ನು ಏರ್ಪಡಿಸಲಾಯಿತು. ನಂತರ ಎರಡು-ಮೂರು ಶಾಖೆಗಳನ್ನು ಸೇರಿಸಿ ಸಾಮೂಹಿಕ ಕುಟುಂಬ ಸಮಾರಂಭಗಳು ಮತ್ತು ಸಾರ್ವಜನಿಕ ರ್‍ಯಾಲಿಗಳನ್ನು ನಡೆಸಲಾಯಿತು. ಮಹಾಧಿವೇಶನದ ಭಾಗವಾಗಿ ಏರ್ಪಡಿಸಿದ ಇತಿಹಾಸ ಪ್ರದರ್ಶನಕ್ಕೆ ಸುಮಾರು ಎರಡು ಲಕ್ಷ ಜನ ಭೇಟಿ ನೀಡಿದ್ದಾರೆ. 60 ಪ್ರದೇಶ ಮಟ್ಟಗಳ ವಿಚಾರ ಸಂಕಿರಣಗಳನ್ನು ನಡೆಸಲಾಯಿತು. ಇದರಲ್ಲಿ 50,000 ಮಂದಿ ಭಾಗವಹಿಸಿದ್ದಾರೆ. ಇದಲ್ಲದೆ ವಿವಿಧ ಜನಸಮೂಹಗಳ ಮತ್ತು ವರ್ಗಗಳ ಜನರನ್ನು, ತುರ್ತು ಪರಿಸ್ಥಿತಿಯ ದಮನಕ್ಕೆ ಒಳಗಾದವರು ಮುಂತಾದವರ ಸಭೆಗಳನ್ನು ನಡೆಸಲಾಯಿತು. ಕಾರ್ಮಿಕರು, ರೈತರು, ಶಿಕ್ಷಕರು, ಯುವಜನ ಮತ್ತು ವಿದ್ಯಾರ್ಥಿಗಳನ್ನು ಸಂಘಟಿಸಲು ದುಡಿದ ಹಿರಿಯರ ಸಮಾರಂಭಗಳನ್ನು ನಡೆಸಲಾಯಿತು.

ಎರಡು ತಿಂಗಳ ಕಾಲ ಮಹಾಧಿವೇಶನದ ಸಿದ್ಧತೆಗೆ ಸಾಂಸ್ಕೃತಿಕ ಮೆರುಗನ್ನು ನೀಡಿದ ನೂರಾರು ಕಲಾವಿದರು, ಶಿಲ್ಪಿಗಳು, ಚಿತ್ರಕಾರರು, ಸಂಗೀತಗಾರರು, ನಟರು ಮತ್ತು ನಾಟಕಕಾರರಿಗೆ ಪಿನರಾಯಿ ವಿಜಯನ್ ಕೃತಜ್ಞತೆ ಸಲ್ಲಿಸಿದರು.

ನಂತರ ಉದ್ಘಾಟನಾ ಸಮಾರಂಭದಲ್ಲಿ ಆಹ್ವಾನಿತರಾಗಿ ಭಾಗವಹಿಸಿದ ಸಿಪಿಐನ ಹಿರಿಯ ಮುಖಂಡ ಎ.ಬಿ.ಬರ್ಧನ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಎಡಪಕ್ಷಗಳಿಂದ ಮಾತ್ರವೇ

ಸಮಾರಂಭದ ಅಧ್ಯಕ್ಷತೆ ವಹಿಸಿದ ಎಸ್. ರಾಮಚಂದ್ರನ್ ಪಿಳ್ಳೆಯವರು ಕಮ್ಯುನಿಸ್ಟ್ ಆಂದೋಲನದ ಇತಿಹಾಸವನ್ನು ನೆನಪಿಸುತ್ತ, ಕಾರ್ಪೊರೇಟ್ ಮಾಧ್ಯಮಗಳು ಮತ್ತು ಆಳುವ ವರ್ಗಗಳ ಪಂಡಿತರುಗಳು ಸಿಪಿಐ(ಎಂ) ಮತ್ತು ಎಡಪಂಥೀಯರು ಭಾರತದ ರಾಜಕಾರಣದಲ್ಲಿ ತಮ್ಮ ಮಹತ್ವ ಕಳೆದುಕೊಂಡಿದ್ದಾರೆ ಎಂಬ ಅಪಪ್ರಚಾರದಲ್ಲಿ ತೊಡಗಿರುವುದನ್ನು ನೆನಪಿಸಿದರು. ಆದರೆ ನಮ್ಮ ದೇಶದಲ್ಲಿನ ಬೆಳವಣಿಗೆಗಳು ನಿಜವಾಗಿಯೂ ಸಿಪಿಐ(ಎಂ) ಮತ್ತು ಎಡಪಕ್ಷಗಳ ಮಹತ್ವವನ್ನು ಮತ್ತೆ ಎಲ್ಲರ ಗಮನಕ್ಕೆ ತರುತ್ತಿವೆ. ನವ-ಉದಾರವಾದಿ ಆರ್ಥಿಕ ಧೋರಣೆಗಳ ವಿರುದ್ಧ ಎಡೆಬಿಡದೆ ಹೋರಾಡುತ್ತಿರುವವರು ಎಡಪಂಥೀಯರು ಮಾತ್ರ; ಸಾಮ್ರಾಜ್ಯಶಾಹಿ ಪ್ರಾಬಲ್ಯದ ವಿರುದ್ಧ, ರಾಷ್ಟ್ರೀಯ ಸಾರ್ವಭೌಮತೆಯ ರಕ್ಷಣೆಗಾಗಿ ಹೋರಾಡುತ್ತಿರುವವರು ಎಡಪಂಥೀಯರು ಮಾತ್ರವೇ; ಜನಸಾಮಾನ್ಯರಿಗಾಗಿ, ಅವರ ಭೂಮಿ, ಆಹಾರ, ಉದ್ಯೋಗ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ದುಡಿಯುತ್ತಿರುವವರು ಎಡಪಕ್ಷಗಳು ಮಾತ್ರ; ಕೋಮುವಾದವನ್ನು, ವಿಚ್ಛಿದ್ರಕಾರಿ ಶಕ್ತಿಗಳನ್ನು ಎದುರಿಸಿ ಜಾತ್ಯಾತೀತತೆಯನ್ನು ರಕ್ಷಿಸುತ್ತಿರುವವರು ಎಡಪಂಥೀಯರು ಮಾತ್ರ; ಸಿಪಿಐ(ಎಂ) ಮತ್ತು ಎಡಪಕ್ಷಗಳು ಮಾತ್ರವೇ ಈಗಿನ ಸನ್ನಿವೇಶದಲ್ಲಿ ನಿಜವಾದ ಪರ್ಯಾಯ ಕೊಡಲು ಸಾಧ್ಯ ಎಂದು ರಾಮಚಂದ್ರನ್ ಪಿಳ್ಳೆಯವರೂ ಒತ್ತಿ ಹೇಳಿದರು.

20ನೇ ಮಹಾಧಿವೇಶನ ರಾಜಕೀಯ ನಿರ್ಣಯ, ಸೈದ್ಧಾಂತಿಕ ನಿರ್ಣಯ ಮತ್ತು ಕೆಲವು ತಿದ್ದುಪಡಿಗಳನ್ನು ಚರ್ಚಿಸುವುದಲ್ಲದೆ ಪಕ್ಷವನ್ನು ದೇಶಾದ್ಯಂತ ವಿಸ್ತರಿಸುವ, ಬಲಿಷ್ಟಗೊಳಿಸುವ ಬಗ್ಗೆಯೂ ಚರ್ಚಿಸಲಿದೆ, ಈ ಮಹಾಧಿವೇಶನ ಸಿಪಿಐ(ಎಂ)ನ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಲಿದೆ ಎಂದು ಅವರು ಹೇಳಿದರು. ●

⇨

ಅವರಿಗೆ ದಕ್ಕುತ್ತಿಲ್ಲ. ಈ ಯೋಜನೆಯನ್ನು ಇತರ ಕಾರ್ಯಗಳಿಗೆ ಬಳಸಲಾಗುತ್ತಿದೆ. ಇದರಿಂದ ಫಲಾನುಭವಿಗಳಿಗೆ ಅನ್ಯಾಯವಾಗುತ್ತಿದೆ ಎಂದು ಕೆವಿಪಿಎಸ್ ಅಧ್ಯಯನ ಮಾಡಿ, ಯೋಜನೆಯ ಸಮರ್ಪಕ ಜಾರಿಗೆ ಕಾಯ್ದೆ ರೂಪಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿತ್ತು.

2003ರಲ್ಲೇ ವಿಧಾನಸೌಧ ಚಲೋ ನಡೆಯಿತು. 2004ರ ಅಸೆಂಬ್ಲಿ ಚುನಾವಣೆ ಸಂದರ್ಭದಲ್ಲೇ ಹೈದರಾಬಾದ್‌ನಲ್ಲಿ ಬೃಹತ್ ರ್‍ಯಾಲಿ ನಡೆಯಿತು. ಆಗಿನ ಪ್ರತಿಪಕ್ಷ ನಾಯಕ ವೈ.ಎಸ್. ರಾಜಶೇಖರ ರೆಡ್ಡಿ ಕಾಯ್ದೆಯನ್ನು ರೂಪಿಸಲು ತಮ್ಮ ಬದ್ಧತೆಯನ್ನು ಪ್ರಕಟಿಸಿದ್ದರು. ಆದರೆ, ಅಧಿಕಾರಕ್ಕೆ ಬರುತ್ತಲೇ ಅವರ ವರಸೆಯೂ ಬದಲಾಯಿತು. 2007ರ ವರೆಗೂ ಪ್ರಕ್ರಿಯೆ ಆರಂಭವಾಗಲಿಲ್ಲ. ಆಗ ಮತ್ತೆ ಹೋರಾಟ ಕೈಗೆತ್ತಿಕೊಂಡ ಕೆವಿಪಿಎಸ್, 2008ರಲ್ಲಿ ಬಿ.ವಿ. ರಾಘವುಲು ನೇತೃತ್ವದಲ್ಲಿ 25 ನಾಯಕರು ಉಪವಾಸ ಸತ್ಯಾಗ್ರಹ ನಡೆಸಿದರು. ಅಂದಿನ ಹೋರಾಟದ ತೀವ್ರತೆ ಎಷ್ಟಿತ್ತೆಂದರೆ, ಸದನದ ಕಲಾಪ ಎರಡು ದಿನಗಳ ಮಟ್ಟಿಗೆ ಸ್ಥಗಿತಗೊಂಡಿತ್ತು.

ಈ ಹೋರಾಟದ ಪರಿಣಾಮವಾಗಿ ಆಗಿನ ಸರ್ಕಾರ ಉಪ ಯೋಜನೆಯ ಜಾರಿಗೊಳಿಸುವ ಪ್ರಕ್ರಿಯೆಯನ್ನು ನೋಡಿಕೊಳ್ಳಲು ನೋಡೆಲ್ ಅಧಿಕಾರಿಗಳನ್ನು ನೇಮಿಸಿತು. ಆದರೆ, ಅವರಿಗೆ ಅಧಿಕಾರ ನೀಡದೆ ಕೈಕಟ್ಟಿ ಹಾಕಲಾಯಿತು.

ಈ ಹಿನ್ನೆಲೆಯಲ್ಲಿ ವಿಶಾಲ ತಳಹದಿಯ ಸಾಮೂಹಿಕ ಸಂಘಟನೆಗಳ ಐಕ್ಯ ವೇದಿಕೆಯನ್ನು ರಚಿಸಲಾಯಿತು. 100ಕ್ಕೂ ಹೆಚ್ಚು ಸಂಘಟನೆಗಳು, 20ಕ್ಕೂ ಹೆಚ್ಚು ಗಣ್ಯರು ಈ ಐಕ್ಯ ವೇದಿಕೆಯಡಿ ಒಂದಾದರು. ಹೋರಾಟಕ್ಕೆ ಕೈಜೋಡಿಸಿದರು. ಐಪಿಎಸ್, ಐಎಎಸ್, ಶಿಕ್ಷಣ ತಜ್ಞರು, ಬುದ್ಧಿ ಜೀವಿಗಳೂ ಹೋರಾಟದ ಭಾಗವಾದರು. ಜಿಲ್ಲಾ ಮಟ್ಟದಲ್ಲಿ, ಮಂಡಲ-ಗ್ರಾಮ ಮಟ್ಟದಲ್ಲಿ ಹೋರಾಟ ಸಮಿತಿಗಳನ್ನು ರಚಿಸಲಾಯಿತು.

ಇಂತಹ ಸಮರಧೀರ ಹೋರಾಟಕ್ಕೆ ಮಹೋನ್ನತ ಯಶಸ್ಸು ಲಭ್ಯವಾಗಿದೆ. ಇದು ಐಕ್ಯ ಹೋರಾಟಕ್ಕೆ ಸಂದ ಜಯ. ಸಾಮಾಜಿಕ ತಳಹದಿಯ ಇಂತಹ ಹೋರಾಟಗಳು ಇನ್ನಷ್ಟು ನಡೆಯಬೇಕಿದೆ. ಎಡ ಮತ್ತು ಸಾಮಾಜಿಕ ಶಕ್ತಿಗಳು ಒಂದಾಗಿ ಐಕ್ಯ ಶಕ್ತಿಯನ್ನು ಪ್ರದರ್ಶಿಸಬೇಕಾಗಿದೆ. ಈ ಮೂಲಕ ಜನಸಾಮಾನ್ಯರ ಆಶಾಕಿರಣಕ್ಕೆ ಕೊಂಡಿಯಾಗಬೇಕಿದೆ. ●

ಮನೆ ನಿವೇಶನ-ಭೂಮಿಗಾಗಿ ಹೋರಾಟ: ರಾಜ್ಯವ್ಯಾಪಿ ಜಾಥಾಗಳು

ಮೇ ತಿಂಗಳ 21 ರಿಂದ ಬೆಂಗಳೂರಿನಲ್ಲಿ ನಡೆಯುವ, ಮನೆ ಮತ್ತು ಭೂಮಿಗಾಗಿ ಅರ್ಜಿ ಸಲ್ಲಿಸಿದವರ ಅನಿರ್ದಿಷ್ಟ ಕಾಲದ ಬೃಹತ್ ಧರಣಿಯ ಪ್ರಚಾರಾರ್ಥವಾಗಿ ಎಪ್ರಿಲ್ 16 ರಿಂದ 4 ಪ್ರಾದೇಶಿಕ ಜಾಥಾಗಳು ನಡೆಯಲಿವೆ. ಇದಕ್ಕೂ ಮೊದಲು ತಾಲ್ಲೂಕು ಮಟ್ಟದ-ಹೋಬಳಿ ಮಟ್ಟದ-ಗ್ರಾಮ ಪಂಚಾಯಿತಿ ಮಟ್ಟದ ಅರ್ಜಿದಾರರ ಸಮಾವೇಶಗಳು ನಡೆಯಲಿವೆ. ಇದುವರೆಗೆ ಅರ್ಜಿಗಳನ್ನು ಹಾಕದಿದ್ದವರಿಂದ ಈ ಅವಧಿಯಲ್ಲಿ ಅರ್ಜಿಗಳನ್ನು ಹಾಕಿಸಲು ಏರ್ಪಾಡು ನಡೆಯಲಿವೆ. ಸಾಧ್ಯವಿದ್ದಲ್ಲೆಲ್ಲ ರೈತ ಸಂಘ ಮತ್ತು ಕೃಷಿ ಕೂಲಿಕಾರರ ಸಂಘಗಳು ಸಮಾವೇಶಗಳನ್ನು ಜಂಟಿಯಾಗಿ ಸಂಘಟಿಸಿ ಜಂಟಿ ಹೋರಾಟ ಸಮಿತಿಗಳನ್ನು ರಚಿಸಲಿವೆ. ಈ ಹೋರಾಟ ಸಮಿತಿಗಳು ಬೆಂಗಳೂರಿನಲ್ಲಿ ನಡೆಯಲಿರುವ ಹೋರಾಟದ ಬಗ್ಗೆ ಪ್ರಚಾರ ಹೋರಾಟದಲ್ಲಿ ಜನರನ್ನು ಬೆಂಗಳೂರಿನಲ್ಲಿ ಅಣಿ ನೆರೆಸುವ ಜವಾಬ್ದಾರಿ ನಿರ್ವಹಿಸಲಿವೆ.

ಜಾಥಾಗಳ ವಿವರ ಹೀಗಿದೆ :

ಜಾಥಾ 1 : ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿ. (ಜಾಥಾ ತಂಡದ ನಾಯಕ – ಯು. ಬಸವರಾಜ)

ಜಾಥಾ 2 : ವಿಜಾಪುರ, ಬೆಳಗಾವಿ, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ. ಜಾಥಾ ತಂಡದ ನಾಯಕ– ಬಿ.ಎಸ್.ಸೊಪ್ಪಿನ್

ಜಾಥಾ 3 : ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಕೊಡಗು ಮತ್ತು ಮೈಸೂರು ಜಿಲ್ಲೆಗಳಲ್ಲಿ. ಜಾಥಾ ತಂಡದ ನಾಯಕ – (ಶಾಂತರಾಮ ನಾಯಕ್)

ಜಾಥಾ 4 : ಮಂಡ್ಯ, ರಾಮನಗರ, ತುಮಕೂರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ. (ಜಾಥಾ ತಂಡದ ನಾಯಕ : ಪಿ.ಆರ್. ಸೂರಿ)

RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

ಪ್ರಾರಂಭವಾಗಿದೆ ಸಿಪಿಐ(ಎಂ) ಅಖಿಲ ಭಾರತ ಮಹಾಧಿವೇಶನ



ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಂ.ಎಸ್.ರಾಮಚಂದ್ರನ್‌ಪಿಳ್ಳೆ.


ಬಣ್ಣ ಬಣ್ಣ.... ಸಿಪಿಐ(ಎಂ) ಮಹಾಧಿವೇಶನದ ಬಣ್ಣ



ಮೀನುಗಾರರ ಬದುಕು.....


ಕೋಜಿಕೋಡ್‌ನ ಬೀದಿಗಳಲ್ಲಿ ಎದ್ದು ನಿಂತ ಕಲಾಕೃತಿ ಒಂದು


ಉದ್ಘಾಟನಾ ಸಮಾರಂಭದಲ್ಲಿ ಸಿಪಿಐನ ಹಿರಿಯ ಮುಖಂಡ ಎ.ಬಿ.ಬರ್ಧನ್....


ಹುತಾತ್ಮ ಸಂಗಾತಿಗಳಿಗೆ ಗೌರವ ವಂದನೆ....


ಸಮುದ್ರದ ಕಿನಾರೆಯಲ್ಲಿ ಕೆಂಬಾವುಟ


ಕ್ಯೂಬಾ ಕಮ್ಯೂನಿಸ್ಟ್ ಪಕ್ಷದ ಸೌಹಾರ್ದ ಪ್ರತಿನಿಧಿ ಕಾಂ.ಕಾರಟ್‌ರೊಂದಿಗೆ


ಕೋಝೀಕೋಡ್‌ನಲ್ಲಿ ಕೆಂಪುಕೋಟೆ

JANASHAKTHI KANNADA VARA PATRIKE: Printed by **G.N.NAGARAJ**, No.12, 18th Cross, S.R.Nagar, BANGALORE-560027
Published by: **G.N.NAGARAJ,** No 12. 18th Cross, S.R.Nagar, BANGALORE-560027, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** 12,18th Cross, S.R.Nagar, BANGALORE - 560027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor **S.Y.GURURSHANTH,** No12: 18th Cross, S.R.Nagar, BANGALORE - 560027
Editor: **S.Y.GURUSHANTH**